ರುಜುವಾತು-39

ಸಂ: ಯು.ಆರ್. ಅನಂತಮೂರ್ತಿ

Padmaja M.V.

ಸಂಪಾದಕ
ಯು.ಆರ್. ಅನಂತಮೂರ್ತಿ

ವ್ಯವಸ್ಥಾಪಕ ಸಂಪಾದಕ
ಪ್ರಸನ್ನ

ಛಾಯಾ ಚಿತ್ರಗ್ರಾಹಕ
ಕೆ. ಜಿ. ಸೋಮಶೇಖರ್

ಸಹ ಸಂಪಾದಕರು
ವಿಲಿಯಂ
ಬಂದಗದ್ದೆ ರಾಧಾಕೃಷ್ಣ

ವಿತರಣೆ
ಗಂಗಾಧರ ಎನ್. ಸಿ.
ಪ್ರಭಾಕರ ಸಾಂಶಿ
ಗೋಪಾಲಕೃಷ್ಣ. ಎಚ್. ಎಸ್.

ಅಕ್ಷರ ಜೋಡಣೆ
ಶ್ರೀಲಕ್ಷ್ಮಿ. ಎಸ್. ಭಟ್
ಸವಿತಾ ಕಾಕಾಲ್
ಪ್ರಮಥ. ಹೆಚ್. ಎನ್.

ಚಂದಾವಿವರ

ಬಿಡಿಪ್ರತಿ	:	೧೬ /-
ವಾರ್ಷಿಕ	:	೪೦ /-
(ಸಾಂಸ್ಥಿಕ)	:	೫೦ /-
ಠೇವಣಿ ಯೋಜನೆ	:	೫೦೦ /-

ಚಂದಾಹಣವನ್ನ ಮನಿ ಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸಬೇಕು. ಚೆಕ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸುವವರು ರೂ ೭/- ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಬೇಕು.

ಸೃಜನಶೀಲ ಹೊಸ ಪ್ರಯೋಗಗಳಿಗಾಗಿ, ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ,
ನಮ್ಮ ಸಾಮಾಜಿಕ ಸಂದರ್ಭದ ಶೋಧಕ್ಕಾಗಿ,
ತ್ರೈಮಾಸಿಕ ಪತ್ರಿಕೆ ..... ರುಜುವಾತು

ರುಜುವಾತು - ೪೯

ರುಜುವಾತು - ೪೯ ರ ಪ್ರಕಟಣೆಗೆ
ಕೆನರಾ ಬ್ಯಾಂಕಿನವರು
ನೀಡಿದ ಉದಾರ ಧನಸಹಾಯವನ್ನು
ಗೌರವ ಪೂರ್ವಕವಾಗಿ ನೆನೆಯುತ್ತೇವೆ

ಮೇ ೧೯೯೫

ಕವಿ - ಕಾವ್ಯ
ಹೆಗ್ಗೋಡು - ೫೭೭ ೪೧೭
ಶಿವಮೊಗ್ಗ ಕರ್ನಾಟಕ
Ph: 08183-2813

ಈ ಸಂಚಿಕೆಯಲ್ಲಿ

೭	ಬಾಲ್ಯಕಾಲ	ಯು.ಆರ್. ಅನಂತಮೂರ್ತಿ
	ಚಿತ್ರಗಳು	ಟಿ. ಎಸ್. ಸತ್ಯನ್
೧೬	ದೇವರೊಂದಿಗೆ ತಾಯ್ನುಡಿಯಲ್ಲಿ ಮಾತುಕತೆ	ಎ.ಕೆ. ರಾಮಾನುಜನ್
೩೬	ಈಚಲಚಾಪೆಯೆಂಬ ಮಹಿಮೆಯ..... ಎಲೆ ಮುಹಮ್ಮದನೆ	ಪ್ರಸನ್ನ
೪೧	ಭಾರತದ ಪ್ರಜಾ ಪ್ರಭುತ್ವ ಮತ್ತು ರೈತ ಹೋರಾಟ;	ಡಾ. ಮುಜಾಫ್ಫರ್ ಅಸ್ಸಾದಿ
೫೩	ಅತಿಥಿ ಕವಿ ಅಂಕಣ	ಶ್ರೀ ಶ್ರೀ
೬೩	ತಿಂಗಳ ಕವಿತೆ	ಬಿ. ಆರ್. ಲಕ್ಷ್ಮಣರಾವ್ ಬಂದಗದ್ದೆ ರಾಧಾಕೃಷ್ಣ
೬೮	ವಿಸ್ಮರಣೆಯ ನಂತರ	ಡಾ. ಗುರುರಾವ್ ಬಾಪಟ್
೭೬	ಅಗ್ನಿ ಮತ್ತು ಮಳೆ	ವೆಂಕಟರಮಣ ಐತಾಳ
೮೪	ಆವರಿಸಿಕೊಳ್ಳುವ ಕತೆಗಳು	ನಾ. ಡಿಸೋಜ
೮೬	ಪುಸ್ತಕ ಪರಿಚಯ	ವಿಲಿಯಂ

ಈ ಸಂಚಿಕೆಯ ಲೇಖಕರು

ಮಹಾಬಲೇಶ್ವರ ರಾವ್, ಶಿಕ್ಷಣ ಉಪನ್ಯಾಸಕರು, ಡಾ. ಟಿ. ಎಮ್. ಎ. ಪೈ ಶಿಕ್ಷಣ ಕಾಲೇಜು, ಉಡುಪಿ ೫೭೬ ೧೦೨

ಡಾ. ಮುಜಾಫರ್ ಅಸ್ಸಾದಿ, ರೀಡರ್, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬

ಗೊನವಾರ್ ಕಿಶನ್‌ರಾವ್, Ed. parichay, Karnataka Sahitya Mandira 3-4-168 Baghlingampally, Hyderabad-27 (A.P)

ಎಚ್. ಎಸ್. ಶಿವಪ್ರಕಾಶ್, ಅಧ್ಯಾಪಕ, ಹೋಂಸ್ಮೆನ್ಸ್ ಕಾಲೇಜು, ಶೇಷಾದ್ರಿ ರಸ್ತೆ ಬೆಂಗಳೂರು-೯

ಎಚ್. ಎಸ್. ರಾಘವೇಂದ್ರರಾವ್, ನಂ. ೮೦೦, ಮೊದಲ ವಾರ್ಡ್, ಹೊಸ ಅಮರಾವತಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ - ೫೮೩ ೨೦೧

ಬಂಜಗೆರೆ ಜಯಪ್ರಕಾಶ್, ಕ್ಯೂ ೭೭ II ಮೇನ್, ಮಾರುತಿ ಬಡಾವಣೆ, ಕುವೆಂಪು ರಸ್ತೆ, ಬೆಗಳೂರು - ೫.

ಬಿ. ಆರ್. ಲಕ್ಷ್ಮಣರಾವ್, ಮಾರುತಿ ಸ್ಟುಡಿಯೋ, ಕೆ. ಆರ್. ಬಡಾವಣೆ, ಚಿಂತಾಮಣಿ, ಕೋಲಾರ ೫೬೩ ೧೨೫

ಬಂದಗದ್ದೆ ರಾಧಾಕೃಷ್ಣ, ಕೆಳದಿ, (ಶಿವಮೊಗ್ಗ) ೫೭೭ ೪೦೧

ವೆಂಕಟರಮಣ ಐತಾಳ, ನೀನಾಸಮ್, ಹೆಗ್ಗೋಡು ೫೭೭ ೪೧೭.

ನಾ. ಡಿಸೋಜ, ೧೫ /೧೪ ೨ ನೇ ಕ್ರಾಸ್, ನೆಹರುನಗರ, ಸಾಗರ ೫೭೭೪೦೧.

ಡಾ. ಗುರುರಾವ್ ಬಾಪಟ್, ಇಂಗ್ಲಿಷ್ ರೀಡರ್, ಎಲ್.ಬಿ. ಮತ್ತು ಎಸ್. ಬಿ. ಎಸ್. ಕಾಲೇಜ್, ಸಾಗರ ೫೭೭ ೪೦೧ ಶಿವಮೊಗ್ಗ.

ವಿಲಿಯಂ, ೧೫ / ೧೩, ೨ನೇ ತಿರುವು, ನೆಹರು ನಗರ, ಸಾಗರ, ೫೭೭ ೪೦೧ ಶಿವಮೊಗ್ಗಜಿಲ್ಲೆ.

ಪ್ರಸನ್ನ, ಹೆಗ್ಗೋಡು ೫೭೭ ೪೧೭, ಸಾಗರ, ಶಿವಮೊಗ್ಗ.

ಯು. ಆರ್. ಅನಂತಮೂರ್ತಿ. ೧೦ ಮಾಧವ ನಗರ, ಮಣಿಪಾಲ ೫೭೬ ೧೧೯

ಬಾಲ್ಯ ಕಾಲ

ಯು. ಆರ್. ಅನಂತಮೂರ್ತಿ

ಒಂದು ಸಾವಿರ ವರ್ಷದಷ್ಟಾದರೂ ಜೀವಂತ ಸಾಹಿತ್ಯ ಪರಂಪರೆಯಿರುವ ಕನ್ನಡದಲ್ಲಿ ನಾನು ಬರೆಯುವುದು. ಭಾರತೀಯ ಸಾಹಿತ್ಯದ ಮುಖ್ಯ ಪ್ರವಾಹದಲ್ಲಿ ತಾನು ಇದ್ದೇನೋ ಎನ್ನುವ ಸಂಶಯ ಈ ಕಾಲದಲ್ಲಾಗಲೀ ಹಿಂದಿನ ಕಾಲದಲ್ಲಾಗಲೀ ನನ್ನ ಭಾಷೆಯಲ್ಲಿ ಯಾವ ಲೇಖಕನಿಗೂ ಬಂದದ್ದಿಲ್ಲ. ಮಗುವಾಗಿ ನಾನು ಓದಲು ಕಲಿಯುತ್ತಿದ್ದಾಗ ನನ್ನ ಕಣ್ಣಿನಲ್ಲಿ ನೀರನ್ನು ತಂದ ಒಂದು ಪದ್ಯ

(ಮುಂದಿನ ಪುಟಕ್ಕೆ)

ಧರಣಿಮಂಡಲದ ಮಧ್ಯದೊಳಗೆ ಕರ್ನಾಟ ದೇಶ ಇದೆ ಎಂದು ಹೇಳುತ್ತದೆ. ಒಂದು ಹುಲಿಯ ಕ್ರೂರ ಹೃದಯವನ್ನು ತನ್ನ ಪ್ರಾಮಾಣಿಕತೆಯಿಂದ ಮತ್ತು ಸತ್ಯಸಂಧತೆಯಿಂದ ಗೆದ್ದ ಹಸುವಿನ ಕತೆ ಈ ಹಾಡು. ಹೃದಯ ಪರಿವರ್ತನೆಯ ಈ ಹಾಡು ನಿಜವಾಗಿಯೂ ಗಾಂಧಿ ತತ್ವವನ್ನು ಪ್ರತಿಪಾದಿಸುವಂತಿದೆ. ಈ ಅನಾಮಿಕ ಕವಿಗೆ ಪ್ರಪಂಚದ ಕೇಂದ್ರ ಕರ್ನಾಟಕ. ಅಂತಹ ಒಂದು ದೇಶದಲ್ಲಿ ಒಬ್ಬ ಗೊಲ್ಲನಿದ್ದಾನೆ. ಅವನ ಹೆಸರು ಕಾಳಿಂಗ. ಹೀಗೆ ಈ ಹಾಡು ಒಂದು ಲಾಂಗ್ ಶಾಟ್‌ನಿಂದ ಶುರುವಾಗಿ ಒಬ್ಬ ಗೊಲ್ಲನಲ್ಲಿ ನಮಗೆ ಕ್ಲೋಸಪ್ ಕೊಡುತ್ತದೆ. ಅವನು ಕರೆಯುವ ಹಸುಗಳಿಗೆ ಭಾರತದ ಮುಖ್ಯ ನದಿಗಳ ಹೆಸರಿವೆ. ಸಹ್ಯಾದ್ರಿ ಪರ್ವತ ಶ್ರೇಣಿಯ ನಿಬಿಡ ಅರಣ್ಯದ ಮಧ್ಯದ ಒಂದು ಮನೆಯಲ್ಲಿ ನಾನು ಈ ಪದ್ಯವನ್ನು ಕಲಿತದ್ದು. ನಮ್ಮ ರಾಷ್ಟ್ರದ ನದಿಗಳ ಹೆಸರುಗಳನ್ನು ನನಗೆ ತಿಳಿಸಲು ಪ್ರಾರಂಭಿಸಿದ್ದು ಈ ಪದ್ಯದ ಹಸುಗಳು. ಇಲ್ಲಿ ಪುಣ್ಯಕೋಟಿ ಎನ್ನುವ ಹಸು ತನ್ನ ಪ್ರೀತಿಯ ಕರುವನ್ನು ಬೀಳ್ಕೊಟ್ಟು ಹುಲಿಗೆ ತನ್ನ ಇಡೀ ದೇಹವನ್ನು ಅರ್ಪಿಸುವ ಸಂದರ್ಭ ಬಂದಾಗ ನನ್ನ ತಂದೆ ಅತ್ತಿದ್ದರು. ನನ್ನ ತಂದೆ ಹೀಗೆ ಅತ್ತಿದ್ದನ್ನು ನಾನು ಎಂದೂ ನೋಡಿದ್ದಿಲ್ಲ.

ಇವು ನನ್ನ ತುಂಬ ಹಿಂದಿನ ನೆನಪುಗಳು. ಆದರೆ ನಮ್ಮ ಸಂಸ್ಕೃತಿ ಮತ್ತು ನಮ್ಮ ಸಮಾಜದ ಕೆಲವು ಕ್ರೂರ ಸತ್ಯಗಳನ್ನು ಕಂಡು ನನ್ನ ಮುಗ್ಧತೆಯನ್ನು ಕಳೆದುಕೊಳ್ಳಲು ಇನ್ನಷ್ಟು ವರ್ಷಗಳು ಕಾಯಬೇಕಾಯಿತು. ಒಂದು ಸುಂದರವಾದ ಸಣ್ಣ ಪಟ್ಟಣದಲ್ಲಿ (ತೀರ್ಥಹಳ್ಳಿ) ನಾನು ಹೈಸ್ಕೂಲು ಕಲಿಯಲು ಅಗ್ರಹಾರದಿಂದ ನಡೆದು ಹೋಗುತ್ತಿದ್ದೆ. ಕಾಲೇಜಿನಲ್ಲಿ ಶಿಕ್ಷಣ ಪಡೆದ ನನ್ನ ಅಧ್ಯಾಪಕರೊಬ್ಬರು ಅಲ್ಲಿ ಭಗವದ್ಗೀತೆಯನ್ನು ಕುರಿತು, ಒಂದು ಯುದ್ಧದ ಸಂದರ್ಭದಲ್ಲಿ ಅಷ್ಟು ಗಂಟೆಗಳ ಕಾಲ ಬೋಧಿಸುವುದು ಸಾಧ್ಯವೇ ಎನ್ನುವ ಪ್ರಶ್ನೆಯನ್ನು ಎತ್ತಿದ್ದು ನೆನಪಿದೆ. ಮಡಿವಂತ ಕುಟುಂಬದಿಂದ ಬಂದ ಒಬ್ಬ ಬ್ರಾಹ್ಮಣ ಹುಡುಗನನ್ನು ಈ ಪ್ರಶ್ನೆ ಎಷ್ಟು ಬಾಧಿಸಿರಬಹುದು ಊಹಿಸಿಕೊಳ್ಳಿ. ಅಗ್ರಹಾರಕ್ಕೆ ಹಿಂದಿರುಗುವಾಗ ದಾರಿಯಲ್ಲಿ ಒಬ್ಬ ಡಾಕ್ಟರರ ಶಾಪಿಗೆ ಹೋಗಬೇಕಾಗಿ ಬರುತ್ತಿತ್ತು. ನನ್ನ ಸ್ಕೂಲು ಬ್ಯಾಗಿನಲ್ಲಿ ಬೇರೆ ಬೇರೆ ಬಣ್ಣಗಳ ಔಷಧಿ ಬಾಟಲಿಗಳನ್ನು ನನ್ನ ಅಕ್ಕಪಕ್ಕದವರಿಗಾಗಿ ನಾನು ಯಾವತ್ತೂ ಕೊಂಡೊಯ್ಯುತ್ತಿದ್ದೆ. ಈ ಶಾಪಿನಲ್ಲಿ ನನಗೆ ಅತ್ಯಂತ ಆಕರ್ಷಕರಾದ ಒಬ್ಬ ವ್ಯಕ್ತಿ ಆರಾಮಾಗಿ ಕೂತಿರುತ್ತಿದ್ದರು. ವಿದ್ಯುತ್‌ಚ್ಛಕ್ತಿ ಇರದ ನಮ್ಮ ಊರಿನಲ್ಲಿ ಇವರು ಡೈನಮೋದಿಂದ ನಡೆಸುವ ಒಂದು ರೇಡಿಯೋದಿಂದ ಇಂಗ್ಲಿಷ್ ಭಾಷೆಯನ್ನು ಶುದ್ಧವಾಗಿ ಕಲಿತವರಾಗಿದ್ದರು. ಶಾಪಿನಲ್ಲಿ ಔಷಧಿಗಾಗಿ ಕಾಯುತ್ತಿದ್ದಾಗ ನನಗೆ ಜಾರ್ಜ್ ಬರ್ನಾಡ್‌ಷಾ ಬಗ್ಗೆ, ಮತ್ತು ಆ ಕಾಲದ ಪ್ರಸಿದ್ಧ ನಿರೀಶ್ವರವಾದಿ ಇಂಗರ್ ಸಾಲ್ ಬಗ್ಗೆ ಅವರು ಏನೇನೋ ಹೇಳಿ ವಿವರಿಸುತ್ತಿದ್ದರು.

ಅಗ್ರಹಾರಕ್ಕೆ ಹಿಂದಿರುಗಿದವನು ಅಲ್ಲಿದ್ದ ಮಠಕ್ಕೆ ಹೋದರೆ, ಅಲ್ಲಿ ದ್ವೈತ ಮತ್ತು ಅದ್ವೈತದ ನಡುವಿನ ವಾದಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಈ ಭೂಮಿ ಗುಂಡಗಿದೆಯೇ ಅಥವಾ ಚಪ್ಪಟೆಯಾಗಿದೆಯೇ ಎನ್ನುವ ವಾಗ್ವಾದ ಅಲ್ಲಿಗೆ ಬರುತ್ತಿದ್ದ ಒಬ್ಬ ಆರ್ಯ ಸಮಾಜಿಗೂ ಮಡಿವಂತ ಪಂಡಿತರಿಗೂ ನಡುವೆ ನಡೆದದ್ದು ಕೇಳಿದ್ದೇನೆ. ನನ್ನ ಅಗ್ರಹಾರದಲ್ಲಿ ನಾನು ಗೆಲಿಲಿಯೋನ ಸಮಕಾಲೀನ

ಆಗಿರಬಹುದಿತ್ತು. ನನ್ನ ತಂದೆಯ ತಲೆಯ ಮೇಲಿನ ಕೂದಲು ಕೆಲವೊಮ್ಮೆ ಮಡಿವಂತರದಂತೆಯೂ, ಕೆಲವೊಮ್ಮೆ ಆಧುನಿಕರದಂತೆಯೂ, ಶೈಲಿಯಲ್ಲಿ ಬದಲಾಗುತ್ತಿತ್ತು. ಅವರು ಮಹಾತ್ಮಾ ಗಾಂಧಿಯ ಹರಿಜನ ವನ್ನು ಮನೆಗೆ ತರಿಸಿಕೊಂಡು ವಾರಿಗೆಯವರಿಗೆ ಓದಿ ಹೇಳುತ್ತಿದ್ದರು.

ಮಹಾತ್ಮ ಗಾಂಧಿ ಅಗ್ರಹಾರದ ನಮ್ಮನ್ನು ಗೊಂದಲಗೊಳಿಸಿದ್ದರು. ಕೆಲವರಿಗೆ ಅವರು ದೈವಿಕ ಸಂತನಂತೆ ಕಂಡರೆ, ಹರಿಜನರನ್ನು ದೇವಾಲಯದೊಳಗೆ ಪ್ರವೇಶಿಸುವಂತೆ ಮಾಡಿ ವರ್ಣ ಸಂಕರಕ್ಕೆ ಕಾರಣನಾದ ಕಾಪುರುಷನಂತೆಯೂ ಕಾಣುತ್ತಿದ್ದರು.

ಒಮ್ಮೆ ಊರಿನಲ್ಲಿ ಪ್ಲೇಗ್ ಕಾಣಿಸಿಕೊಂಡಿತ್ತು. ಇನಾಕ್ಯುಲೇಟ್ ಮಾಡಲು ಬಂದ ಡಾಕ್ಟರು ಅಗ್ರಹಾರದ ಹೊರಗಿದ್ದ ಅಸ್ಪೃಶ್ಯರ ಕೇರಿಗೆ ಹೋಗಲಿಲ್ಲ. ಹರಿಜನರು ಪ್ಲೇಗಿನಿಂದ ಸಾಯಲು ಪ್ರಾರಂಭಿಸಿದಾಗ ನಮ್ಮಲ್ಲಿ ಕೆಲವು ಮೂಢರು, ಎಲ್ಲೋ ದೂರದಲ್ಲಿ ಗಾಂಧಿಯ ಮಾತು ಕೇಳಿ ದೇವಾಲಯ ಪ್ರವೇಶಿಸಿದ್ದರಿಂದ ನಮ್ಮೂರಿನ ಹರಿಜನರು ಶಿಕ್ಷಿತರಾಗುತ್ತಿದ್ದಾರೆ ಎಂದು ವಾದಿಸುತ್ತಿದ್ದರು.

ಆಗ ನಾನು ಅಗ್ರಹಾರದಲ್ಲಿ ಕೈ ಬರಹದ ಪತ್ರಿಕೆಯೊಂದನ್ನ ಗೆಳೆಯರೊಡನೆ ಕೂಡಿ ಹೊರತರಲು ಪ್ರಾರಂಭಿಸಿದ್ದೆ. ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡ - ಮೂರೂ ಭಾಷೆಗಳಲ್ಲಿ ಅಗ್ರಹಾರದ ಹುಡುಗರ ಈ ಮಾಸ ಪತ್ರಿಕೆ ಹೊರ ಬರುತ್ತಿತ್ತು!. ಅದರಲ್ಲಿ ನಾನೊಂದು ಕತೆ ಬರೆದಿದ್ದೆನೆಂದು ನೆನಪು. ಈ ಕಥೆ ಕ್ಲಿಷ್ಟ ರೂಪಕಗಳಲ್ಲಿ ಬರೆದುದಾಗಿತ್ತು. ಯಾಕೆಂದರೆ ನೇರವಾಗಿ ನನ್ನ ಮನಸ್ಸಿನಲ್ಲಿ ಇರುವುದನ್ನು ಬರೆದು ಹಿರಿಯರ ಕೋಪಕ್ಕೆ ತುತ್ತಾಗುವಷ್ಟು ಧೈರ್ಯ ನನ್ನಲ್ಲಿರಲಿಲ್ಲ. ಕತೆಯ ಪ್ರೇರಣೆ ಇದಾಗಿತ್ತು: ಹರಿಜನರು ಸಾಯಲು ತೊಡಗಿದಾಗ ಸುಂದರಳಾದ ಒಬ್ಬಳು ಹುಡುಗಿ ಕೇರಿಯನ್ನು ತೊರೆದು ಓಡಿ

ಹೋಗಿದ್ದಳು. ಯಾಕೆಂದು, ಅದರ ರಹಸ್ಯ ನನಗೆ ಮಾತ್ರ ಗೊತ್ತಿತ್ತು. ಸೈನ್ಯದಲ್ಲಿ ಕೆಲಸ ಮಾಡಿದ್ದ ಅಗ್ರಹಾರದ ಯುವಕನೊಬ್ಬ ಊರಿಗೆ ಮರಳಿ ಬಂದವನು ಆಕೆಯ ಜೊತೆ ಗುಪ್ತ ಸಂಬಂಧವನ್ನು ಇಟ್ಟುಕೊಂಡಿದ್ದ . ಆದ್ದರಿಂದ ಮತ್ಸ್ಯಗಂಧಿಯಂತೆ ಕಾಣುತ್ತಿದ್ದ ಈ ಕಪ್ಪು ಸುಂದರಿ, ಎಲ್ಲರಂತೆ ತನ್ನ ಪಾಡೆಂದು ಸಾಯಲು ಒಲ್ಲದೆ ಓಡಿಹೋಗಿದ್ದಕ್ಕೆ ಕಾರಣ, ಅವಳು ಸ್ಪರ್ಶಿತಳಾದದ್ದು, ಮತ್ತು ಇಂತಹ ಸ್ಪರ್ಶದಿಂದ ಅವಳು ಜಾಗೃತಗೊಂಡದ್ದು ಎಂದು ಭಾವಿಸಿ ಕತೆ ಹೆಣೆದಿದ್ದೆ.

ನನಗೆ ಮೂವತ್ತು ವರ್ಷವಾಗಿದ್ದಾಗ ಇಂಗ್ಲೆಂಡಿನಲ್ಲಿ ಸ್ನಾತಕೋತ್ತರ ಪದವಿಗೆ ಓದುತ್ತಿದ್ದ ನಾನು ನನ್ನ ಅಧ್ಯಾಪಕರ ಜೊತೆ ಬರ್ಗ್‌ಮನ್‌ನ ಒಂದು ಸಿನೆಮಾ, Seventh Seal ನೋಡಲು ಹೋಗಿದ್ದೆ. ಈ ಚಿತ್ರದಲ್ಲಿ ಸಬ್‌ಟೈಟಲ್ ಇರಲಿಲ್ಲವಾದ್ದರಿಂದ ನಾನದನ್ನು ಮಸುಕು ಮಸುಕಾಗಿ ಅರ್ಥಮಾಡಿಕೊಂಡಿದ್ದೆ. ಕೆಲವೊಮ್ಮೆ ಸರಿಯಾಗಿ ಅರ್ಥ ಮಾಡಿಕೊಳ್ಳದಿರುವುದು ಸೃಜನಶೀಲತೆಗೆ ಕಾರಣವಾಗಬಹುದು. ನನ್ನ ಅಧ್ಯಾಪಕರಿಗೆ ಸಿನಿಮಾ ನೋಡಿದ ನಂತರ ಹೀಗೆ ಹೇಳಿದೆ : "ಐರೋಪ್ಯನೊಬ್ಬ ತನ್ನ ಮಧ್ಯಯುಗವನ್ನು ಪುಸ್ತಕಗಳ ಮುಖೇನ ತಿಳಿದುಕೊಳ್ಳಬೇಕಾಗುತ್ತದೆ. ಐರೋಪ್ಯರ ಐತಿಹಾಸಿಕ ಕಾಲ ಸರಳ ರೇಖಾತ್ಮಕವಾಗಿ ಬೆಳೆದದ್ದು. ಆದರೆ ಭಾರತೀಯನಾದ ನನಗಾದರೋ ಎಲ್ಲ ಕಾಲವೂ ಒಂದೇ ಕಾಲದಲ್ಲಿ ಸಹಬಾಳ್ವೆ ಮಾಡುತ್ತವೆ ". ಹೀಗೆ ನನಗೆ ಹೊಳೆದದ್ದೇ, ಹೈಸ್ಕೂಲು ದಿನಗಳಲ್ಲಿ ನಾನು ಬರೆದ ಕತೆಯನ್ನು ಮತ್ತೊಮ್ಮೆ ಬರೆಯುವಂತೆ ಮಾಡಿತು. ಅದೇ, ನನ್ನ ಸಂಸ್ಕಾರ ಕಾದಂಬರಿ.

ಹೀಗೆ ನಾನು ವಿವರಿಸಿ ಹೇಳಲು ಕಾರಣ ನನ್ನ ಪರಂಪರೆಯ ಜೊತೆಗೆ ನನಗಿರುವ ಜಗಳವನ್ನು ಸ್ಪಷ್ಟಪಡಿಸಲು. ನಾನು ಪರಂಪರೆಯ ಜೊತೆ ಜಗಳ ಮಾಡುವುದು ಹೊರಗಿನವನಾಗಿ ಅಲ್ಲ,

ಒಳಗಿನವನಾಗಿ. ಹೀಗಾಗಿ ನನ್ನನ್ನ ನಾನು ಒಬ್ಬ ಒಳ ವಿಮರ್ಶಕನೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ನಾನು ಮಾರ್ಗದರ್ಶನ ಪಡೆದದ್ದು ಕನ್ನಡ ಪರಂಪರೆಯಿಂದಲೇ. ನಮ್ಮ ಮೊದಲ ಕವಿ ಪಂಪ ಮತಪರಿವರ್ತನೆ ಹೊಂದಿದ ಜೈನರವನು. ಅವನ ದೊರೆ ಹಿಂದೂ; ಮತ್ತು ಅವನು ಬರೆದದ್ದು ಮಹಾಭಾರತ. ಇಡೀ ಮನುಜ ಕುಲ ಒಂದು ಎಂದು ತಿಳಿದಿದ್ದ ಅವನ ನಿಜವಾದ ನಾಯಕ ಕರ್ಣ;ಜಾತಿ ವ್ಯವಸ್ಥೆಯಿಂದಾಗಿ ನೊಂದವನು. ಹನ್ನೆರಡನೇ ಶತಮಾನದ ವಚನಕಾರರಾದರೋ ಇಡೀ ವರ್ಣ ವ್ಯವಸ್ಥೆಯನ್ನ ಪ್ರಶ್ನಿಸಿ ಮನುಷ್ಯರೆಲ್ಲರೂ ಸಮಾನರೆಂದು ಶಿವನಿಗೆ ತಮ್ಮನ್ನು ಅರ್ಪಿಸಿಕೊಂಡವರು. ಆ ಕಾಲದ ಬಸವ ಒಬ್ಬ ಅಸ್ಪೃಶ್ಯನಿಗೆ ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗಲು ನೆರವಾದವನು.

ಅಗ್ರಹಾರದಲ್ಲಿ ಬೆಳೆಯುತ್ತಿದ್ದಾಗ ನಾನು ನನ್ನ ಅಸ್ಥಿತ್ವವನ್ನ ರೂಪಿಸುತ್ತಿದ್ದ ಸಾಮಾಜಿಕ ಸಾಂಸ್ಕೃತಿಕ ನಂಬಿಕೆಗಳನ್ನು ಪ್ರಶ್ನಿಸುವಂತೆ ಎಚ್ಚರವಾದೆ ಎಂದು ಹೇಳಿದೆ; ಅದಕ್ಕೆ ಕಾರಣ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ನಮ್ಮೆಲ್ಲರ ಮೇಲೂ ಆದ ಮಹಾತ್ಮಾಗಾಂಧಿಯ ಪ್ರಭಾವ. ಅಲ್ಲದೆ ಆಗ ನಾನು ಕನ್ನಡದ ಹಿರಿಯ ಲೇಖಕರ ಕಾದಂಬರಿಗಳನ್ನೂ ಓದಿದ್ದೆ. ಕುವೆಂಪುರವರ **ಕಾನೂರು ಹೆಗ್ಗಡತಿ** ಮತ್ತು ಶಿವರಾಮ ಕಾರಂತರ **ಚೋಮನದುಡಿ**ಯಿಂದ ನಾನು ಕಂಡದ್ದು ಎಲ್ಲ ಮನುಷ್ಯರಿಗೂ ಒಂದು ತೀವ್ರವಾದ ಒಳಬದುಕು ಇರುತ್ತದೆ ಎಂಬುದು. ಅಂದರೆ ನಾವು ನಿಕೃಷ್ಟರೆಂದು ಕಾಣುವ ಜನರಲ್ಲಿ ಹೊರಗೆ ಕಾಣದ ಈ ಒಳಬದುಕು ಇದೆ ಎನ್ನುವುದು ನನ್ನನ್ನು ದಂಗು ಬಡಿಸಿತ್ತು. ಜೊತೆಗೆ ನಾನು ನಿತ್ಯ ಕಾಣುತ್ತಿದ್ದ ಸಾಮಾನ್ಯ ಪ್ರಪಂಚ ತೇಜೋಮಯವೆಂದು ನನಗೆ ಅನ್ನಿಸಿತ್ತು. ನಿನ್ನ ಸುತ್ತಲಿನ ಪರಿಸರವನ್ನ ನಿನ್ನ ಕಣ್ಣನ್ನು ಉಜ್ಜಿ ಮತ್ತೆ ನೋಡಬೇಕು ಅಷ್ಟೆ. ಪೌರಾಣಿಕ ಪ್ರಪಂಚ ಮತ್ತು ವಾಸ್ತವಿಕ ಪ್ರಪಂಚ ಹೀಗೆ ಅನ್ಯೋನ್ಯವಾಗಿ ಏಕಗೊಳ್ಳುತ್ತಿದ್ದಂತೆಯೇ, ಇನ್ನೂ ಅಪಕ್ವ ಕ್ರಾಂತಿಕಾರನಾದ ನಾನು, ಪುರಾಣ ಪ್ರಪಂಚದ ಶೋಭೆಯಲ್ಲಿ ಉಜ್ವಲವೆಂದುಕೊಂಡ ನನ್ನ ಸುತ್ತ ಮುತ್ತಲಿನ ಭೂತಗಳನ್ನು ಅಪವಿತ್ರಗೊಳಿಸಲು ಪ್ರಾರಂಭಿಸಿದ್ದೆ. ಇಂತಹ ಘಟನೆಗಳಿಂದಲೇ ನಾನು ನನ್ನ ಪರಿಸರದಿಂದ ಒಡೆದುಕೊಂಡು ಲೇಖಕನಾದೆ.

೪

ನಾನೊಬ್ಬ ಗಣಿತ ಶಾಸ್ತ್ರಜ್ಞನಾಗಿ ನೆಮ್ಮದಿಯ ಧ್ಯಾನ ಶೀಲತೆಯಲ್ಲಿ ಬದುಕಬೇಕೆನ್ನುವುದು ನನ್ನ ತಂದೆಯ ಇಚ್ಛೆಯಾಗಿತ್ತು. ಆದರೆ ಡಾಕ್ಟರ್ ರಾಮಮನೋಹರ ಲೋಹಿಯಾರ ಅನುಯಾಯಿಗಳ ಪ್ರಭಾವಕ್ಕೆ ಒಳಗಾಗಿ ನನ್ನ ಹಸಿ ತಾರುಣ್ಯದಲ್ಲಿ ಒಂದು ರೈತ ಸತ್ಯಾಗ್ರಹದಲ್ಲಿ ಭಾಗಿಯಾದದ್ದು (ಕಾಗೋಡು ರೈತ ಸತ್ಯಾಗ್ರಹ) ನನ್ನ ಜೀವನದ ದಿಕ್ಕನ್ನೆ ಬದಲಿಸಿಬಿಟ್ಟಿತು. ಹೀಗೆ ನಾನು ಬರಹಗಾರನಾದದ್ದು. ನಾನು ಪಾಶ್ಚಾತ್ಯ ವಿಚಾರಗಳ ಕುರುಡು ಅನುಯಾಯಿಯಾಗಿ ಹೋಗದಂತೆ ನನ್ನನ್ನು ಕಾಪಾಡಿದ ಡಾಕ್ಟರ್ ಲೋಹಿಯಾರ ಕ್ರಾಂತಿಕಾರಕ ವೈಚಾರಿಕತೆಗೆ ಈಗಲೂ ನಾನು ಋಣಿಯಾಗಿದ್ದೇನೆ. ನಮ್ಮ ಕಾಲದ ಅತ್ಯಂತ ಉಜ್ವಲ, ಧೀಮಂತ ದೃಷ್ಟಾರ ಗಾಂಧೀಜಿಯನ್ನು ನಾನು ಪಡೆದದ್ದು ಲೋಹಿಯಾ ಮುಖೇನ. ಆ ಕಾಲದ ನನ್ನ ಎಲ್ಲ ನೆನಪುಗಳನ್ನು ಒಂದು ರೂಪಕಗಳ



ಉಗ್ರಾಣವಾಗಿ ಪಡೆದು ನಾನು ಈಗಲೂ ಬದುಕಿ ಬರೆಯುತ್ತೇನೆ. ಮಠದ ಪರಿಸರದಲ್ಲಿ ನಡೆಯುತ್ತಿದ್ದ ಸಂಜೆಯ ದೀರ್ಘವಾದ ಪೂಜಾವಿಧಿಗಳು, ಕಾರ್ತಿಕ ಮಾಸದ ಹಬ್ಬಗಳು, ಹರಿಕಥೆಗಳು, ಪಾಂಡಿತ್ಯ ಪೂರ್ಣ ಪಾರಮಾರ್ಥಿಕ ಚರ್ಚೆಗಳು, ನನ್ನ ಕೆಲವು ನೆರೆಹೊರೆಯವರ ಸರಳವಾದ ಧಾರ್ಮಿಕ ಜೀವನ, ಜೊತೆಯಲ್ಲೇ ಜಾತಿ ಹೆಮ್ಮೆಯ ಉಸಿರುಗಟ್ಟಿಸುವ ವಾತಾವರಣ, ನಮ್ಮವರಲ್ಲದವರ ಬಗ್ಗೆ ನಮಗಿದ್ದ ತಿರಸ್ಕಾರ ದೃಷ್ಟಿ, ಬಡ ಗೇಣಿದಾರರ ಜೊತೆ ಮಠದವರು ನಡೆಸುತ್ತಿದ್ದ ಕೊನೆ 'ಇಲ್ಲದ ಕೋರ್ಟು ವ್ಯಾಜ್ಯಗಳು -ಇವೆಲ್ಲವೂ ಒಟ್ಟಾಗಿ ನನ್ನ ಸ್ಮೃತಿಯ ಉಗ್ರಾಣದ ರೂಪಕಗಳಾಗಿವೆ.

ನನ್ನ ಈ ಬಾಲ್ಯದ ನೆನಪುಗಳು ನನ್ನಲ್ಲಿ ದ್ವಂದ್ವ ಭಾವನೆಯನ್ನು ಯಾವತ್ತೂ ಉಂಟುಮಾಡುತ್ತವೆ. ಮಡಿವಂತ ವಾತಾವರಣದಲ್ಲಿ ಬದುಕುವುದು ಕೇವಲ ಉಸಿರುಕಟ್ಟಿಸುವ ಅನುಭವ ಮಾತ್ರ ಕೊಟ್ಟಿತೆಂದು ಹೇಳಿದರೆ ಅದು ಸುಳ್ಳಾಗುತ್ತದೆ. ಈ ಪುಟ್ಟ ಪ್ರಪಂಚದಲ್ಲಿ ನಾನು ಪಡೆದ ಕೆಲವು ಅನುಭವಗಳು ಇವತ್ತಿಗೂ ನನಗೆ ರಹಸ್ಯಾತ್ಮಕವೆಂದೂ, ಪಾರಮಾರ್ಥಿಕವೆಂದೂ ಅನಿಸುತ್ತವೆ. ಅಪರಿಗ್ರಹದ ನಿಷ್ಠ ಸಾಧಕರೊಬ್ಬರು ಮಠದಲ್ಲಿದ್ದರು. ಒಂದು ಬಟ್ಟಲಿನಲ್ಲಿ ತನ್ನ ಭಿಕ್ಷೆಯನ್ನು ಅವರು ದಿನದ ಒಂದೇ ಸಾರಿ ಪಡೆದು ಊಟಮಾಡಿ ಬದುಕುತ್ತಿದ್ದರು ; ಇಡೀ ವರ್ಷಕ್ಕೆ ಒಂದು ಜೊತೆ ವಸ್ತ್ರವನ್ನು ಮಾತ್ರ ಬೇಡಿ ಪಡೆದು ಉಡುತ್ತಿದ್ದರು ; ದೇವಾಲಯದ ಗೋಡೆಯ ಪುಟ್ಟ ಗೂಡಿನಲ್ಲಿ ಉರಿಯುತ್ತಿದ್ದ ಹಣತೆಯ ಬೆಳಕಿನಲ್ಲಿ ನಿಂತು ಇಡೀ ರಾತ್ರಿ ಓದುವುದು ಮಾಡುತ್ತಿದ್ದರು. ಹಣತೆ ತಾನಾಗಿ ಆರುವ ತನಕ ಓದುತ್ತಿದ್ದ ಅವರು ಹೆಚ್ಚು ಬೆಳಕಿಗಾಗಿ ಬತ್ತಿಯನ್ನು ಒಂದುಚೂರಾದರೂ ಮುಂದಕ್ಕೆ ತಳ್ಳದವರು. ಅಂಥವರು ನನ್ನ ಸಂಸ್ಕೃತದ ಅಧ್ಯಾಪಕರು. ಇಷ್ಟೊಂದು ಕಠೋರ ನಿಷ್ಠೆಯ ಇಂತಹ ಬ್ರಹ್ಮಚಾರಿ **ಶಾಕುಂತಳ**ದ ಶೃಂಗಾರಮಯವಾದ ಭಾಗಗಳನ್ನು ಪಾಠ ಮಾಡುವಾಗ ಅವರಿಗೇನು ಅನ್ನಿಸುತ್ತಿತ್ತು ಅನ್ನುವುದೇ ನನಗೆ ಸೋಜಿಗ. ಒಮ್ಮೆ ತಲೆಕೆಟ್ಟವನೊಬ್ಬ ಅವರ ಬಳಿ ಬಂದು, ಹೊದ್ದ ಅಂಗವಸ್ತ್ರವನ್ನು ಕೊಡು ಎಂದು ಕೇಳಿದ. ಕೇಳಿದವನಿಗೆ ಒಲ್ಲೆ ಎನ್ನಬಾರದು ಎನ್ನುವ ವ್ರತದ ಅವರು ಅಂಗವಸ್ತ್ರವನ್ನು ಅವನಿಗೆ ಕೊಟ್ಟು ಬಿಟ್ಟು, ಇಡೀ ಚಳಿಗಾಲ ಬರಿಮೈಯಲ್ಲಿ ಕಳೆದರು. ಮುಂದಿನ ವರ್ಷ ಮಾತ್ರ ಅವರು ವಸ್ತ್ರವನ್ನ ಬೇಡಿ ಪಡೆಯಬಹುದಾಗಿತ್ತು.

ತನಗೆ ಕರೆ ಬಂದಿದೆ ಎಂದು ಒಮ್ಮೆ ಅವರಿಗೆ ಅನ್ನಿಸಿತು. ಅಶ್ವತ್ಥದ ಒಂದು ಎಲೆಯನ್ನು ಹಿಡಿದು ಕಣ್ಣು ಮುಚ್ಚಿ ಪ್ರಾರ್ಥಿಸಿ ಅದನ್ನು ಕೆಳಗೆ ಬೀಳಲು ಬಿಟ್ಟರು. ಅದು ಅಂಗಾತ್ತನೆ ಬಿದ್ದರೆ, ನೀನು ಎಲ್ಲವನ್ನೂ ತ್ಯಜಿಸಿ ಹೊರಟುಹೋಗು ಎಂದು ಅಪ್ಪಣೆಯಾದಂತೆ ಎಂದುಕೊಂಡು ಕಣ್ಣುಬಿಟ್ಟರು. ಅಶ್ವತ್ಥದ ಎಲೆ ಹೋಗೆಂದು ಅವರಿಗೆ ಅಪ್ಪಣೆ ಕೊಟ್ಟಿತು. ಅವರು ಹೊರಟುಹೋದರು. ನಾವು ಮತ್ತೆ ಅವರನ್ನು ನೋಡಲಿಲ್ಲ.

೫

ಇನ್ನೊಂದು ಸಂದರ್ಭದಲ್ಲಿ ನಾನು ಈಗಾಗಲೇ ಹೇಳಿದ್ದನ್ನು ಮತ್ತೆ ಹೇಳಲು ಬಯಸುತ್ತೇನೆ. ಕುರುಡು ಪಾಶ್ಚಾತ್ತೀಕರಣ ಮತ್ತು ಅಂತರರಾಷ್ಟ್ರೀಯತೆಯ ಈ ಕೆಟ್ಟ ದಿನಗಳಲ್ಲಿ, ಸಾರ್ವಜನಿಕ

ಘಟನೆಗಳು ಮುಟ್ಟಲಾರದ ಒಂದು ಖಾಸಗಿ ಬದುಕಿದೆ ಎಂದು ತಿಳಿಯುವುದೇ ಸಾಧ್ಯವಿಲ್ಲವಾಗಿದೆ. ಆದ್ದರಿಂದ ನಾವು ಲೇಖಕರು ವಿಶೇಷವಾದ ವ್ಯಕ್ತಿಗಳೆಂದೂ, ನಮ್ಮ ಏಕಾಕಿತನದಲ್ಲಿ ನಮ್ಮ ಕಲೆಯನ್ನು ಉಜ್ವಲಗೊಳಿಸಿಕೊಳ್ಳಬಲ್ಲವರೆಂದೂ ನಾವು ನಂಬಿಕೊಂಡವರಾದರೆ ನಾವು ಜುಜುಬಿ ಕಲಾರಾಧಕರಾಗಿ ಕೊಳೆಯುವುದೇ ಸರಿ. ಬದುಕುವುದೆಂದರೆ ತೊಡಗಿಸಿಕೊಳ್ಳುವುದು. ನಮ್ಮ ಕೈ ಮೀರಿದ ಘಟನೆಗಳಿಗೂ ತುತ್ತಾಗುವುದು. ಆದರೆ ಬರೆಯುವ ಕ್ರಿಯೆಗೆ ದೂರನಿಂತು ನೋಡುವ ಅಗತ್ಯವಿದೆ. ಆದರೆ ಹೀಗೆ ದೂರದಿಂದಲೋ ಮೇಲಿನಿಂದಲೋ ನೋಡುವುದು ಕಷ್ಟ ಮಾತ್ರವಲ್ಲದೆ ನೈತಿಕವಾಗಿಯೂ ತಪ್ಪು ಎಂದು ಕೆಲವೊಮ್ಮೆ ಅನ್ನಿಸುತ್ತದೆ. ಯೇಟ್ಸ್ ಕವಿ ಹೀಗೆ ಬರೆಯುತ್ತಾನೆ :

"ಇದೊಂದು ಬಹಳ ಕಷ್ಟದ ಆಯ್ಕೆ. ಸಾಮಾನ್ಯ ಕಣ್ಣುಗಳಿಗೆ ಕಾಣ ಸಿಗದಂತೆ ಮೇಲೇರುವ ಪಕ್ಷಿಯ ಮಾರ್ಗ ಸರಿಯೇ ಅಥವಾ ಸಂತೆಯ ಬಂಡಿಯನ್ನೇರಿ ಪ್ರಯಾಣ ಮಾಡುವುದು ಸರಿಯೇ? ಏನೇ ಆದರೂ ನಮ್ಮ ಆತ್ಮವನ್ನು ನಮ್ಮೊಡನೆ ನಾವು ಒಯ್ಯುವಂತೆ ನೋಡಿಕೊಳ್ಳಬೇಕು.....ನಮ್ಮ ಕಲ್ಪನೆಗೆ ಸಂತೆಯ ಬಂಡಿಯೇ ಸರಿ ಅನ್ನಿಸಿದರೆ ನಮ್ಮ ಶರೀರದೊಳಗೆ ನಮ್ಮ ಆತ್ಮವನ್ನು ಗಟ್ಟಿಯಾಗಿ ಹಿಡಿದಿಟ್ಟು ಕಾಯಬೇಕು. ಯಾಕೆಂದರೆ ಹಲವು ಸೂಕ್ಷ್ಮ ಜನಾಂಗಗಳ ಇತಿಹಾಸದಲ್ಲಿ ನಾವು ಆತ್ಮನಿಷ್ಠ ಸೌಂದರ್ಯದ ರುಚಿಗೆ ಮನಸೋತವರಾಗಿಬಿಟ್ಟಿರುವುದರಿಂದ, ಕೇವಲ ಶಕ್ತಿಯ ಆರಾಧನೆಗೆ, ಕೇವಲ ವೈಯಕ್ತಿಕತೆಯ ವಿಜೃಂಭಣೆಗೆ, ಆವೇಶದ ರಕ್ತದ ತುಮುಲಕ್ಕೆ ಒಳಗಾಗುವುದನ್ನು ಈ ಆತ್ಮ ನಿಷ್ಠತೆಯಿಂದ ಕಲಿತುಬಿಟ್ಟಿದ್ದರಿಂದ, ನಮ್ಮಲ್ಲಿ ಅಂತರ್ಗತವಾಗಿರುವ ಅಲೌಕಿಕದ ರುಚಿ ಅಸಹನೆಯಿಂದ ಕಾಣುತ್ತದೆ".

ಸಾರ್ವಜನಿಕ ಜಂಜಾಟಗಳ ಸಂತೆಯ ಬಂಡಿಯನ್ನು ನಾವು ಆಯ್ದವರಾದರೆ, ಇದನ್ನು ನೆನಪಿಡಬೇಕು: ಅರ್ಥಶಾಸ್ತ್ರಜ್ಞರಿಗೂ, ಸಮಾಜ ವಿಜ್ಞಾನಿಗಳಿಗೂ ಇರುವ ವಸ್ತುನಿಷ್ಠ ವಿಶ್ಲೇಷಣೆಯ ಸಾಮಗ್ರಿ ನಮ್ಮದಲ್ಲ. ಜೊತೆಗೆ ರಾಜಕೀಯದ ಉಪಾಯಗಾರರಿಗೆ ಗೊತ್ತಿರುವ, ತಮ್ಮ ಇಚ್ಛಾ ಶಕ್ತಿಗೆ ಬೇಕಾದಂತೆ ಜನರನ್ನು ಉಪಯೋಗಿಸುವ ಕಲೆ ನಮ್ಮದಲ್ಲ. ನಮ್ಮನ್ನು ಮೆಚ್ಚಿದವರು ಬಯಸುವ ಸಾರ್ವಜನಿಕ ವ್ಯಕ್ತಿಗಳಾಗಿ ನಾವು ಆಗಿಬಿಡಬಾರದು. ತನ್ನ ಪ್ರತಿಯೊಂದು ಹೊಸ ಕೃತಿಯಲ್ಲೂ ತನ್ನನ್ನು ಮೆಚ್ಚಿಕೊಂಡ ಮಂದಿಯಲ್ಲಿ ಕೆಲವರನ್ನಾದರೂ ಕಳೆದುಕೊಳ್ಳದ ಲೇಖಕ ಎಲ್ಲೋ ಸುಳ್ಳಾಗುತ್ತಿದ್ದಾನೆ ಎನ್ನುವ ಅನುಮಾನ ನಮಗಿರಬೇಕು. ಯಾಕೆಂದರೆ ನಾವು ನಮ್ಮನ್ನೇ ಅನುಕರಿಸಿಕೊಳ್ಳುತ್ತಿರಬಹುದು ಅಥವಾ ಸಾರ್ವಜನಿಕರ ಕಣ್ಣಿಗೆ ಇಷ್ಟವಾಗುವಂತೆ ನಮ್ಮನ್ನು ನಾವು ರೂಪಿಸಿಕೊಳ್ಳುತ್ತಿರಬಹುದು.

ವಾಗ್ವೈಭವ ಅಪಾಯಕಾರಿ. ಅದು ಸಮೂಹವನ್ನ ಉದ್ರೇಕಗೊಳಿಸುವುದಕ್ಕಾಗಿ ರೂಪಿತವಾದದ್ದು. ಸುಳ್ಳುಗಳನ್ನು ಕೇಳಿಸಿಕೊಳ್ಳುತ್ತ ಬದುಕುವುದು ಸಾಮಾನ್ಯವಾಗಿ ಎಲ್ಲರಿಗೂ ಕ್ಷೇಮವೆನ್ನಿಸುತ್ತದೆ, ಹಿತವೆನ್ನಿಸುತ್ತದೆ. ಆದರೂ ಜನರ ಆತ್ಮ ಸತ್ಯಕ್ಕಾಗಿ ಹಸಿದಿರುತ್ತವೆ. ಆದ್ದರಿಂದ ನಾವು ನಮ್ಮ ಅತ್ಯಂತ ಏಕಾಂಗಿತನದಲ್ಲಿ ನಾವೇ ನಂಬಿದ್ದನ್ನು ಹೇಳುವ ಧೈರ್ಯ ಮಾಡಬೇಕು.

ನಮಗೇ ನಾವು ಸುಳ್ಳುಹೇಳಿಕೊಂಡು ಬದುಕುವ ಯಾವುದಾದರೂ ಶೈಲಿಗೆ ಬದ್ಧರಾಗಿ ಬಿಟ್ಟರೆ ಯಾರೂ ನಮ್ಮನ್ನು ಪಾರುಮಾಡುವಂತಿಲ್ಲ. ಆಳುವ ವರ್ಗದ ರಾಷ್ಟ್ರಕವಿಯಾಗುವುದಾಗಲೀ, ರಾಜಕೀಯ ಪಕ್ಷಗಳ ವಕ್ತಾರರಾಗುವುದಾಗಲೀ-ಈ ಕಾರಣದಿಂದ ಲೇಖಕನಿಗೆ ಅಪಾಯಕಾರಿಯಾದದು. ಇವತ್ತಿಗೂ ಕಲೆ ನಾವು ಅಡಗಿಕೊಳ್ಳಬಹುದಾದ ಜಾಗವಾಗಿಯೇ ಉಳಿದಿದೆ. ಸೋವಿಯತ್ ದೇಶದ ಸೆಕ್ಯುಲರ್ ಅಬ್ಬರದಲ್ಲಿ ಸೋಲ್ಜನಿಸ್ಟ್‌ನಿಗೆ ಆಸ್ತಿಕನಾಗಿ ಉಳಿಯುವುದು ಹೀಗೆ ಸಾಧ್ಯವಾಯಿತು. ಅಂತೆಯೇ ತಾವು ದೇವರಲ್ಲಿ ನಂಬಿದವರೆಂದು ಬೀಗುವವರ ಮತೀಯ ಅಸಹನೆ ಮತ್ತು ಕ್ರೌರ್ಯದ ಜಗತ್ತಿನಲ್ಲಿ, ಅನುಮಾನಿಗಳಾಗಿ ಇರುವುದು ನಮ್ಮ ಕಾಲದ ಹಲವರಿಗೆ ಸಾಧ್ಯವಾಗಿದೆ.

ಇಂತಹ ಸಾಂಸ್ಕೃತಿಕ ಬಿಕ್ಕಟ್ಟುಗಳ ಕಾಲದಲ್ಲಿ ಕಲಾವಿದ ತನ್ನ ಶಕ್ತಿಯನ್ನು ಹೇಗೆ ರಕ್ಷಿಸಿಕೊಳ್ಳುತ್ತಾನೆನ್ನುವುದನ್ನು ಜಾಯ್ಸ್ ಹೇಳುತ್ತಾನೆ. ಕಲಾವಿದ ಇಂತಹ ಕಾಲಗಳಲ್ಲಿ ಆಯಬೇಕಾದ್ದು, ಜಾಯ್ಸ್ ಪ್ರಾಕಾರ **ಮೌನ ಅಜ್ಞಾತವಾಸ, ಮತ್ತು ಉಪಾಯ**. ಆದರೆ ರಾಜಕೀಯವಾಗಿ ಆರೋಗ್ಯವೆನ್ನಿಸುವ ಕಾಲದಲ್ಲೂ ಲೇಖಕ ಬೇರೆ ರೀತಿಯ ಉಪಾಯಗಳನ್ನು ಆಶ್ರಯಿಸಬಹುದು. ಯಾಕೆಂದರೆ ತನ್ನ ಅಂತರಾತ್ಮದ ಕಿರುದನಿಗೆ ಓಗೊಟ್ಟು ಅವನು ಅಗತ್ಯ ಬಿದ್ದಲ್ಲಿ ಜನಾದರವನ್ನು ನಿರ್ಲಕ್ಷಿಸುವ ಅಪ್ರಿಯ ಲೇಖಕನೂ ಆಗಬೇಕಾಗಬಹುದು. ನಿಜವಾದ ಪ್ರಜಾತಾಂತ್ರಿಕ ಸಮಾಜದಲ್ಲಿ ಲೇಖಕನ ಪಾತ್ರ ಇಂತಹದ್ದಾಗಿರುತ್ತದೆ. ಇಂತಹ ಒಂದು ಶೀಲವಂತ ಸಮಾಜ, ಪರಂಪರೆಯ ಸ್ಮೃತಿ ಸಾತತ್ಯವನ್ನು ಪ್ರೀತಿಸುವುದರ ಜೊತೆಗೇ, ಜನರ ಭಾವುಕತೆಯನ್ನು ದೋಚುವ ಸಮೂಹ ಸನ್ನಿಯನ್ನು ಆದರಿಸುವುದಿಲ್ಲ ಎಂದು ನಾವು ಭರವಸೆ ಇಟ್ಟುಕೊಂಡಿರಬೇಕಾಗುತ್ತದೆ. ಈ ಬಗೆಯ ಅಪ್ಪಟ ಪ್ರಜಾತಾಂತ್ರಿಕ ಸಮಾಜಗಳಲ್ಲಿ ಮಾತ್ರ ಲೇಖಕನಿಗೆ ತಾನು ಕೋಮಲವಾದ ಅಂತಃಕರಣದ, ಧ್ಯಾನಶೀಲನಾದ ಸಹನಾಗರೀಕನಾಗಿ ಬದುಕುತ್ತ, ತನ್ನ ಮಾತುಗಳಿಗೆ ಇತರರನ್ನು ಒಲಿಸಿಕೊಳ್ಳುವ ಸಾಮರ್ಥ್ಯವಿದೆಯೆಂದು ತಿಳಿಯಲು ಸಾಧ್ಯವಾಗಿರುತ್ತದೆ.

ಹೀಗೆ, ಒಂದು ಗತಿಶೀಲವಾದ ನಾಗರೀಕ ಸಮಾಜದ ಸೃಷ್ಟಿಗೆ ನಾವೆಲ್ಲರೂ ಬದ್ಧರಾಗಲು ಸಾಧ್ಯವಾಗಲಿ ಎಂದು ಪ್ರಾರ್ಥಿಸುತ್ತೇನೆ. ಇಂತಹ ಒಂದು ಸಮಾಜದಲ್ಲಿ ಮಾತ್ರ ಸಂಸ್ಕೃತಿಗಳ ಬಹುತ್ವದಲ್ಲಿ ಸಂತೋಷವಿರುತ್ತದೆ. ನಮ್ಮದಲ್ಲದ ದನಿಗಳಿಗೆ ಕಿವಿಗೊಡಬೇಕೆಂಬ ಆಸೆಯಿರುತ್ತದೆ. ಇಂಥಲ್ಲಿ ಮಾತ್ರ ಸಾಹಿತ್ಯ ವರ್ಧಿಸುತ್ತದೆ. ಮಾತಿಗೆ ಒಲಿಸಿಕೊಳ್ಳುವ ಶಕ್ತಿಯಿದೆ ಎಂಬ ನಂಬಿಕೆಯನ್ನು ಇಟ್ಟುಕೊಂಡಿರುವುದು ಸಾಧ್ಯವಾದಾಗ ಮಾತ್ರ ಸಾಹಿತ್ಯಕ್ಕೆ ಶಕ್ತಿಯಿರುತ್ತದೆ.

ಮಾರ್ಚ್ ೨೫ ನೇ ತಾರೀಖು ಭಾರತೀಯ ಜ್ಞಾನಪೀಠ ಪ್ರಶಸ್ತಿ ಸ್ವೀಕಾರದ ಸಂದರ್ಭದಲ್ಲಿ ಮಾಡಿದ ಭಾಷಣದ ಆಯ್ದ ಭಾಗಗಳು. ಈ ಲೇಖನದಲ್ಲಿ ಬಳಸಲಾಗಿರುವ ಚಿತ್ರಗಳು ಖ್ಯಾತ ಛಾಯಾಚಿತ್ರಗಾರ ಟಿ. ಎಸ್. ಸತ್ಯನ್ ಅವರದ್ದು

ಭಕ್ತಿ

ರುಜುವಾತು ವಿಶೇಷ ಲೇಖನಗಳು

ಭಕ್ತಿ ಚಳುವಳಿಯ ಹಿನ್ನೆಲೆಯನ್ನು ಕುರಿತು

ಎ. ಕೆ. ರಾಮಾನುಜನ್

ಭಕ್ತಿಹೀನ ಆಧುನಿಕ ಸಂದರ್ಭವನ್ನ ಕುರಿತು

ಪ್ರಸನ್ನ

ದೇವರೊಂದಿಗೆ ತಾಯ್ನುಡಿಯಲ್ಲಿ ಮಾತುಕತೆ

ಎ. ಕೆ. ರಾಮಾನುಜನ್

ಇಂಗ್ಲೀಷ್ ಲೇಖನದ
ಕನ್ನಡ ಅನುವಾದ :
ಮಹಬಲೇಶ್ವರ ರಾವ್

ಭಕ್ತಿಯ ಬಗೆಗೆ ಮಾತನಾಡುವಾಗ ಅದು ಒಂದೇ ಎಂದು ಭಾವಿಸಿ ಮಾತನಾಡುತ್ತಿರುತ್ತೇವೆ. ಆದರೆ ಅದರಲ್ಲಿ ಅನೇಕ ವಿಧಗಳಿವೆ. ಭಕ್ತಿಯ ಅಗಾಧ ವೈವಿಧ್ಯವನ್ನು ನಾವು ಗಮನಿಸಬೇಕು. ಶಿವಭಕ್ತಿ, ವಿಷ್ಣುಭಕ್ತಿ, ದೇವೀಭಕ್ತಿ, ಪುರುಷರ ಭಕ್ತಿ, ಸ್ತ್ರೀಯರ ಭಕ್ತಿ, ಬಂಗಾಳದಲ್ಲಿ ಭಕ್ತಿ, ಕರ್ನಾಟಕದಲ್ಲಿ ಭಕ್ತಿ ಹೀಗೆ ಹಲವು ಪ್ರಭೇದಗಳಿವೆ. ಭಕ್ತಿ ಪಂಥದ ಉಗಮ ಮತ್ತು ಅದರ ಅಂತಿಮ ಸ್ವರೂಪ ಕೂಡ ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿದೆ. ಈ ವೈವಿಧ್ಯವನ್ನು ಅಧ್ಯಯನ ಮಾಡುವ ಅಗತ್ಯವಿದೆ. ನನಗೆ ಒಂದೆರಡು ಭಕ್ತಿ ಪರಂಪರೆಗಳ ಬಗೆಗೆ ಸ್ವಲ್ಪ ಮಟ್ಟಿಗೆ ಗೊತ್ತು. ನನ್ನ ಪ್ರತಿಕ್ರಿಯೆಗಳು ಈ ಭಕ್ತಿ ಪರಂಪರೆಗಳಿಂದ ಪ್ರಭಾವಿತವಾಗಿವೆ. ಇಲ್ಲಿ ಕನ್ನಡ ವೀರಶೈವ ಪರಂಪರೆಯಿಂದ ಮಾತ್ರ ಉದಾಹರಣೆಗಳನ್ನು ಉಲ್ಲೇಖಿಸುತ್ತೇನೆ.

ಜಾತಿ, ಲಿಂಗ ಅಥವಾ ದೇವರ ಕಲ್ಪನೆಯ ಬಗೆಗೆ ಅಭಿಜಾತ ಅಥವಾ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿರುವ ದೃಷ್ಟಿಕೋನಕ್ಕೆ ವಿರುದ್ಧವಾದ ಒಂದು ಪ್ರತಿವ್ಯವಸ್ಥೆಯಾಗಿ ಭಕ್ತಿಪಂಥವನ್ನು ಪರಿಶೀಲಿಸಬಹುದು. ಉದಾಹರಣೆಗೆ ವೈದಿಕ ದೇವರುಗಳು ಸ್ಥಳೀಯ ದೇವರುಗಳಲ್ಲ. ಆದರೆ ಭಕ್ತಿಪಂಥದಲ್ಲಿ ದೇವರುಗಳನ್ನು ಸ್ಥಳೀಯ ರೂಪಗಳಲ್ಲಿ ದೇವಾಲಯಗಳಲ್ಲಿ ಪೂಜಿಸಬಹುದು. ಈ ದೇವರುಗಳಿಗೆ ಬಣ್ಣ, ವ್ಯಕ್ತಿಗತ ಭಾವನೆಗಳು ಹಾಗೂ ಕುಟುಂಬವನ್ನು ಆರೋಪಿಸಬಹುದು. ಇವರು ದೇವರುಗಳಾಗಿರುವಂತೆಯೇ ಮನುಷ್ಯರೂ ಆಗಿದ್ದಾರೆ.

ಅಭಿಜಾತ ಪರಂಪರೆಯಲ್ಲಿ ಯಾವನೇ ಅಸ್ಪೃಶ್ಯ ಅಥವಾ ಸ್ತ್ರೀ ಸಾಹಿತ್ಯ ಕೃತಿಯನ್ನು ರಚಿಸಿದ ಉಲ್ಲೇಖಗಳಿಲ್ಲ. ಆದರೆ ಭಕ್ತಿಪಂಥದಲ್ಲಿ ಇವರೆಲ್ಲ ಪ್ರಮುಖ ಅನುಭಾವೀ ಕವಿಗಳು. ಭಕ್ತಿಪಂಥದ ಮೊದಲ ಆಂದೋಲನ ಐದು ಅಥವಾ ಆರನೆಯ ಶತಮಾನದಲ್ಲಿ ತಮಿಳಿನಲ್ಲಿ ಆರಂಭವಾಗುತ್ತದೆ. ಅದುವರೆಗೆ ಎಲ್ಲ ಧಾರ್ಮಿಕ ರಚನೆಗಳು ಸಂಸ್ಕೃತ, ಪಾಲಿ ಮುಂತಾದ ಭಾಷೆಗಳಲ್ಲಿದ್ದವು. ಸಂಸ್ಕೃತವು ಹಿಂದೂಗಳಿಗೆ ಪಿತೃಭಾಷೆ. ಅದು ಪಿತೃಸಮಾನರ, ಬ್ರಾಹ್ಮಣರ, ಕುಟುಂಬದ ಯಜಮಾನರ,

ಸಮುದಾಯದ ಹಿರಿಯರ ಭಾಷೆ. ಕೆಲವು ಸ್ತ್ರೀಯರಿಗೆ ಕೂಡ ಸಂಸ್ಕೃತ ಭಾಷೆ ಗೊತ್ತಿತ್ತು ಎಂಬುದು ಕಥೆ, ಕಾವ್ಯಗಳಿಂದ ತಿಳಿದು ಬರುತ್ತದೆ. ಆದರೂ ಆ ಕಾಲದಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಸಂಸ್ಕೃತವನ್ನು ಕಲಿಯುವಂತಿರಲಿಲ್ಲ. ಐದನೆಯ ಶತಮಾನದವರೆಗೆ ತಾಯ್ನುಡಿಯಲ್ಲಿ ಯಾವುದೇ ಧಾರ್ಮಿಕ ಕಾವ್ಯ ರಚನೆಯಾದುದು ನಮಗೆ ಕಂಡು ಬರುವುದಿಲ್ಲ. ಜಗತ್ತಿನಲ್ಲಿ ಅತ್ಯುತ್ತಮವೆನ್ನಬಹುದಾದ ವೀರಕಾವ್ಯ ಹಾಗೂ ಪ್ರೇಮ ಕಾವ್ಯಗಳು ತಮಿಳಿನಲ್ಲಿ ಮೊದಲ ಎರಡು, ಮೂರನೆಯ ಶತಮಾನಗಳಲ್ಲಿ ರಚನೆಯಾಗಿವೆ. ಮುರುಗನನ್ನು ಸ್ತುತಿಸುವ ಮೊದಲ ಭಕ್ತಿ ಕಾವ್ಯ ತಮಿಳಿನಲ್ಲಿ ಕ್ರಿ. ಶ. ೫೫೦ರ ಸುಮಾರಿಗೆ ರಚನೆಯಾಯಿತು.

ತಾಯ್ನುಡಿಯಲ್ಲಿ, ಅಂದರೆ ಮಕ್ಕಳ ಹಾಗೂ ಕುಟುಂಬದ ಸದಸ್ಯರ ಮಾತಿನಲ್ಲಿ, ದೇವರ ಜೊತೆ ಮಾತನಾಡುವ ಅವಕಾಶ ಸಿಕ್ಕಿದೊಡನೆ ಎಲ್ಲ ಬಗೆಯ ಮಾನವೀಯ ಹಾಗೂ ಭಾವನಾತ್ಮಕ ಅನುಭವಗಳು ಧರ್ಮಕ್ಕೆ ಸುಸಂಗತವೆನಿಸಿದವು. ಎಲ್ಲ ಕುಟುಂಬ ಸಂಬಂಧಗಳು ಭಕ್ತಿಯ ಭಾವಕೋಶದ ಭಾಗವಾದವು. ಈಗ ದೇವರು ಕೇವಲ ಪ್ರಭುವಲ್ಲ, ಒಡೆಯನಲ್ಲ;ಆತ ತಾಯಿ, ತಂದೆ, ಮಗು, ಪ್ರಿಯಕರ ಎಲ್ಲವೂ.

ಆರನೆಯ ಶತಮಾನದಿಂದ ಮೊದಲ್ಗೊಂಡು ಸುಮಾರು ಮೂರು ಶತಮಾನಗಳ ಕಾಲ ಶಿವ ಹಾಗೂ ವಿಷ್ಣುವನ್ನು ಸ್ತುತಿಸುವ ಕಾವ್ಯ ಸಮೃದ್ಧವಾಗಿ ಮೂಡಿ ಬಂದಿತು. ಇಂದಿಗೂ ಕೂಡ ಇದು ಜೀವಂತ ಪರಂಪರೆಯಾಗಿ ಮುಂದುವರಿದಿದೆ. ಜನ ಈಗಲೂ ಈ ಬಗೆಯ ಹಾಡುಗಬ್ಬಗಳನ್ನು ದೇವಾಲಯಗಳಲ್ಲಿ, ಮೆರವಣಿಗೆಗಳಲ್ಲಿ, ಸಂಗೀತ ಕಛೇರಿಗಳಲ್ಲಿ ಹಾಡುತ್ತಾರೆ ; ಹೊಸ ಹಾಡುಗಳನ್ನು ಕಟ್ಟುತ್ತಾರೆ.

ಆರನೆಯ ಶತಮಾನದ ವೇಳೆಗೆ ತಮಿಳಿನಲ್ಲಿ ಭಕ್ತಿಪಂಥದ ಆರಂಭವಾಗಲು ಕಾರಣವೆಂದರೆ, ಆ ಕಾಲಕ್ಕೆ ಸಂಸ್ಕೃತ ಮತ್ತು ತಮಿಳು ಭಾಷೆಗಳು ಮಾತ್ರ ಅಭಿಜಾತ ಸಾಹಿತ್ಯದ ಭಾಷೆಗಳಾಗಿದ್ದವು. ತಮಿಳು ಭಾಷೆಗೆ ಮಾತ್ರ ತಾಯ್ನುಡಿಯಾಗಿ ಸಾಹಿತ್ಯದ ಒಂದು ದೀರ್ಘ ಪರಂಪರೆ ಇದ್ದಿತು. ಉಳಿದೆಲ್ಲ ಭಾಷೆಗಳು ಮೌಖಿಕ ಸಂಪ್ರದಾಯವನ್ನು ನೆಚ್ಚಿಕೊಂಡ ಉಪಭಾಷೆಗಳಾಗಿದ್ದವು. ಹತ್ತನೆಯ ಶತಮಾನದ ಹೊತ್ತಿಗೆ ಕನ್ನಡದಲ್ಲಿ ಭಕ್ತಿಪಂಥದ ರಚನೆಗಳು ಬಂದವು. ಆನಂತರ ಬೆಂಕಿಯ ಕಿಡಿಯಂತೆ ಭಕ್ತಿ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಭಾಷೆಯಿಂದ ಭಾಷೆಗೆ ಹಬ್ಬಿತು : ತಮಿಳಿನಿಂದ ಕನ್ನಡಕ್ಕೆ, ಕನ್ನಡದಿಂದ ಮರಾಠಿಗೆ, ಹಿಂದಿಗೆ ಮತ್ತು ಉತ್ತರಕ್ಕೆ ಹರಡಿತು. ಈ ಬಗೆಯ ಸಂಬಂಧಗಳು ಹಾಗೂ ಅಖಿಲ ಭಾರತ ವ್ಯಾಪ್ತಿಯ ಸಂಪರ್ಕ ಜಾಲದ ಬಗೆಗೆ ನಾವು ಇನ್ನಷ್ಟು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ನಮ್ಮ ಸಾಮಾಜಿಕ ಮತ್ತು ಸೈದ್ಧಾಂತಿಕ ಇತಿಹಾಸಕ್ಕೆ ಸಂಬಂಧಪಟ್ಟಂತೆ ನಮ್ಮ ಜ್ಞಾನ ಅಸಮರ್ಪಕವಾಗಿದೆ.

ಭಕ್ತಿಪಂಥದ ಆಂದೋಲನಗಳು ಸಾಮಾಜಿಕ ಆಂದೋಲನಗಳೂ ಹೌದು. ಈ ಆಂದೋಲನಗಳಲ್ಲಿ ಎಲ್ಲ ಬಗೆಯ ಮಾನವ ಅನುಭವಗಳನ್ನು, ಧಾರ್ಮಿಕ ನುಡಿಗಟ್ಟಿನಲ್ಲಿ ನಿರೂಪಿಸಲಾಗಿದೆ. ಭಕ್ತಿಯ ಅನುಭವದಲ್ಲಿ ಮನುಷ್ಯ ಕೇವಲ ಮನುಷ್ಯಮಾತ್ರ ಆಗಿದ್ದಾನೆ. ಸ್ತ್ರೀಯರು ಕೂಡ ಈ ಅನುಭವದ ಒಂದು ಭಾಗವೇ. ಜ್ಞಾನ, ಸಾಮಾಜಿಕ ಘನತೆ ಗೌರವಗಳು, ಸೌಲಭ್ಯಗಳು ಇವೇ ಮುಂತಾದವುಗಳಿಗಿಂತ ಭಾವನೆಗಳೆ ಹೆಚ್ಚು ಮುಖ್ಯ. ವಾಸ್ತವವಾಗಿ ನೋಡಿದರೆ, ಸಾಮಾಜಿಕ ಘನತೆ ಗೌರವ, ಪಾಂಡಿತ್ಯ, ಪುರುಷತ್ವ, ಮತ್ತು ಇದೆಲ್ಲದರೊಂದಿಗೆ ಬರುವ ಅಹಂಕಾರ - ಇವೆಲ್ಲವೂ ದೈವಿಕ ಅನುಭವದ ಸಾಕ್ಷಾತ್ಕಾರಕ್ಕೆ ಅಡಚಣೆಗಳು. ಒಮ್ಮೆ ಈ ನಿಲುವು ತೆಗೆದುಕೊಂಡರೆ ಸಾಕು, ಯಾರು ಬೇಕಾದರೂ ದೈವಿಕ ಅನುಭವಗಳನ್ನು ಗಳಿಸುವ ಅರ್ಹತೆ ಉಳ್ಳವರಾಗುತ್ತಾರೆ. ಮಾನವೀಯವಾಗುವುದೆಂದರೆ ಈ ಅರ್ಹತೆ ಗಳಿಸುವುದು ಎಂದೇ ಅರ್ಥ.

ಮೊದಮೊದಲು ಭಕ್ತರು, ಜಾತಿ ಹಾಗೂ ಸಾಂಪತ್ತಿಕ ಸುಸ್ಥಿತಿಯನ್ನು ವಿರೋಧಿಸಿದರೂ, ಅವರು ಹಿಂದುಳಿದ ಜಾತಿ ಹಾಗೂ ಬಡ ವರ್ಗಗಳಿಂದ ಬಂದವರೇನೂ ಆಗಿರಲಿಲ್ಲ. ಅವರಲ್ಲಿ ಅನೇಕರು ಬ್ರಾಹ್ಮಣ, ವೈಶ್ಯ ಹಾಗೂ ಕ್ಷತ್ರಿಯ ವರ್ಣಗಳಿಗೆ ಸೇರಿದವರಾಗಿದ್ದರು. ಬಿಡುವು, ಊಟ, ವಸತಿ, ಸ್ವಾತಂತ್ರ್ಯ ಮತ್ತು ಸುಸ್ಥಿತಿಯನ್ನು ಬುಡಮೇಲು ಮಾಡಲು ಅಗತ್ಯವಾದ ಭದ್ರತೆ ಇಲ್ಲದಿದ್ದರೆ ಕ್ರಾಂತಿಕಾರಿಗಳಾಗಲು ಸಾಧ್ಯವಿಲ್ಲ. ಸೌಲಭ್ಯಗಳಿಲ್ಲದೆ ಸೌಲಭ್ಯಗಳನ್ನು ಒದ್ದು ಬಿಸಾಡಲು ಸಾಧ್ಯವಿಲ್ಲ. ಹಾಗೆ ಸೌಲಭ್ಯಗಳನ್ನು ತ್ಯಜಿಸಿದವರು ಹೀನಕುಲದವರ, ದನಿ ಇಲ್ಲದವರ ದನಿಯಾಗುತ್ತಾರೆ. ಕೆಲವರು ತಮ್ಮ ದನಿಗಳನ್ನು ತಾವ್ಲೇ ಗುರುತಿಸಿಕೊಳ್ಳುತ್ತಾರೆ. ಮಹಾದೇವಿ ಮತ್ತು ಮೀರಾಳ ಹಾಗೆ ಪ್ರಖ್ಯಾತರಾದ ಹಲವು ಮಹಿಳಾ ಅನುಭಾವಿಗಳು ಮೇಲ್ವರ್ಗಗಳಿಂದಲೇ ಬಂದವರು. ಇವರು ತಮ್ಮ ಹಿನ್ನೆಲೆಯಿಂದಾಗಿ ದೊರೆತ ಸೌಲಭ್ಯಗಳನ್ನು ಕಿತ್ತೆಸೆಯಲು ಯತ್ನಿಸಿದರು.

ಪ್ರಾದೇಶಿಕವಾದ ಪ್ರತಿಯೊಂದು ಭಕ್ತಿ ಆಂದೋಲನವು (ಬಹಳ ಮುಖ್ಯವಾಗಿ ದಕ್ಷಿಣದಲ್ಲಿ) ಒಬ್ಬಳಲ್ಲ ಒಬ್ಬಳು ಮಹಿಳೆಯನ್ನು ಒಳಗೊಂಡಿದೆ. ಭಕ್ತಿ ಮತ್ತು ಕಾವ್ಯ-ಈ ಎರಡು ದೃಷ್ಟಿಗಳಿಂದಲೂ ಆಕೆಯನ್ನು ಪುರುಷನಿಗೆ ಸಮನಾಗಿ ಅಥವಾ ಅದಕ್ಕಿಂತಲೂ ಮಿಗಿಲಾದ ಗೌರವದಿಂದ ಕಾಣಲಾಗಿದೆ. ಕನ್ನಡದ ವೀರಶೈವ ಆಂದೋಲನದಲ್ಲಿ ಪಾಲ್ಗೊಂಡ ಮುನ್ನೂರರಷ್ಟು ಅನುಭಾವಿಗಳಲ್ಲಿ ಸುಮಾರು ೬೦ ಅನುಭಾವಿಗಳು ಸ್ತ್ರೀಯರು. ಇವರೆಲ್ಲ ಅನಾಮಧೇಯರೇನಲ್ಲ. ಅವರ ಹೆಸರುಗಳೊಂದಿಗೆ ಹಲವಾರು ದಂತಕಥೆಗಳು ಸ್ಥಳ ನಾಮಗಳು ತಳುಕು ಹಾಕಿಕೊಂಡಿವೆ. ಇವರಲ್ಲಿ ಹಲವರು ವಚನಕಾರ್ತಿಯರಿದ್ದಾರೆ. ಇವರಲ್ಲಿ ಅತ್ಯಂತ ಪ್ರಸಿದ್ಧಳಾದವಳೆಂದರೆ ಮಹಾದೇವಿಯಕ್ಕ. ಈಕೆ ಸುಮಾರು ಒಂದು ಸಾವಿರ ವಚನಗಳನ್ನು ರಚಿಸಿದ್ದಾಳೆ. ಇಂಥ ಒಂದು ಭಕ್ತಿ ಪರಂಪರೆಯಲ್ಲಿ ಪುರುಷನಾಗಿರುವುದು ಹೇಳಿಕೊಳ್ಳುವ ವಿಶೇಷ ಸಂಗತಿ ಏನೂ ಅಲ್ಲ.

ಅಧಿಕಾರಕ್ಕೆ ಮತ್ತಷ್ಟು ಅಧಿಕಾರದ ದಾಹವಿರುತ್ತದೆ. ಅಧಿಕಾರ ಮತ್ತು ಸೌಲಭ್ಯಗಳಿಗೆ ರಕ್ಷಣೆಯ ಅಗತ್ಯವಿದೆ. ಭಕ್ತಿ ಪರಂಪರೆಯಲ್ಲಿ ಪುರುಷರು ಅಧಿಕಾರ ಮತ್ತು ಸೌಲಭ್ಯದ ಹಂಬಲವನ್ನು

ತೊರೆಯಬೇಕು. ತಮ್ಮ ರಕ್ಷಣೆಯ ತಡೆಗೋಡೆಗಳನ್ನು ಕಿತ್ತೊಗೆಯಬೇಕು. ಅಷ್ಟು ಮಾತ್ರವಲ್ಲದೆ ಕಟ್ಟಕಡೆಗೆ ಪುರುಷತ್ವವನ್ನೂ ಮೀರಿ ನಿಲ್ಲಬೇಕು. ಹಾಗಾಗಿ ಭಕ್ತಿ ಪಂಥದಲ್ಲಿ ಪುರುಷ ಅನುಭಾವಿಗಳು ಸ್ತ್ರೀಯರಾಗಲು ಬಯಸುತ್ತಾರೆ; ಪುರುಷತ್ವವನ್ನು ಕಿತ್ತೊಗೆಯಲು ಬಯಸುತ್ತಾರೆ. ಹೀಗೆ ಪುರುಷ ಅನುಭಾವಿಗಳು ಒಂದು ಬಗೆಯ ತೃತೀಯ ಲಿಂಗವಾಗುತ್ತಾರೆ. ಪುರುಷ ಮತ್ತು ಸ್ತ್ರೀಯರುಗಳ ನಡುವೆ ಇರುವ ಸೀಮಾರೇಖೆಗಳು ಅವರ ಬದುಕಿನಲ್ಲಿ ಪರಸ್ಪರ ತಾಕಲಾಡುತ್ತವೆ. ದಾಸಿಮಯ್ಯ ಹೇಳುತ್ತಾನೆ-

ಮೊಲೆಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ

(ವಚನ ಕಮ್ಮಟಸಂಪಾದಕರು :ಕೆ. ಮರುಳಸಿದ್ಧಪ್ಪ, ಕಿ. ರಂ ನಾಗರಾಜ, ಕರ್ನಾಟಕ ಸರಕಾರ ೧೯೮೩)

ಅಂಗರಚನೆಯೇ ಅದೃಷ್ಟವೆಂದು ಫ್ರಾಯ್ಡ್ ಹೇಳಿದ. ದಾಸಿಮಯ್ಯನ ವಚನವು ಇದಕ್ಕೆ ವಿರುದ್ಧವಾದುದನ್ನು ಸಾರುತ್ತದೆ. ಅಂಗಾಗ ರಚನೆಯು ಸ್ತ್ರೀ ಪುರುಷರ ಆತ್ಮವನ್ನು ಬಂಧಿಸುವುದಿಲ್ಲ; ಸಂಸ್ಕೃತಿ ಮಾತ್ರವೇ ಲಿಂಗನೀತಿ ಅಥವಾ ವಿವಿಧ ಪಾತ್ರಗಳನ್ನು ನಿರ್ದೇಶಿಸುತ್ತದೆ; ಪುಲ್ಲಿಂಗ-ಸ್ತ್ರೀಲಿಂಗಗಳೆಂದು ವಿಭಾಜಿಸುತ್ತವೆ. ತನ್ಮೂಲಕ ಕಲೆ, ಸಮಾಜ, ಜ್ಞಾನ ಅಥವಾ ಆತ್ಮಜ್ಞಾನ ಇವೇ ಮುಂತಾದ ವಿಷಯಗಳಲ್ಲಿನ ಸಾಧನೆಯನ್ನು ನಿರ್ಬಂಧಿಸುತ್ತದೆ. ಈ ಬಗೆಯ ವಚನಗಳು ಸಾಮಾಜಿಕ ನೆಲೆಯಲ್ಲಿ ಹೆಣ್ಣು ಪುರುಷನಿಗಿಂತ ಭಿನ್ನವಾಗಿದ್ದರೂ ಮಾನಸಿಕ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ಆಕೆಯನ್ನು ಭಿನ್ನವೆಂದು ಗುರುತಿಸುವುದಿಲ್ಲ.

ಪುರುಷರು ಪರಂಪರಾಗತವಾಗಿ ಪಡೆದುಕೊಂಡು ಬಂದಿರುವ ಗುಣಲಕ್ಷಣಗಳನ್ನು ಸ್ತ್ರೀಯರು ಭಕ್ತಿ ಆಂದೋಲನದ ಮೂಲಕ ಪಡೆದುಕೊಳ್ಳುತ್ತಾರೆ. ಅವರು ತಮ್ಮನ್ನು ನಿರ್ಬಂಧಿಸುವ ಮನುಸ್ಮೃತಿಯ ಕಟ್ಟಳೆಗಳನ್ನು ಮುರಿಯುತ್ತಾರೆ. ಉದಾಹರಣೆಗೆ, ಓರ್ವ ಗೌರವಾನ್ವಿತ ಸ್ತ್ರೀ ಸ್ವತಂತ್ರವಾಗಿ ಬದುಕುವಂತಿಲ್ಲ, ಹೊರಗೆಲ್ಲೂ ಸಂಚರಿಸುವಂತಿಲ್ಲ. ತನ್ನ ಗಂಡನಿಗೆ ಲೈಂಗಿಕ ಸುಖವನ್ನು ನಿರಾಕರಿಸುವಂತಿಲ್ಲ. ಸ್ತ್ರೀ ಅನುಭಾವಿಗಳಾದರೋ ಒಂಟಿಯಾಗಿ ಸಂಚರಿಸುತ್ತಾರೆ. ಗಂಡ, ಮಕ್ಕಳು ಹಾಗೂ ಸಂಸಾರವನ್ನೇ ತೊರೆಯುತ್ತಾರೆ.

ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ!
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ

ಚೆಲುವಂಗಾನೊಲಿದೆನವ್ವಾ!
ಭವವಿಲ್ಲದ ಭಯವಿಲ್ಲದ ಚೆಲುವಂಗಾನೊಲಿದೆ!
ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ!
ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ

(ಅಕ್ಕನ ವಚನಗಳು, ಸಂ.: ಡಾ. ಎಲ್. ಬಸವರಾಜು ೧೯೭೭)

ಸ್ತ್ರೀ ಹಾಗೂ ಪುರುಷ ಅನುಭಾವಿಗಳ ನಡುವೆ ಇರುವ ವ್ಯತ್ಯಾಸಗಳು, ಇವರ ಜೀವನ ಮತ್ತು ಕಾವ್ಯದ ಪರಿಶೀಲನೆಯಿಂದ ವ್ಯಕ್ತವಾಗುತ್ತವೆ. ಸಾಮಾನ್ಯವಾಗಿ ಪುರುಷ ಅನುಭಾವಿಗಳು ತಮ್ಮ ವ್ಯಕ್ತಿತ್ವದಲ್ಲಿ ಪರಿವರ್ತನೆಯಾಗಿ ದೇವರನ್ನು ಕಾಣುತ್ತಾರೆ. ಆದರೆ ಸ್ತ್ರೀಯರು ಮೊದಲಿನಿಂದಲೂ ತಮ್ಮ ದೇವರಲ್ಲಿ ಪ್ರೇಮಾನುರಕ್ತರಾಗಿರುತ್ತಾರೆ. ಹೀಗಾಗಿ ಅವರ ವ್ಯಕ್ತಿತ್ವದಲ್ಲಿ ಪರಿವರ್ತನೆಯಾಗುವುದಿಲ್ಲ. ಅವರು ದೇವರನ್ನು ಮಾತ್ರವೇ ತಮ್ಮ ಗಂಡನೆಂದು ಪರಿಗಣಿಸುತ್ತಾರೆ. ಒತ್ತಾಯಕ್ಕೆ ಕಟ್ಟುಬಿದ್ದು ಮದುವೆಯಾಗುತ್ತಾರೆ. ಮಹಾದೇವಿಯಕ್ಕ ಹೀಗೆ ಒತ್ತಾಯಕ್ಕೆ ಕಟ್ಟುಬಿದ್ದು, ಮೂರು ಷರತ್ತುಗಳನ್ನು ವಿಧಿಸಿ ಮದುವೆಯಾಗುತ್ತಾಳೆ. ಗಂಡ ಆ ಷರತ್ತುಗಳನ್ನು ಉಲ್ಲಂಘಿಸಿದಾಗ ಆತನನ್ನು ತೊರೆಯುತ್ತಾಳೆ. ಇದಾದ ಬಳಿಕ ಆಕೆ ಸಮಾನಮನಸ್ಕರನ್ನು ಅರಸುತ್ತ ಅಲೆಯುತ್ತಾಳೆ.

ಕವಿಗಳು ಒಮ್ಮೆ ತಮ್ಮ ಕುಟುಂಬದಲ್ಲಿ, ಇನ್ನೊಮ್ಮೆ ಸಮಾನ ಮನಸ್ಕರ ಗುಂಪಿನಲ್ಲಿ-ಹೀಗೆ ಎರಡು ಬಾರಿ ಜನ್ಮ ಎತ್ತುತ್ತಾರಂತೆ. ಭಕ್ತರು ದ್ವಿಜತ್ವದ ಕಲ್ಪನೆಯನ್ನು ತಿರಸ್ಕರಿಸುತ್ತಾರಾದರೂ ಎರಡು ಬಾರಿ ಜನ್ಮವೆತ್ತುವ ಮಾತು ಅವರ ಮಟ್ಟಿಗೆ ನಿಜವೇ. ಅನೇಕ ಭಕ್ತರು ತಮ್ಮ ಕುಟುಂಬವನ್ನು ತೊರೆದು ಇನ್ನೊಂದು ಬಳಗವನ್ನು ಅರಸಿಕೊಂಡು ಹೋಗುತ್ತಾರೆ. ಪರ್ಯಾಯ ಸಮಾಜವ್ಯವಸ್ಥೆಯ ಸ್ಥಾಪನೆಯ ಉದ್ದೇಶದಿಂದ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗುತ್ತದೆ. ಹೀಗಾಗಿ ಮಹಾದೇವಿಯಕ್ಕ ಇತರ ಭಕ್ತರನ್ನು **ತಂದೆಗಳಿರಾ, ಅಣ್ಣಗಳಿರಾ** ಎಂದು ಸಂಬೋಧಿಸುತ್ತಾಳೆ; ಅವರೆಲ್ಲ ವಧುವಿನ ಬಳಗದವರಾಗಿ ತನ್ನನ್ನು ಚೆನ್ನಮಲ್ಲಿಕಾರ್ಜುನನಿಗೆ ಮದುವೆ ಮಾಡಿಕೊಟ್ಟರೆಂದೂ ಹೇಳುತ್ತಾಳೆ. ಸ್ವತಃ ಆಕೆಯನ್ನು ಅಕ್ಕ ಎಂದು ಸಂಬೋಧಿಸಲಾಗಿದೆ.

ಮಹಾದೇವಿಯಕ್ಕ ದೇವರನ್ನು ಕುರಿತು ಪ್ರೇಮಭರಿತ ವಚನಗಳನ್ನು ರಚಿಸಿದ್ದಾಳೆ. ತನ್ನೊಳಗೆ ಓರ್ವ ಪ್ರಿಯಕರನಿದ್ದಾನೆ;ಹೊರಗೆ ಗಂಡನಿದ್ದಾನೆ. ಈ ಇಬ್ಬರನ್ನೂ ಸಂಭಾಳಿಸಿಕೊಂಡು ಹೋಗುವುದು ಕಷ್ಟ ಎನ್ನುತ್ತಾಳೆ ಆಕೆ. ಗಂಡ ಮತ್ತು ಕುಟುಂಬವೆಂಬುದು ಐಹಿಕ, ಸಾಮಾಜಿಕ ಬೇಡಿಕೆಗಳ ಸಂಕೇತವಾಗಿರುವುದಲ್ಲದೆ, ಅಕ್ಕ ನಂಬಿರುವ ಮೌಲ್ಯಗಳಿಗೆ ವ್ಯತಿರಿಕ್ತವಾದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ.

ಅತ್ತೆ ಮಾಯೆ, ಮಾವ ಸಂಸಾರಿ
ಮೂವರು ಮೈದುನರು ಹುಲಿಯಂಥವರು
ನಲ್ಲನು ನಗೆವೆಣ್ಣು ಕೆಳದಿಯ ಭಾವದಲಿರುವನು
ಇವದೇವನಲ್ಲ
ಅತ್ತಿಗೆಯ ಮೀರಲಾರೆನು
ತೊತ್ತುವಿನ ಕಾವಲು ಹೇಳುವರೆ ಕೇಳು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರವನಾಡುವೆನು ಹರನ ಕೂಡೆ !
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ
ಕರ ಚೆಲುವ ಶ್ರೀ ಶೈಲ ಚೆನ್ನಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆನು

(ಅಕ್ಕನ ವಚನಗಳು : ಡಾ. ಎಲ್. ಬಸವರಾಜು ೧೯೭೭)

ಇಲ್ಲಿ ಅಕ್ಕ ತನ್ನೊಳಗೆ ಒಂದು ಸಂಘರ್ಷವನ್ನು ಅನುಭವಿಸುತ್ತಿದ್ದಾಳೆ. ಆಕೆ ನಿಜವಾಗಿಯೂ ತನ್ನ ದೇವರನ್ನು ಮತ್ತು ಪ್ರೇಮವನ್ನು ಕಂಡುಕೊಳ್ಳಬೇಕಾದರೆ ಬಂಧುಗಳು, ಸಾಮಾಜಿಕ ಸ್ಥಿತಿ ಹಾಗೂ ಸ್ತ್ರೀ ಪುರುಷರನ್ನು ನಿರ್ಬಂಧಿಸುವ ರೀತಿ-ನೀತಿಗಳನ್ನು ಕಿತ್ತೊಗೆಯಲೇ ಬೇಕು. ಕುಟುಂಬ ಮತ್ತು ಬಂಧುಗಳು - ಪುರುಷ ನಿರ್ಮಿತ ಜಗತ್ತಿನ ಸಂಕೇತಗಳಾಗಿವೆ. 'ಮಾಯಾ'ಪದದ ಮೂಲರೂಪ 'ಮಾ'ಎಂದರೆ 'ರಚಿಸು', 'ನಿರ್ಮಿಸು'ಎಂಬ ಅರ್ಥ ಪ್ರತೀತವಾಗುತ್ತದೆ. ಆದುದರಿಂದ ಈ ಮಾಯಾ ಜಗತ್ತನ್ನು ಒಳಹೊಕ್ಕು ಭೇದಿಸಿ ನೋಡಬೇಕು ಆಕೆ.

ಅಕ್ಕನ ಒಟ್ಟು ಬದುಕು ಈ ಒಳಹೊಗುವ, ಭೇದಿಸುವ ಕ್ರಿಯೆಯಲ್ಲಿ ಸಂಭ್ರಮಿಸುವಾಗ, ಆಕೆ ತನ್ನ ಉಡುಪುಗಳನ್ನು ಬಿಸುಟು ನೀಳ ಕೇಶರಾಶಿಯಿಂದ ಮೈಮುಚ್ಚಿಕೊಂಡು ಓಡಾಡುತ್ತಾಳೆ. ಪಾವಿತ್ರ್ಯ ಹಾಗೂ ನಗ್ನತೆಯ ಬಗೆಗೆ ಆಕೆಯ ಅದ್ಭುತವಾದ ವಚನವೊಂದು ಹೀಗಿದೆ :-

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ ?
ಉಟ್ಟಂತ ಉಡಿಗೆ ತೊಡಿಗೆಯನೆಲ್ಲ ಸೆಳೆದುಕೊಳಬಹುದಲ್ಲದೆ

ಚೆಲುವಂಗಾನೊಲಿದೆನವ್ವಾ!
ಭವವಿಲ್ಲದ ಭಯವಿಲ್ಲದ ಚೆಲುವಂಗಾನೊಲಿದೆ!
ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದ!
ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ

(ಅಕ್ಕನ ವಚನಗಳು, ಸಂ.: ಡಾ. ಎಲ್. ಬಸವರಾಜು ೧೯೭೭)

ಸ್ತ್ರೀ ಹಾಗೂ ಪುರುಷ ಅನುಭಾವಿಗಳ ನಡುವೆ ಇರುವ ವ್ಯತ್ಯಾಸಗಳು, ಇವರ ಜೀವನ ಮತ್ತು ಕಾವ್ಯದ ಪರಿಶೀಲನೆಯಿಂದ ವ್ಯಕ್ತವಾಗುತ್ತವೆ. ಸಾಮಾನ್ಯವಾಗಿ ಪುರುಷ ಅನುಭಾವಿಗಳು ತಮ್ಮ ವ್ಯಕ್ತಿತ್ವದಲ್ಲಿ ಪರಿವರ್ತನೆಯಾಗಿ ದೇವರನ್ನು ಕಾಣುತ್ತಾರೆ. ಆದರೆ ಸ್ತ್ರೀಯರು ಮೊದಲಿನಿಂದಲೂ ತಮ್ಮ ದೇವರಲ್ಲಿ ಪ್ರೇಮಾನುರಕ್ತರಾಗಿರುತ್ತಾರೆ. ಹೀಗಾಗಿ ಅವರ ವ್ಯಕ್ತಿತ್ವದಲ್ಲಿ ಪರಿವರ್ತನೆಯಾಗುವುದಿಲ್ಲ. ಅವರು ದೇವರನ್ನು ಮಾತ್ರವೇ ತಮ್ಮ ಗಂಡನೆಂದು ಪರಿಗಣಿಸುತ್ತಾರೆ. ಒತ್ತಾಯಕ್ಕೆ ಕಟ್ಟುಬಿದ್ದು ಮದುವೆಯಾಗುತ್ತಾರೆ. ಮಹಾದೇವಿಯಕ್ಕ ಹೀಗೆ ಒತ್ತಾಯಕ್ಕೆ ಕಟ್ಟುಬಿದ್ದು, ಮೂರು ಷರತ್ತುಗಳನ್ನು ವಿಧಿಸಿ ಮದುವೆಯಾಗುತ್ತಾಳೆ. ಗಂಡ ಆ ಷರತ್ತುಗಳನ್ನು ಉಲ್ಲಂಘಿಸಿದಾಗ ಆತನನ್ನು ತೊರೆಯುತ್ತಾಳೆ. ಇದಾದ ಬಳಿಕ ಆಕೆ ಸಮಾನಮನಸ್ಕರನ್ನು ಅರಸುತ್ತ ಅಲೆಯುತ್ತಾಳೆ.

ಕವಿಗಳು ಒಮ್ಮೆ ತಮ್ಮ ಕುಟುಂಬದಲ್ಲಿ, ಇನ್ನೊಮ್ಮೆ ಸಮಾನ ಮನಸ್ಕರ ಗುಂಪಿನಲ್ಲಿ-ಹೀಗೆ ಎರಡು ಬಾರಿ ಜನ್ಮ ಎತ್ತುತ್ತಾರಂತೆ. ಭಕ್ತರು ದ್ವಿಜತ್ವದ ಕಲ್ಪನೆಯನ್ನು ತಿರಸ್ಕರಿಸುತ್ತಾರಾದರೂ ಎರಡು ಬಾರಿ ಜನ್ಮವೆತ್ತುವ ಮಾತು ಅವರ ಮಟ್ಟಿಗೆ ನಿಜವೇ. ಅನೇಕ ಭಕ್ತರು ತಮ್ಮ ಕುಟುಂಬವನ್ನು ತೊರೆದು ಇನ್ನೊಂದು ಬಳಗವನ್ನು ಅರಸಿಕೊಂಡು ಹೋಗುತ್ತಾರೆ. ಪರ್ಯಾಯ ಸಮಾಜವ್ಯವಸ್ಥೆಯ ಸ್ಥಾಪನೆಯ ಉದ್ದೇಶದಿಂದ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗುತ್ತದೆ. ಹೀಗಾಗಿ ಮಹಾದೇವಿಯಕ್ಕ ಇತರ ಭಕ್ತರನ್ನು **ತಂದೆಗಳಿರಾ, ಅಣ್ಣಗಳಿರಾ** ಎಂದು ಸಂಬೋಧಿಸುತ್ತಾಳೆ; ಅವರೆಲ್ಲ ವಧುವಿನ ಬಳಗದವರಾಗಿ ತನ್ನನ್ನು ಚೆನ್ನಮಲ್ಲಿಕಾರ್ಜುನನಿಗೆ ಮದುವೆ ಮಾಡಿಕೊಟ್ಟರೆಂದೂ ಹೇಳುತ್ತಾಳೆ. ಸ್ವತಃ ಆಕೆಯನ್ನು ಅಕ್ಕ ಎಂದು ಸಂಬೋಧಿಸಲಾಗಿದೆ.

ಮಹಾದೇವಿಯಕ್ಕ ದೇವರನ್ನು ಕುರಿತು ಪ್ರೇಮಭರಿತ ವಚನಗಳನ್ನು ರಚಿಸಿದ್ದಾಳೆ. ತನ್ನೊಳಗೆ ಓರ್ವ ಪ್ರಿಯಕರನಿದ್ದಾನೆ;ಹೊರಗೆ ಗಂಡನಿದ್ದಾನೆ. ಈ ಇಬ್ಬರನ್ನೂ ಸಂಭಾಳಿಸಿಕೊಂಡು ಹೋಗುವುದು ಕಷ್ಟ ಎನ್ನುತ್ತಾಳೆ ಆಕೆ. ಗಂಡ ಮತ್ತು ಕುಟುಂಬವೆಂಬುದು ಐಹಿಕ, ಸಾಮಾಜಿಕ ಬೇಡಿಕೆಗಳ ಸಂಕೇತವಾಗಿರುವುದಲ್ಲದೆ, ಅಕ್ಕ ನಂಬಿರುವ ಮೌಲ್ಯಗಳಿಗೆ ವ್ಯತಿರಿಕ್ತವಾದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ.

ಅತ್ತೆ ಮಾಯೆ, ಮಾವ ಸಂಸಾರಿ
ಮೂವರು ಮೈದುನರು ಹುಲಿಯಂಥವರು
ನಲ್ಲನು ನಗೆವೆಣ್ಣು ಕೆಳದಿಯ ಭಾವದಲಿರುವನು
ಇವದೇವನಲ್ಲ
ಅತ್ತಿಗೆಯ ಮೀರಲಾರೆನು
ತೊತ್ತುವಿನ ಕಾವಲು ಹೇಳುವರೆ ಕೇಳು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರವನಾಡುವೆನು ಹರನ ಕೂಡೆ !
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ
ಕರ ಚೆಲುವ ಶ್ರೀ ಶೈಲ ಚೆನ್ನಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆನು

(ಅಕ್ಕನ ವಚನಗಳು : ಡಾ. ಎಲ್. ಬಸವರಾಜು ೧೯೭೭)

ಇಲ್ಲಿ ಅಕ್ಕ ತನ್ನೊಳಗೆ ಒಂದು ಸಂಘರ್ಷವನ್ನು ಅನುಭವಿಸುತ್ತಿದ್ದಾಳೆ. ಆಕೆ ನಿಜವಾಗಿಯೂ ತನ್ನ ದೇವರನ್ನು ಮತ್ತು ಪ್ರೇಮವನ್ನು ಕಂಡುಕೊಳ್ಳಬೇಕಾದರೆ ಬಂಧುಗಳು, ಸಾಮಾಜಿಕ ಸ್ಥಿತಿ ಹಾಗೂ ಸ್ತ್ರೀ ಪುರುಷರನ್ನು ನಿರ್ಬಂಧಿಸುವ ರೀತಿ-ನೀತಿಗಳನ್ನು ಕಿತ್ತೊಗೆಯಲೇ ಬೇಕು. ಕುಟುಂಬ ಮತ್ತು ಬಂಧುಗಳು - ಪುರುಷ ನಿರ್ಮಿತ ಜಗತ್ತಿನ ಸಂಕೇತಗಳಾಗಿವೆ. 'ಮಾಯಾ'ಪದದ ಮೂಲರೂಪ 'ಮಾ'ಎಂದರೆ 'ರಚಿಸು', 'ನಿರ್ಮಿಸು'ಎಂಬ ಅರ್ಥ ಪ್ರತೀತವಾಗುತ್ತದೆ. ಆದುದರಿಂದ ಈ ಮಾಯಾ ಜಗತ್ತನ್ನು ಒಳಹೊಕ್ಕು ಭೇದಿಸಿ ನೋಡಬೇಕು ಆಕೆ.

ಅಕ್ಕನ ಒಟ್ಟು ಬದುಕು ಈ ಒಳಹೊಗುವ, ಭೇದಿಸುವ ಕ್ರಿಯೆಯಲ್ಲಿ ಸಂಭ್ರಮಿಸುವಾಗ, ಆಕೆ ತನ್ನ ಉಡುಪುಗಳನ್ನು ಬಿಸುಟು ನೀಳ ಕೇಶರಾಶಿಯಿಂದ ಮೈಮುಚ್ಚಿಕೊಂಡು ಓಡಾಡುತ್ತಾಳೆ. ಪಾವಿತ್ರ್ಯ ಹಾಗೂ ನಗ್ನತೆಯ ಬಗೆಗೆ ಆಕೆಯ ಅದ್ಭುತವಾದ ವಚನವೊಂದು ಹೀಗಿದೆ :-

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ ?
ಉಟ್ಟಂತ ಉಡಿಗೆ ತೊಡಿಗೆಯನೆಲ್ಲ ಸೆಳೆದುಕೊಳಬಹುದಲ್ಲದೆ

ಮುಚ್ಚಿ ಮುಸುಕಿದರೆ ನಿರ್ವಾಣವ ಸೆಳೆದುಕೊಳಬಹುದೇ?

ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆ ಗೆಟ್ಟವಳಿಗೆ

ಉಡುಗೆ ತೊಡಿಗೆಯ ಹಂಗೇಕೊ ಮರುಳೆ ?!

(ವಚನ ಕಮ್ಮಟ, ಸಂ.: ಕೆ. ಮರುಳ ಸಿದ್ದಪ್ಪ, ಕಿ. ರಂ ನಾಗರಾಜ, ಕರ್ನಾಟಕ ಸರಕಾರ ೧೯೮೩)

ಈ ರೀತಿ ಉಡಿಗೆ ತೊಡುಗೆಗಳ ಹಂಗು ತೊರೆಯುವುದೆಂದರೆ ಸಾಮಾಜಿಕ ಕಟ್ಟುಕಟ್ಟಳೆಗಳು, ಸಮರ್ಥನೆಗಳು ಮತ್ತು ಅರ್ಥವಂತಿಕೆಯ ಮೇರೆಗಳನ್ನು ಮೀರುವುದಾಗಿದೆ. ದೈವಿಕ ಅನುಭವಕ್ಕೆ ತೆರೆದುಕೊಳ್ಳುವುದನ್ನು ನಗ್ನತೆಯು ಸಂಕೇತಿಸುತ್ತದೆ. ಕೃಷ್ಣ ನಾರಿಯರ ಸೀರೆಗಳನ್ನು ಕದಿಯುತ್ತಾನೆ. ಜೈನ ಪರಂಪರೆಯಲ್ಲಿ ಇಡೀ ಒಂದು ಸಮುದಾಯ ನಗ್ನತೆಗೆ ಬೆಲೆಕೊಟ್ಟು ದಿಗಂಬರ ಎಂದು ಕರೆದು ಕೊಂಡಿದೆ.

ಕಾಶ್ಮೀರದ ಲಲ್ಲಾದೇದೆ ಮತ್ತು ಮಹಾದೇವಿಯಂಥ ಸ್ತ್ರೀ ಅನುಭಾವಿಗಳು ಬಟ್ಟೆಯನ್ನು ಕಿತ್ತೆಸೆದರು. ಹೀಗೆ ಮಾಡುವುದರ ಮೂಲಕ ಅವರು ಕಾಮ ಪ್ರಚೋದಕವಾದ ಸ್ತ್ರೀ ದೇಹದ ಆಕರ್ಷಕ ಅಂಗಾಂಗಗಳನ್ನೂ, ಪಾವಿತ್ರ್ಯವನ್ನೂ ನಿರಾಕರಿಸಿದರು. ಸ್ತ್ರೀ ಅನುಭಾವಿಗಳು ಪುರುಷರ ಕಾಮ ವಿಕಾರಗಳನ್ನು ಎದುರಿಸಬೇಕಾಗಿ ಬಂದ ಸಂದರ್ಭಗಳೂ ಇವೆ. ಉಡುಗೆ ತೊಡುಗೆಗಳಂತೆ ಪಾವಿತ್ರ್ಯ ಕೂಡ ಲೈಂಗಿಕ ಕುತೂಹಲವನ್ನು ನಿರ್ಬಂಧಿಸುವ ಮತ್ತು ಜಾಗೃತಗೊಳಿಸುವ ಕ್ರಿಯೆಯಾಗಿದೆ; ಅದು ಲೈಂಗಿಕ ಕುತೂಹಲವನ್ನು ದಮನಿಸುವುದಿಲ್ಲ. ಬಟ್ಟೆಬರೆಗಳ ಹಂಗು ತೊರೆದಾಗ ಈ ವಿರೋಧಾಭಾಸ ಬೆಳಕಿಗೆ ಬರುತ್ತದೆ.

ಬಟ್ಟೆಬರೆಗಳ ಹಂಗು ತೊರೆಯುವುದು ಕೂಡ ಸಮಾಜವನ್ನು ಧಿಕ್ಕರಿಸುವ, ಕಂಟಕಗಳನ್ನು ನಿವಾರಿಸಿಕೊಳ್ಳುವ, ಬಾಹ್ಯ ಸೌಂದರ್ಯದ ನಿರ್ವಹಣೆ ಮತ್ತು ಸಾಮಾಜಿಕ ತಾರತಮ್ಯ ನೀತಿಯನ್ನು ತಿರಸ್ಕರಿಸಿ ನಿಲ್ಲುವ ಒಂದು ಬಗೆಯ ಪ್ರತಿಭಟನೆ. ಸ್ತ್ರೀ ಪುರುಷರ ನಡುವೆ ಇರುವ ವ್ಯತ್ಯಾಸಗಳನ್ನು ಬಯಲಿಗೆಳೆಯುವ ಮತ್ತು ಅದನ್ನು ನಿರ್ಲಕ್ಷಿಸುವ ಮೂಲಕ ಆಕೆ ಬಿಡುಗಡೆ ಹೊಂದುತ್ತಾಳೆ ; ಅಲ್ಲದೆ ಹೀಗೆ ಮಾಡುವ ಎಲ್ಲರಿಗೂ ಬಿಡುಗಡೆ ದೊರೆಯುತ್ತದೆ.

ಭಕ್ತಿ ಅಂದೋಲನಗಳಲ್ಲಿ ಕಂಡು ಬರುವ ಸ್ತ್ರೀಯರು ಹಾಗೂ ಅಸ್ಪೃಶ್ಯ ಅನುಭಾವಿಗಳ ನಡುವೆ ಹಲವಾರು ಸಮಾನ ಅಂಶಗಳಿವೆ. ಮೇಲ್ವರ್ಗದ ಪುರುಷ ಅನುಭಾವಿಗಳಂತೆ ಇವರಲ್ಲಿ ಯಾರೊಬ್ಬರೂ ಪರಿವರ್ತನೆ ಹೊಂದಬೇಕಾದ ಅಗತ್ಯವಿಲ್ಲ. ಇವರಿಗೆ ಸ್ವತಃ ತಮ್ಮೊಂದಿಗೆ ಜಗಳವಿಲ್ಲ; ಬದಲಿಗೆ ಇವರನ್ನು ಕಡೆಗಣಿಸಿರುವವರೊಂದಿಗೆ, ದೇವರ ಸನಿಹ ಹೋಗಲು ಬಿಡದೆ ಇರುವವರೊಂದಿಗೆ ಇವರಿಗೆ ತಕರಾರುಗಳಿವೆ. ಒಂದು ಕತೆಯಲ್ಲಿ ಬರುವಂತೆ, ದೇವಾಲಯ ಪ್ರವೇಶಕ್ಕೆ ನಿರಾಕರಿಸಿದ್ದ ಬ್ರಾಹ್ಮಣರು ಮತ್ತು ಇತರ ಜಾತಿಗಳೊಂದಿಗೆ ಅಸ್ಪೃಶ್ಯ ಅನುಭಾವಿಗೆ ಜಗಳವಿದೆ. ಆತ ಸಮಾಜ ಬಾಹಿರನೂ

ಪರಿತ್ಯಕ್ತನೂ ಆಗಿ ಹೊಲೆಯರ ಕೇರಿಯಲ್ಲಿ ಬದುಕುತ್ತಾನೆ. ಆತನನ್ನು ನೋಡುವ ಹಂಬಲದಿಂದ ದೇವರು ಊರ ಹೊರಗಿನ ಹೊಲೆಯರ ಕೇರಿಗೆ ಬರುತ್ತಾನೆ. ಬ್ರಾಹ್ಮಣ ಪೂಜಾರಿ ದೇವಾಲಯಕ್ಕೆ ಹೋಗಿ ನೋಡಿದರೆ ಅಲ್ಲಿ ದೇವರಿಲ್ಲ! ದೇವರನ್ನು ಮತ್ತೆ ದೇವಾಲಯಕ್ಕೆ ಕರೆತಂದು ಪ್ರತಿಷ್ಠಾಪಿಸಲಿಕ್ಕಾಗಿ ಆ ಪೂಜಾರಿ ಹೊಲೆಯನನ್ನು ತನ್ನ ಹೆಗಲ ಮೇಲೆ ಹೊತ್ತು ದೇವಾಲಯಕ್ಕೆ ಕರೆತರಬೇಕಾಗುತ್ತದೆ.

ಮಹಾದೇವಿಯಕ್ಕನ ಬದುಕನ್ನು ಪರಿಶೀಲಿಸುವುದರ ಮೂಲಕ ನಾನು ಸ್ತ್ರೀ ಅನುಭಾವಿಗಳ ಬಗೆಗಿನ ನನ್ನ ಅಧ್ಯಯನವನ್ನು ಆರಂಭಿಸಿದೆ. ಮಹಾರಾಷ್ಟ್ರದ **ಬಹಿನಾಬಾಯಿ**, ಕಾಶ್ಮೀರದ **ಲಲ್ಲಾ**, ರಾಜಸ್ಥಾನದ **ಮೀರಾ** ಮತ್ತು ತಮಿಳ್ನಾಡಿನ **ಆಂಡಾಳ್** ಮುಂತಾದ ಭಾರತದ ಇತರ ಭಕ್ತಿಪರಂಪರೆಗಳಲ್ಲಿ ಕಂಡು ಬರುವ ಸ್ತ್ರೀ ಅನುಭಾವಿಗಳ ಬದುಕನ್ನು ಪರಿಶೀಲಿಸಿದಾಗ ಸೀತೆ ಮತ್ತು ಸಾವಿತ್ರಿಯಂಥ ಆದರ್ಶ ನಾರೀಮಣಿ ಮಾದರಿಗಳನ್ನು ತಲೆಕೆಳಗು ಮಾಡುವ, ಉಧ್ವಸ್ಥಗೊಳಿಸುವ ಕೆಲವು ಸಮಾನ ಅಂಶಗಳು ಇವರಲ್ಲಿ ಕಂಡುಬಂದಿವೆ. ಸ್ತ್ರೀ ಅನುಭಾವಿ ಪುರುಷನಿಗೆ ಅಧೀನೆಯಲ್ಲ. ಆಕೆ ತನ್ನ ತಂದೆ ತಾಯಿಗಳನ್ನು ಧಿಕ್ಕರಿಸಿ ವಿವಾಹ ಬಂಧನದಿಂದ ಪಾರಾಗಬಹುದು. ತನ್ನ ರೂಪವನ್ನು ಬದಲಾಯಿಸಿಕೊಂಡು **ಅವ್ವಯಿ**ಯಂತೆ ಮುದುಕಿಯಾಗಬಹುದು. **ತಿಲಕವ್ವೆ**ಯಂತೆ ಗಂಡಸಿನ ರೂಪ ಧರಿಸಬಹುದು. ನಾನು ಪರಿಶೀಲಿಸಿದ ಸುಮಾರು ನೂರು ಸ್ತ್ರೀ ಅನುಭಾವಿಗಳಲ್ಲಿ **ಲಲ್ಲಾ** ಮತ್ತು **ಬಹಿನಾ** ಮಾತ್ರ ದಾರುಣವಾದ ವಿವಾಹ ಜೀವನಕ್ಕೆ ಕಟ್ಟುಬಿದ್ದರು. **ಬಹಿನಾ**ಳಿಗೆ ಒಂದು ಮಗು ಕೂಡ ಇತ್ತು. ಅದಕ್ಕಾಗಿ ಆಕೆ ಬಹಳ ಪಶ್ಚಾತ್ತಾಪ ಪಟ್ಟಿರಬೇಕು. ಆದರೂ ಆ ಮಗು ತನ್ನ ಪೂರ್ವಜನ್ಮದ ಸಂಗಾತಿ ಎಂದು ಆಕೆ ಭಾವಿಸುತ್ತಾಳೆ. ಈ ಅನುಭಾವಿಗಳ ಜೀವನ ಕ್ರಮ ಹಿಂದೂ ನಾರಿಯ ಸಾಂಪ್ರದಾಯಿಕ ಪಡಿಯಚ್ಚಿಗಿಂತ ಎಷ್ಟೊಂದು ಭಿನ್ನವಾಗಿದೆ !

ದಲಾಯಿ ತನ್ನ ಗಂಡನೊಡನೆ ಸರಸದಲ್ಲಿರುವಾಗ ಶಿವ ಆಕೆಯನ್ನು ಕರೆಯುತ್ತಾನೆ. ಆ ಕರೆಯನ್ನು ಕೇಳಿ ಸರಸವನ್ನು ಅಷ್ಟಕ್ಕೆ ಬಿಟ್ಟು ಗಂಡನನ್ನು ತೊರೆಯುತ್ತಾಳೆ. **ಕಾರಿಕಾಲಮ್ಮ** ತನ್ನ ಮಾಯಕದಿಂದ ಗಂಡನಲ್ಲಿ ಭೀತಿ ಹುಟ್ಟಿಸಿ ಆತನನ್ನು ಕೈ ಬಿಡುತ್ತಾಳೆ. ಹೀಗೆ ವಿವಾಹಿತ ಸ್ತ್ರೀ ಅನುಭಾವಿ ಸಾಮಾನ್ಯವಾಗಿ ತನ್ನ ಗಂಡನನ್ನು ತೊರೆಯುತ್ತಾಳೆ. ಒಂದು ವೇಳೆ ವಿಧವೆಯಾಗಿದ್ದರೆ ತನಗೆ ಮದುವೆಯೇ ಆಗಿಲ್ಲವೆಂಬಂತೆ ಆಕೆ ವೈಧವ್ಯದ ಸ್ಥಿತಿಯನ್ನು ನಿರಾಕರಿಸುತ್ತಾಳೆ. **ಮೀರಾ ಸತಿ** ಹೋಗಲು ನಿರಾಕರಿಸುತ್ತಾಳೆ. **ಗೌರಿ** ಮತ್ತು **ವೆಂಕಮ್ಮ** ತಮ್ಮ ತಲೆ ಬೋಳಿಸಿಕೊಳ್ಳಲು ಒಪ್ಪುವುದಿಲ್ಲ. ತಾವು ನಿಜವಾಗಿಯೂ ದೇವರನ್ನು ವರಿಸಿರುವುದರಿಂದ ವಿಧವೆಯಾಗಲು ಸಾಧ್ಯವಿಲ್ಲ ಎಂಬ ಭಾವನೆ ಅವರಲ್ಲಿದೆ. ಈ ಹಿಂದೆ ಉಲ್ಲೇಖಿಸಿದ ವಚನದಲ್ಲಿ **ಮಹಾದೇವಿ** ಹೀಗೆ ಹೇಳುತ್ತಾಳೆ

'ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ'

ವಿವಾಹ ಬಂಧನಗಳಿಂದ ಪಾರಾದ ಬಳಿಕ, ಸ್ತ್ರೀ ಅನುಭಾವಿಯು ಸಾಮಾಜಿಕ ರೀತಿ ನೀತಿಗಳನ್ನು, ವಿಧಿ ನಿಯಮಗಳನ್ನು ಮೀರಿ ಅಸಾಂಪ್ರದಾಯಿಕವಾದ ರೀತಿಯಲ್ಲಿ ಜೀವನ ಸಾಗಿಸುತ್ತಾಳೆ. ಕೆಲವೊಮ್ಮೆ ಆಕೆ ಪುರುಷ ಅನುಭಾವಿ ಅಥವಾ ಶರಣನ ಟೊಳ್ಳುತನವನ್ನು ಕೂಡ ಬಯಲಿಗೆಳೆಯುತ್ತಾಳೆ.

ಆದರೂ ಆಕೆಯ ಗುರು ಓರ್ವ ಗಂಡಸು, ಆಕೆಯ ದೇವರು ಪುರುಷ ಸ್ವರೂಪಿ ಎಂಬುದನ್ನು ನಾವು ಮರೆಯಬಾರದು. ಮಹಾದೇವಿಯಕ್ಕ ಶ್ರೀ ಶೈಲದಲ್ಲಿ, ಅಂಡಾಳ್ ಶ್ರೀರಂಗನಲ್ಲಿ ಲೀನವಾದಂತೆ ಅನೇಕ ಸ್ತ್ರೀ ಅನುಭಾವಿಗಳು ದೇಗುಲದಲ್ಲಿ ದೇವರೊಂದಿಗೆ ಲೀನವಾಗುತ್ತಾರೆ. ಕೆಲವೇ ಕೆಲವರು ಬಹಿನಾ ಬಾಯಿಯಂತೆ ಸಹಜ ಮರಣವನ್ನು ಹೊಂದುತ್ತಾರೆ.

ಭಕ್ತಿ ಪರಂಪರೆಗಳಲ್ಲಿ ಇನ್ನೊಂದು ಬಗೆಯ ಸ್ತ್ರೀ ಅನುಭಾವಿ ಇದ್ದಾಳೆ. ಆಕೆ ಸಂತನ ಹೆಂಡತಿಯಾಗಿದ್ದು, ಸಂತತನದಲ್ಲಿ ತನ್ನ ಗಂಡನನ್ನೂ ಮೀರಿಸುತ್ತಾಳೆ. ಆಕೆಯ ವರ್ತನೆ ನಾಟಕೀಯವಾದ ಪರಿವರ್ತನೆಯನ್ನೇನೂ ಹೊಂದುವುದಿಲ್ಲ; ಆದರೂ ಆಕೆ ಅತ್ಯಂತ ಸಹಜವಾಗಿ, ಅನಾಯಾಸವಾಗಿ ದೇವರ ಸಮೀಪಕ್ಕೆ ಬರುತ್ತಾಳೆ. ಪುರಂದರ ದಾಸರ ಕಥೆಯಲ್ಲಿ ಇದಕ್ಕೆ ನಿದರ್ಶನ ಲಭಿಸುತ್ತದೆ.

ಸಂತನ ಹೆಂಡತಿಯಾಗಿರುವ ಓರ್ವ ಸಾಧಾರಣ ಮಹಿಳೆ ಸಂಸಾರ ಜೀವನವನ್ನು ಧಿಕ್ಕರಿಸುವ ಸ್ತ್ರೀ ಅನುಭಾವಿ-ಇವರ ನಡುವೆ ವೈದೃಶ್ಯ ಗಮನಾರ್ಹವಾಗಿದೆ. ಒಬ್ಬಳು ವಿಶೇಷ ಪ್ರಯತ್ನವನ್ನೇನೂ ಮಾಡದೆ, ಕೇವಲ ತನ್ನ ದಿನನಿತ್ಯದ ಜೀವನದಲ್ಲಿ ವ್ಯಕ್ತಪಡಿಸಿದ ಪ್ರೇಮ ಹಾಗೂ ಭಕ್ತಿಯ ಮೂಲಕ ದೇವರ ಸಾಮಿಪ್ಯ ಸಾಧಿಸುತ್ತಾಳೆ. ಆದರೆ ಸ್ತ್ರೀ ಅನುಭಾವಿಯ ಬದುಕು ತಳಮಳ, ಅನ್ವೇಷಣೆ ಹಾಗೂ ತೀವ್ರ ನಾಟಕೀಯತೆಯಿಂದ ಕೂಡಿರುತ್ತದೆ. ಆಕೆಯ ಹುಡುಕಾಟವೆಂಬುದು ಕುಟುಂಬ ಹಾಗೂ ಮನೆವಾರ್ತೆಯ ಬಂಧನದಾಚೆಗಿನ ಹುಡುಕಾಟವಾಗಿದೆ. ಈ ವೈದೃಶ್ಯಕ್ಕೆ ಸಂವಾದಿಯಾದ ಅಂಶಗಳು ನಮಗೆ ಅಭಿಜಾತ ಪರಂಪರೆ ಮತ್ತು ಜನಪದ ಪರಂಪರೆಯಲ್ಲಿರುವ ದೈವ ದೇವತೆಗಳಲ್ಲಿ ಕಾಣಸಿಗುತ್ತವೆ.

ಅಭಿಜಾತ ಪರಂಪರೆಯಲ್ಲಿ ದೇವತೆಗಳು ದೇವರುಗಳ ಹೆಂಡಂದಿರಾಗಿರುತ್ತಾರೆ. ಅವರು ಕರುಣಾಮಯರೂ ಮಂದಸ್ಮಿತರೂ ಜೀವನ್ಮರಣ ಚಕ್ರದ ಪರಮಪಾಲಕರೂ ಆಗಿರುತ್ತಾರೆ. ಲಕ್ಷ್ಮೀ ಮತ್ತು ಪಾರ್ವತಿ-ಈ ಬಗೆಯ ದೇವತೆಗಳು. ದೇವಗಣದಲ್ಲಿ ಇವರು ತಮ್ಮ ಪತಿ ದೇವರುಗಳಿಗೆ ಅಧೀನರು. ದೇವತೆಗಳನ್ನು ಮುಖ್ಯ ದೇವತೆಗಳೆಂದು, 'ಶಕ್ತಿಸ್ವರೂಪಿ' ಎಂದು ಪೂಜಿಸಿದರೂ ಕೂಡ ಅವರು ತಮ್ಮ ಗಂಡಂದಿರನ್ನು ಅನುಸರಿಸಬೇಕಾದವರು, ಅವರು ಆಗಾಗ್ಗೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಿದರೂ ಕೂಡ ಗಂಡನನ್ನು ಅವಲಂಬಿಸಲೇಬೇಕು. ಆದರೆ ದಕ್ಷಿಣ ಭಾರತದ ಜನಪದ ಪರಂಪರೆಯಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದಲ್ಲ ಒಂದು ಅಧಿದೈವವಿದೆ. ಈ ದೈವಗಳೆಲ್ಲ ತಮ್ಮ ಗಂಡಂದಿರನ್ನು ಧಿಕ್ಕರಿಸುವ ಅಥವಾ ಅವರನ್ನು ಕೊಂದು ತಿನ್ನುವ ದೈವಗಳು. ಇಲ್ಲಿ

ಗಂಡಸು ಹೆಂಗಸಿಗೆ ಅಧೀನ. ಒಂದೊಂದು ಸಲ ಗಂಡ ಹೆಂಡತಿಯನ್ನು ವಂಚಿಸಿರಬಹುದು ಅಥವಾ ಧಿಕ್ಕರಿಸಬಹುದು. ಇದಕ್ಕೆ ಪ್ರತೀಕಾರವಾಗಿ ಹೆಂಡತಿ ಉಗ್ರರೂಪ ಧರಿಸುತ್ತಾಳೆ. ಇದರಿಂದ ವಿಶೇಷ ಶಕ್ತಿ ಲಭಿಸಿ ಆಕೆ ದೈವವಾಗುತ್ತಾಳೆ. ಈ ಬಗೆಯ ದೈವಗಳು ಸ್ವರ್ಗದಿಂದ ಅವತರಿಸುವುದಿಲ್ಲ. ಇವು ಅವತಾರಗಳಲ್ಲ. ಎಲ್ಲ ದೈವಗಳೂ ನಮ್ಮ ನಿಮ್ಮಂತೆ ಮನುಷ್ಯರೇ. ಈ ದೈವಗಳ ಕಥೆ ಎಂಬುದು ದೈವೀ ಸ್ಥಿತಿಗೆ ಏರಿದ ಅಥವಾ ದೆವ್ವಗಳಾದ ಮಾನವರ ಕಥೆ. ಉಗ್ರ ಕೋಪ ಈ ಸಂಪ್ರದಾಯಗಳ ಪ್ರಧಾನ ಲಕ್ಷಣ.

ಒಂದು ವಿಶಿಷ್ಟ ಅಂಶವನ್ನು ನಾವಿಲ್ಲಿ ಮರೆಯಬಾರದು. ಈ ಗ್ರಾಮೀಣ ಮತ್ತು ಭಕ್ತಿ ಪರಂಪರೆಗಳಲ್ಲಿ ಅಸಾಧಾರಣ ಸ್ವಭಾವದ ಸ್ತ್ರೀಯರು ಮತ್ತು ಅವರು ಪ್ರತಿಪಾದಿಸುವ ಮೌಲ್ಯಗಳು ಹಾಗೂ ಕೃತ್ಯಗಳನ್ನು ಜನ ಅನುಮೋದಿಸುತ್ತಾರೆ. ಅವರನ್ನು ತೃಪ್ತಿಪಡಿಸುವ ಯತ್ನಗಳು ನಡೆಯುತ್ತವೆ. ಅವರನ್ನು ಅನುಮೋದಿಸದಿದ್ದರೆ, ಅವರು ನಿಜವಾದ ಪರ್ಯಾಯ ದೈವಗಳಾಗುತ್ತಾರೆ. ಅನುಮೋದನೆ ಮತ್ತು ಆರಾಧನೆಯು ಇವರನ್ನು ಸ್ವೀಕರಿಸಿ ಇವರಲ್ಲಿರುವ ಉಗ್ರತೆಯನ್ನು ಶಮನ ಮಾಡುತ್ತದೆ.

ಈ ಒಂದು ಕಾರಣದಿಂದಾಗಿ ಭಕ್ತಿ ಆಂದೋಲನ ಆರಂಭದಲ್ಲಿ ಕ್ರಾಂತಿಕಾರಿಯಾಗಿದ್ದರೂ ಮುಂದೆ ಯಾಂತ್ರಿಕವೂ ಜಡವೂ ಆಗಿಬಿಟ್ಟಿತು. ಈ ಆಂದೋಲನವನ್ನು ಪುನರ್ ನವೀಕರಿಸಬೇಕು, ಪುನರ್ ವ್ಯಾಖ್ಯಾನಕ್ಕೆ ಒಳಪಡಿಸಬೇಕು ಮತ್ತು ಅದನ್ನು ಪಳಗಿಸುವಿಕೆಯಿಂದ ಪಾರು ಮಾಡಬೇಕು. ಆಗ ಮಾತ್ರ ಈ ಆಂದೋಲನಗಳು ಸ್ತ್ರೀ ಪುರುಷರಿಬ್ಬರಿಗೂ ಇರುವಿಕೆ ಮತ್ತು ನಡವಳಿಕೆಯ ಮಾನವೀಯ ಮತ್ತು ಸೃಷ್ಟಿಶೀಲ ರೀತಿನೀತಿಗಳನ್ನು, ಪರ್ಯಾಯ ವ್ಯವಸ್ಥೆಯನ್ನು ಒದಗಿಸುತ್ತವೆ.

ಭಾರತೀಯ ಸ್ತ್ರೀಯರನ್ನು ಕುರಿತಾಗಿ ಅಧ್ಯಯನ ಮಾಡಬಯಸುವ, ಅವರ ದನಿಗಳನ್ನು ಆಲಿಸಲು ಅಪೇಕ್ಷಿಸುವ ಮತ್ತು ಭಾರತೀಯ ನಾಗರೀಕತೆಯಲ್ಲಿ ಪರ್ಯಾಯ ಪರಿಕಲ್ಪನೆಗಳನ್ನು ಶೋಧಿಸಬಯಸುವ ಪ್ರತಿಯೊಬ್ಬರೂ ಸ್ತ್ರೀ ಅನುಭಾವಿಗಳ ಜೀವನ ಮತ್ತು ಕಾವ್ಯವನ್ನು ಅಭ್ಯಾಸ ಮಾಡಬೇಕು : ಮೌಖಿಕ ಪರಂಪರೆಯಲ್ಲಿ ಲಭಿಸುವ ಮಹಿಳೆಯರ ಕಥೆಗಳು, ಹಾಡುಗಳು, ಒಗಟುಗಳು, ಆಟಗಳು, ಗಾದೆಗಳು, ದೈವ ದೇವತೆಗಳ ಬಗೆಗಿನ ಐತಿಹ್ಯಗಳು ಮತ್ತು ಆಚರಣೆಗಳತ್ತ ಗಮನಹರಿಸಬೇಕು.

ಓದಿ ಸುಮ್ಮನಾಗಿ ಬಿಡುವ ಪತ್ರಿಕೆಯಲ್ಲ ರುಜುವಾತು

ರುಜುವಾತು ಇಷ್ಟವಾಗದಿದ್ದರೆ ಹಾಗೆಂದು ತಿಳಿಸಿ,ಇಷ್ಟವಾದರೆ ಹಾಗೆಂದು ಮಿಕ್ಕವರಿಗೆ ತಿಳಿಸಿ ಚಂದಾದಾರರನ್ನಾಗಿಸಿ. ಇಷ್ಟವಾದರೆ, ಏನು ಇಷ್ಟವಾಯಿತೆಂದು ತಿಳಿಸಿ. ಇಷ್ಟವಾಗದಿದ್ದರೆ, ಏಕೆ ಎಂದು ತಿಳಿಸಿ.

ರುಜುವಾತು ತಿದ್ದಿಕೊಂಡು ಬೆಳೆಯಲು ಸಿದ್ಧವಿರುವ ಚಳುವಳಿ

ಈಚಲ ಚಾಪೆಯೆಂಬ ಮಹಿಮೆಯ ಎಲೆ ಮುಹಮ್ಮದನೆ !

ಪ್ರಸನ್ನ

ದೇವರನ್ನ ನೆನೆಯುವುದು, ಸಂಗೀತ ಹಾಡುವುದು, ಸಾಹಿತ್ಯ ರಚಿಸುವುದು ಮನುಷ್ಯನಿಗೆ ಅತ್ಯಂತ ಆಕರ್ಷಕವಾದ ಹಾಗೂ ಪರಮ ಪೂಜ್ಯವಾದ ಚಟುವಟಿಕೆಗಳು. ಕೆಲವರು ಈ ಚಟುವಟಿಕೆಗಳ ಸುತ್ತ ಬಂಗಾರದ ಪ್ರಭಾವಳಿ ಕಟ್ಟುತ್ತ, ಭವ್ಯವಾದ ಮಂದಿರ ನಿರ್ಮಿಸುತ್ತ - ಜಂಗಮದ ಭಾಷೆಯಲ್ಲಿ ಹೇಳುವುದಾದರೆ - ಸ್ಥಾವರಗಳನ್ನ ಏರಿಸುತ್ತ ನಡೆಯುತ್ತಾರೆ. ಮತ್ತೆ ಕೆಲವರು ತಮ್ಮ ಕಾಲುಗಳನ್ನೇ ಕಂಬಮಾಡುತ್ತ, ಬೆಂಕಿಯ ಹೊಂಡಹಾಯುತ್ತ, ಉಪವಾಸ ಅನುಭವಿಸುತ್ತ, ದೇವರ ಹೆಸರು ಹೇಳಿ ಅಳುತ್ತ, ಗಂಡಸಾದರೆ ಹೆಂಗಸಿನ ಬಟ್ಟೆ ಧರಿಸಿ, ಚಟ್ಟ ಹತ್ತಿ ಕುಳಿತುಕೊಂಡು, ಊರಬೀದಿಗಳಲ್ಲಿ ಸುತ್ತುತ್ತ, ಹೆಂಗಸಾದರೆ, ಮೈಯ ಬಟ್ಟೆಯನ್ನೇ ತೊರೆದು, ಲೋಕದ ಕಣ್ಣಿಗೆ ತನ್ನ ಮಾನವನ್ನು ಚುಚ್ಚಿ ಹಂಗಿಸುತ್ತ, ಸ್ಥಾವರ ಕೆಡವುತ್ತಿರುತ್ತಾರೆ. ಈಚಲ ಚಾಪೆಯೆಂಬ ಮಹಿಮೆಯನ್ನ ಹಾಡುವ ಖವ್ವಾಲಿ ಕೂಡಾ ಸ್ಥಾವರ ಕೆಡವಲಿಕ್ಕೆ ಹೊರಟ ದರ್ಶನವೇ ಹೌದು.

ಸ್ಥಾವರ ಕೆಡವುವವರಲ್ಲಿ ಒಂದು ಸಮಾನ ತಿಳುವಳಿಕೆ ಇರುತ್ತದೆ. ಅದೆಂದರೆ ದೇವರು, ಸಂಗೀತ, ಸಾಹಿತ್ಯಗಳು ಲೌಕಿಕ ಅರ್ಥದಲ್ಲಿ ಅನುಪಯುಕ್ತ ಚಟುವಟಿಕೆಗಳು ಎನ್ನುವ ಅರಿವು ಅವರಲ್ಲಿರುತ್ತದೆ; **ಲೌಕಿಕ ಅನುಪಯುಕ್ತತೆಯ ಕಾರಣಕ್ಕಾಗಿ ಅವು ಆಕರ್ಷಕ ಚಟುವಟಿಕೆಗಳು ; ಲೌಕಿಕ ಅನುಪಯುಕ್ತತೆಯ ಕಾರಣಕ್ಕಾಗಿಯೇ ಅವು ಪೂಜ್ಯ ಚಟುವಟಿಕೆಗಳು ಎನ್ನುವ ತಿಳುವಳಿಕೆ** ಅವರಲ್ಲಿರುತ್ತದೆ. ಆದರೆ ಸ್ಥಾವರಕಟ್ಟುವವರು ಅನುಪಯುಕ್ತತೆಯನ್ನ ಬೈಗುಳವೆಂದೇ ತಿಳಿಯುತ್ತಾರೆ.

---

* ಈಚಲ *ಚಾಪೆಯೆಂಬ ಮಹಿಮೆಯ ಎಲೆ ಮುಹಮ್ಮದನೆ .... ಎಂಬುದು ಸೂಫಿ ಕವಿಯೊಬ್ಬ ದೇವರ ಮಹಿಮೆಯನ್ನ ಕೊಂಡಾಡಲಿಕ್ಕೆ ರಚಿಸಿರುವ ಖವ್ವಾಲಿಯೊಂದರ ಮೊದಲ ಸಾಲು. ಅನಂತರದ ಗಾಯನದಲ್ಲಿ ಖವ್ವಾಲಿಕಾರರು ಈಚಲ ಚಾಪೆಯ ಬಡತನ, ಸರಳತನ, ಸಜ್ಜನಿಕೆಗಳನ್ನ ದೇವರ ಮಹಿಮೆಯೊಟ್ಟಿಗೆ ತಾಕಿಸಿ ಪದ್ಯ ಹೆಣೆಯುತ್ತಾ ಹೋಗುತ್ತಾರೆ: ಮುಹಮ್ಮದನು ಬಳಸಿದ ಚಾಪೆ, ಖುರಾನು ಪಠಿಸಲು ಕೂರುವ ಚಾಪೆ, ಖಜೂರದ ಎಲೆಗಳನ್ನ ಸೀಳಿ ಹೆಣೆದ ಸರಳ ಚಾಪೆ.... ಇತ್ಯಾದಿ ವಿಶ್ಲೇಷಣೆಗಳನ್ನ ಬಳಸಿ ದೇವರನ್ನ ನೆನೆಯುತ್ತಾರೆ.*

ಅನುಪಯುಕ್ತತೆ ಬೈಗುಳವಲ್ಲ ಅಥವಾ ಉಪಯುಕ್ತತೆ ಹೆಗ್ಗಳಿಕೆಯೂ ಅಲ್ಲ. ಬೇಸಾಯ, ನೆಯ್ಗೆ, ಕೈಗಾರಿಕೆ, ಕೂಲಿ ಇತ್ಯಾದಿಗಳು ಹೇಗೆ ಉಪಯುಕ್ತ ಚಟುವಟಿಕೆಗಳೊ ಹಾಗೆ ಸಂಗೀತ, ಸಾಹಿತ್ಯ, ದೇವರು, ಆಟ, ನಾಟಕಗಳು ಅನುಪಯುಕ್ತ ಚಟುವಟಿಕೆಗಳು ಅಷ್ಟೆ.

ಉಪಯುಕ್ತತೆ ಹಾಗೂ ಅನುಪಯುಕ್ತತೆ ಒಂದು ವರ್ಗೀಕರಣವಷ್ಟೆ. ಮಾನವ ಚಟುವಟಿಕೆಗಳನ್ನ ಇನ್ನೂ ಹಲವು ರೀತಿಗಳಲ್ಲಿ ವರ್ಗೀಕರಿಸಬಹುದು. ಉದಾಹರಣೆಗೆ **ಒಳ್ಳೆಯ ಚಟುವಟಿಕೆಗಳು** ಹಾಗೂ **ಕೆಟ್ಟ ಹವ್ಯಾಸಗಳು** ಎಂಬ ವರ್ಗೀಕರಣವೂ ಇದೆ. ಅದು ಮೂಲತಃ ನೈತಿಕ ವರ್ಗೀಕರಣ. ಮಾನವ ಚಟುವಟಿಕೆಗಳನ್ನ ನೈತಿಕ ಮೌಲ್ಯಗಳಾಗಿ ವರ್ಗೀಕರಿಸುವುದು ಜನಪ್ರಿಯ ಮಾದರಿಯಾದರೂ, ಪರಿಣಾಮಕಾರಿ ವರ್ಗೀಕರಣವಲ್ಲ. ನೈತಿಕ ವರ್ಗೀಕರಣದಲ್ಲಿ ಹಲವು ಹತ್ತು ರೀತಿಯ ಚಟುವಟಿಕೆಗಳು ಒಂದೇ ಮಗ್ಗುಲಿಗೆ ಬಂದು ತೊಂದರೆ ಕೊಡುತ್ತವೆ. ಉದಾಹರಣೆಗೆ, ಇಂತಹ ವರ್ಗೀಕರಣದಲ್ಲಿ ಬೇಸಾಯ, ದೇವರು, ಕೈಗಾರಿಕೆ, ಕೂಲಿನಾಲಿ, ಸಾಹಿತ್ಯ ರಚನೆ ಎಲ್ಲವೂ **ಒಳ್ಳೆಯ ಚಟುವಟಿಕೆಗಳು** ಎನ್ನುವ ಸಮಾನ ಪಂಗಡವಾಗಿ ಬಿಡುತ್ತದೆ. ಕಳ್ಳತನ, ಹಾದರ, ಸುಳ್ಳು ಹೇಳುವುದು, ಇತ್ಯಾದಿಗಳು ಅನೈತಿಕ ಚಟುವಟಿಕೆಗಳೆಂಬ ವಿರೋಧಿ ಪರಿಕಲ್ಪನೆಗಳಾಗುತ್ತವೆ. ನೈತಿಕ ವರ್ಗೀಕರಣದ ದೊಡ್ಡ ಸಮಸ್ಯೆಯೆಂದರ' ಸಮಾಜಕ್ಕೆ ಅನಿವಾರ್ಯವಾಗಿರುವ **ಬಳಕುವ ಗುಣವನ್ನ** ಕಳೆದು ಸತ್ತಕೊರಡಿನಂತೆ ಮಾಡಿಬಿಡುತ್ತದೆ ಅದು. ವ್ಯಕ್ತಿಗಳು ವೃಥಾ ಪಾಪ ಪ್ರಜ್ಞೆಯಿಂದ ಬಳಲಬೇಕಾಗುತ್ತದೆ. ಪಾಪಿ ಮನುಷ್ಯ ಧೀರನಾಗಲಾರ : ತನ್ನ ಅಂತರಂಗವನ್ನು ಸ್ವಂತವಾಗಿ ಎದುರಿಸಲಾರ. ಅಂತಹ ವ್ಯಕ್ತಿಗಳು ಹಾಗೂ ಸಮಾಜ ಪಾಪಕೂಪವಾಗಿ ಪರಿಣಮಿಸುತ್ತದೆ.

ನೈತಿಕ ವರ್ಗೀಕರಣವೆಂಬ ಅವಾಂತರ

ಮದುವೆಯ ಉದಾಹರಣೆಯನ್ನ ತೆಗೆದುಕೊಳ್ಳಿ. ಮದುವೆಯನ್ನು ನೈತಿಕ ಮೌಲ್ಯವೆಂದು ಸ್ವೀಕರಿಸಿದಾಗ, ಮದುವೆಯಾಚೆಗಿನ ಎಲ್ಲ ಪ್ರೇಮ ಸಂಬಂಧಗಳೂ ಅನೈತಿಕವೆಂದಾಗಿ, ಹಾದರದ ಗುಂಪಿಗೆ ಸೇರಿಬಿಡುತ್ತದೆ. ಮದುವೆಯಾಚೆಗಿನ ಸಾಕಷ್ಟು ಸಂಬಂಧಗಳು, ಇಂದಿಗೂ ಹಾದರವೇ ನಿಜವಾದರೂ, ಮದುವೆಯೆಂಬ ಸಂಸ್ಥೆ ತೀವ್ರತರ ಶಿಥಿಲತೆಗೆ ಪಕ್ಕಾಗಿರುವ ಕಾಲಘಟ್ಟದಲ್ಲಿ, ನೈತಿಕತೆಯ ಒಂದು ತುದಿ ಅನೈತಿಕವಾದರೆ, ಮತ್ತೊಂದು ತುದಿ ಕ್ರೌರ್ಯದ ಕೂಪವಾಗಿರುತ್ತದೆ. ಆಗ ಮನುಷ್ಯ ಮದುವೆಯೆಂಬ ಬಾಣಲೆಯಿಂದ ಹಾದರವೆಂಬ ಬೆಂಕಿಗೆ ಹಾರಲಾರದೆ, ಬಾಣಲೆಯಲ್ಲೂ ಉಳಿಯಲಾರದೆ ಪರಿತಪಿಸಬೇಕಾಗುತ್ತದೆ.

ಆಧುನಿಕ ಸಮಾಜ ಎದುರಿಸುತ್ತಿರುವ ಆಧ್ಯಾತ್ಮಿಕ ಬಿಕ್ಕಟ್ಟಿಗೂ, ಉಪಯುಕ್ತತೆಯ ಮೌಲ್ಯಕ್ಕೂ ಬಲವಾದ ನಂಟಿದೆ. ಆ ನಂಟನ್ನ ಅರ್ಥಮಾಡಿಕೊಳ್ಳದೆ ಇಂದಿನ ಮಾನವ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಉಪಯುಕ್ತತೆ ಈ ಸಮಾಜದ ಒಪ್ಪಿತ ಮೌಲ್ಯ. ಮಾತ್ರವಲ್ಲ ಈ ಸಮಾಜ, ಉಪಯುಕ್ತತೆಯ ಮೌಲ್ಯವನ್ನು ವೈಭವೀಕರಿಸಿ ನಿಲ್ಲಿಸಿದೆ. ಡಾರ್ವಿನ್ನನ

ವಿಕಾಸವಾದ, ಉಪಯುಕ್ತತೆಯ ಆಗಮನವನ್ನು ಸಾರಿ, ಸ್ವಾಗತಿಸಿ, ಸ್ಥಾಪಿಸಿಯಾಗಿದೆ. ಸಮಾಜಕ್ಕೆ ಉಪಯುಕ್ತವಾದದ್ದೆಲ್ಲವೂ ಒಳ್ಳೆಯದು, ಅನುಪಯುಕ್ತವಾದದ್ದು ಕೆಟ್ಟದ್ದು ಎಂಬುದು ಇಂದಿನ ನಂಬಿಕೆ. ಅಂದರೆ, ಹಿಂದಿನ ಸಮಾಜದ ತಿಳಿವಳಿಕೆಯನ್ನ ತಲೆಕೆಳಗು ಮಾಡುತ್ತದೆ ಇಂದಿನ ನಂಬಿಕೆ.

ವಿಜ್ಞಾನ ಹಾಗೂ ಉಪಯುಕ್ತತೆಗಳ ನಂಟು

ಡಾರ್ವಿನ್ನನ ವಾದವನ್ನೇ ಗಮನಿಸೋಣ. ಮಂಗನಿಂದ ಬಳುವಳಿಯಾಗಿ ಬಂದು, ಮಾನವನಲ್ಲಿ ಮರುಟಿಹೋಗಿರುವ ಬಾಲದ ಉದಾಹರಣೆಯನ್ನ ಹಿಡಿದು ಡಾರ್ವಿನ್ ತನ್ನ ಸಿದ್ಧಾಂತವನ್ನ ಮಂಡಿಸುತ್ತಾನೆ. ಅನುಪಯುಕ್ತವಾದದ್ದು ಸಾಯುತ್ತದೆ, ಹಾಗೆ ಸತ್ತಾಗ ಅದಕ್ಕಾಗಿ ಸಮಾಜ ಕಣ್ಣೀರು ಕರೆಯಬೇಕಾದ ಪ್ರಮೇಯವಿಲ್ಲ ಎನ್ನುವುದು ಡಾರ್ವಿನ್ನನ ಆಶಯ. ಮೇಲುನೋಟಕ್ಕೆ ಡಾರ್ವಿನ್ನನ ಸಿದ್ಧಾಂತ, ಆತ ಬಳಸಿಕೊಂಡ ಮಂಗನ ಬಾಲಕ್ಕಷ್ಟೆ ಸೀಮಿತವಾದದ್ದು ಎನ್ನಿಸಿದರೂ, ಅದು ಪ್ರತಿಪಾದಿಸುತ್ತಿರುವುದು, ಬಾಲ ಮರುಟಿಕೊಂಡನಂತರದ ಸಮಾಜ ಹಾಗೂ ಸಾಮಾಜಿಕ ಸಂಸ್ಥೆಗಳ ಪುನರ್ ವಿಮರ್ಶೆಯನ್ನ.

ಸಾಯಲು ಸಿದ್ಧವಾಗಿರುವ ಸಂಸ್ಥೆಗಳು

ಅಂತಹ ಸಂಸ್ಥೆಗಳು ಯಾವುವು? ಈ ಕ್ಷಣದಲ್ಲಿ ಸಾಯಲು ಸಿದ್ಧವಾಗಿರುವ ಹಾಗೂ, ಅಕಸ್ಮಾತ್ ಸಾಯದೆಲೆ ಉಳಿದರೆ **ವೈಜ್ಞಾನಿಕ ಪ್ರಗತಿಗೆ** ಅಡ್ಡಗಾಲಾಗಬಲ್ಲ ಸಂಸ್ಥೆಗಳಾವುವು ? ದೇವರು, ಧಾರ್ಮಿಕತೆ, ಸಂಪ್ರದಾಯಗಳು, ರೂಢಿಗಳು, ಮದುವೆ, ಹಾಗೂ ಮನೆತನಗಳು, ಸಾಯಲು ಸಿದ್ಧವಾಗಿರುವ ಸಂಸ್ಥೆಗಳು. ಮತ್ತೂ ಮುಂದುವರೆದರೆ, ಸಾಂಸ್ಕೃತಿಕ ರಂಗದಲ್ಲಿ ಹಲವು ಸಂಗತಿಗಳು ಸೋಲು ಅನುಭವಿಸುತ್ತಿವೆ. ಇಂಗ್ಲೀಷು ಭಾಷೆಯ ಎದುರು ಹಿಂದಿ ಭಾಷೆ ಸೋಲುತ್ತಿದೆ, ಹಿಂದಿ ಭಾಷೆಯ ಎದುರು ಕನ್ನಡ ಭಾಷೆ ಸೋಲುತ್ತಿದೆ, ಕನ್ನಡದೆದುರು ತುಳು ಸೋಲುತ್ತಿದೆ.... ಇತ್ಯಾದಿ. ಇದು ಸರಳವಾದ ಸತ್ಯ. ಆದರೂ ಸುಲಭವಾಗಿ ಗೋಚರಿಸುವುದಿಲ್ಲ.

ನಾವು ಈವರೆಗೆ ಆರಾಧಿಸುತ್ತ ಬಂದ **ವೈಜ್ಞಾನಿಕತೆ** ಜಾಣತನದ ಭಾಷೆ ಬಳಸಿ ಕೆಲವು ಸಂಗತಿಗಳನ್ನ ಮರೆಮಾಚುತ್ತಿದೆ. ಉದಾಹರಣೆಗೆ ಡಾರ್ವಿನ್ನನ ವಾದವಾಗಲಿ ಅಥವಾ ವೈಜ್ಞಾನಿಕ ಪರಂಪರೆಯ ಮತ್ತಾವುದೆ ವಾದವಾಗಲಿ, ಸಾಯಲಿರುವ ಸಂಸ್ಥೆಗಳ ಜೊತೆ ನೇರ ವಾಗ್ವಾದಕ್ಕೆ ಇಳಿಯುವುದಿಲ್ಲ. ಜಾರಿಕೊಳ್ಳುತ್ತವೆ. ಹಾಗಾಗಿ ಆಧುನಿಕ ಮನುಷ್ಯನಿಗೆ ಮಂಕು ಕವಿದದ್ದು ಸಹಜವೇ ಆಗಿತ್ತು. ಆಧುನಿಕ ಯುಗವನ್ನು ಸ್ಥಾಪಿಸುವ ಪುಣ್ಯ ಕೆಲಸದಲ್ಲಿ ತಾನು ಭಾಗಿಯಾಗಿದ್ದೇನೆ ಎನ್ನುವ ಭ್ರಮೆಯಲ್ಲಿ ಆತ ತೇಲುತ್ತಿದ್ದ. ವೈಜ್ಞಾನಿಕ ಪರಂಪರೆ ದೈವವಿರೋಧಿ ಎಂದಾಗಲಿ, ಅಥವಾ ಹಳೆಯ ಸಾಮಾಜಿಕ ಸಂಸ್ಥೆಗಳ ವಿರೋಧಿ ಎಂದಾಗಲಿ ಮೇಲು ನೋಟಕ್ಕೆ ಅನ್ನಿಸುವುದಿಲ್ಲ. ಎಲ್ಲ ವೈಜ್ಞಾನಿಕರೂ ತಾವು ಬಳಸುವ ಭಾಷೆಯನ್ನ, ವಸ್ತುಸ್ಥಿತಿ ನಿರೂಪಿಸಬಲ್ಲ ಭಾಷೆ ಎಂದು ಕರೆಯಲು ಇಷ್ಟಪಡುತ್ತಾರೆ. ಆದರೆ ಅವರ ಭಾಷೆಯಲ್ಲಿ ಹೊಸ ಸತ್ಯವೊಂದನ್ನ ಜಗತ್ತಿಗೆ ಸಾರುತ್ತಿರುವ ಅಹಂಕಾರವೂ ಅಡಕವಾಗಿರುತ್ತದೆ.

ಎಲ್ಲ ವೈಜ್ಞಾನಿಕ ವಾದಗಳೂ, ಕತ್ತಲನ್ನ ಭೇದಿಸಿ ಬೆಳಕಿನೆಡೆ ಹೋಗುವ ಪ್ರಯತ್ನಗಳು ನಿಜವಾದರೂ, ಅವುಗಳಿಗೆ ಜಗತ್ತನ್ನ ಆಳುವ ಹಾಗೂ ಬದಲು ಮಾಡುವ ಆಶಯವೂ ಪ್ರಾಪ್ತವಾಗಿರುತ್ತದೆ. ಈ ಆಶಯವೇ ಅದರ ಶಕ್ತಿಕೇಂದ್ರವೂ ಹೌದು.

ವೈಜ್ಞಾನಿಕತೆ ಲೌಕಿಕ ಉಪಯುಕ್ತತೆಯನ್ನ ಬೆಂಬಲಿಸುತ್ತದೆ. ವೈಜ್ಞಾನಿಕ ಅನ್ವೇಷಣೆಗಳು ಉಪಯುಕ್ತವಾದ ಸಂಗತಿಗಳ ಹುಡುಕಾಟವೇ ಹೌದು. ಧಾರ್ಮಿಕ ಪರಂಪರೆಯಲ್ಲಿ ಹಾಗೂ ಅಲೌಕಿಕವೆಂದು ಕರೆಯಲ್ಪಡುವ ಅನುಭವಗಳಲ್ಲಿ ತ್ಯಾಜ್ಯವಾದದ್ದು ಬಹಳಷ್ಟಿದೆ ನಿಜ. ಆದರೆ, ಹಾಗೆ ತ್ಯಾಜ್ಯವಾದದ್ದನ್ನ ತೊಡೆದು ಹಾಕುವ ಕೆಲಸವನ್ನ ಆಯಾ ಪರಂಪರೆಯ ಒಳಗಿನಿಂದ ಎದ್ದು ಬರುವ ಭಕ್ತಿ ಚಳುವಳಿಗಳು ಮಾಡಬಲ್ಲುದೇ ಹೊರತು ವೈಜ್ಞಾನಿಕತೆಯಲ್ಲ. ವೈಜ್ಞಾನಿಕತೆಗೆ ಲೌಕಿಕವಾಗಿ ಅನುಪಯುಕ್ತವಾದ ಎಲ್ಲ ಸಂಗತಿಗಳೂ ತ್ಯಾಜವೆ. ವಿಜ್ಞಾನ ಯುಗದ ಹೊಸತರಲ್ಲಿ ನಾವು ಅನೇಕರಿಗೆ ಈ ಸಂಗತಿ ಗೋಚರಿಸಿರಲಿಲ್ಲ. ವೈಜ್ಞಾನಿಕತೆ ಅಲೌಕಿಕವಾದದ್ದನ್ನೆಲ್ಲ ಮೂಢನಂಬಿಕೆಗಳು ಎಂದು ಸಾರಾಸಗಟಾಗಿ ತಿರಸ್ಕರಿಸುತ್ತದೆ.

ನಾವುಗಳು ಹಿಡಿದ ತಪ್ಪುಹಾದಿ

ಭಕ್ತಿ ಚಳುವಳಿ, ಬಂಡಾಯ ಚಳುವಳಿ ಹಾಗೂ ವೈಜ್ಞಾನಿಕತೆ ಎಲ್ಲವೂ ಒಂದೆ, ಇವೆಲ್ಲವೂ ಒಂದಕ್ಕೊಂದು ಪೂರಕವಾದದ್ದು ಎಂದು ನಾವು ತಿಳಿದಿದ್ದೆವು . ಇಂತಹ ತಿಳುವಳಿಕೆಯಿಂದಾಗಿಯೇ ನಾವುಗಳು ಅನೇಕ ಹೋರಾಟಗಳನ್ನ ನಡೆಸಿದೆವು. ಉದಾಹರಣೆಗೆ ಪವಾಡಗಳನ್ನ ಕಣ್ಣು ಕಟ್ಟು ವಿದ್ಯೆ ಎಂದು ಸಾಧಿಸುವುದರ ಮೂಲಕ ಜನರಿಗೆ ತಿಳುವಳಿಕೆ ಕೊಡುತ್ತೇವೆ ಎಂದು ಹೊರಟೆವು. ಸಮಾಜವಾದಿಯಾದವ ಶಬರಿಮಲೆ ಅಯ್ಯಪ್ಪನ ಭಕ್ತನಾಗಬಾರದು ಎಂದು ನಿಗ್ರಹಿಸಲು ಹೊರಟೆವು. ಜನರೇ ಸಾರ್ವಭೌಮರು ಎಂದು ಹೇಳುತ್ತಲೇ ನಾವು, ಅವರಿಗೆ ದಕ್ಕಿರದ ವೈಜ್ಞಾನಿಕತೆಯನ್ನು ಅವರಿಗೆ ತಲುಪಿಸಲು ಆತುರ ಪಟ್ಟೆವು. ಅಂತಹ ಪ್ರಯತ್ನಗಳಲ್ಲೆಲ್ಲಾ ಜನರ **ತಿಳುವಳಿಕೆಗೂ, ವೈಜ್ಞಾನಿಕ ಮನೋಧರ್ಮಕ್ಕೂ** , ವಿರೋಧವಿರುವುದು ಕಂಡುಬಂತು. ಆಗ ನಾವು ನಮ್ಮ ನಂಬಿಕೆಯನ್ನ ಪ್ರಶ್ನಿಸಿಕೊಳ್ಳುವ ಬದಲು ಜನರ ತಿಳುವಳಿಕೆಯನ್ನ ಪ್ರಶ್ನಿಸಿದೆವು.

ಸಾಯಿಬಾಬಾ ಹೇಳುವ ಧಾರ್ಮಿಕತೆ ಪೊಳ್ಳಾದದ್ದು ನಿಜ. ಆದರೆ ಆತನ ಧಾರ್ಮಿಕತೆ ಪೊಳ್ಳಾದದ್ದಕ್ಕೆ ಹಾಗೂ ಸಾಯಿಬಾಬಾ ಜನಗಳ ಕಣ್ಣಿಗೆ ಮಣ್ಣೆರಚುವುದಕ್ಕೆ ಮೂಢನಂಬಿಕೆ ಕಾರಣವಲ್ಲ: ಆಧುನಿಕ ಸಮಾಜ ಕಾರಣ. ಆಧುನಿಕ ಸಮಾಜದ ಮಿಕ್ಕೆಲ್ಲ ವ್ಯವಸ್ಥೆಗಳಂತೆ ಸಾಯಿಬಾಬಾನ ಧಾರ್ಮಿಕತೆ ಕೂಡಾ ಲೌಕಿಕ ಯಶಸ್ಸಿನ ಮಾನದಂಡದಿಂದ ಅಳೆಯಲ್ಪಡುತ್ತದೆ. ಸಾಯಿಬಾಬಾ ಯಶಸ್ವಿಯಾಗಬೇಕಾದರೆ ಆತ ಇಂದಿನ ಸಮಾಜಕ್ಕೆ ಉಪಯುಕ್ತನಾಗಬೇಕು. ಅಂದರೆ ಇಂದಿನ ರಾಜಕಾರಣಿಗಳಿಗೆ , ಇಂದಿನ ಕೈಗಾರಿಕೋದ್ಯಮಿಗಳಿಗೆ ಉಪಯುಕ್ತನಾಗಬೇಕು. ಆಗ ಮಾತ್ರ ಆತ ಕಟ್ಟುವ ಸ್ಥಾವರಕ್ಕೆ ಹಣಕಾಸು ಒದಗಿ ಬರುತ್ತದೆ. ಸಾಯಿಬಾಬಾನ ಭಕ್ತರಲ್ಲಿ ನರಸಿಂಹರಾಯರು

ಇಂದಿನ ರಾಷ್ಟ್ರಪತಿಗಳು, ಗೃಹ ಸಚಿವರು, ಸಾಹಿತಿಗಳು ಎಲ್ಲ ಸೇರಿದ್ದಾರೆ ಎನ್ನುವುದು ಆತನ ಯಶಸ್ಸಿನ ಸಂಕೇತ. ಆತನ ಉಪಯುಕ್ತತೆಯ ಸಂಕೇತ. ಧಾರ್ಮಿಕ ನೆಲೆಗಳು ಹೆಚ್ಚು ಹೆಚ್ಚು ಉಪಯುಕ್ತವೂ, ಲಾಭದಾಯಕವೂ ಆಗುತ್ತಾ ನಡೆದಂತೆ ದೇವರು ಅಲ್ಲಿಂದ ಪಲಾಯನ ಮಾಡುತ್ತಾನೆ. ಈ ಮಾತನ್ನ ಎಲ್ಲ ಧರ್ಮಗಳ, ಎಲ್ಲ ಭಕ್ತಿಪಂಥದ ಬಂಡಾಯಗಾರ ಸಂತರೂ ಹೇಳಿ ಆಗಿದೆ.

ವೈಜ್ಞಾನಿಕತೆಯ ಬೆಂಬಲಿಗರಿಗೆ ಭಾಷೆಯ ನವಿರು ಬೇಕಿಲ್ಲ. ಅವರಿಗೆ ವಸ್ತುಸ್ಥಿತಿಯ ನಿರೂಪಣೆ ಬೇಕಿಲ್ಲ. ಹೊಸ ಸತ್ಯದ ಆವಿಷ್ಕಾರವಾಗಬೇಕಿದೆ ಅವರಿಗೆ. ಆ ಮೂಲಕ ಹೊಸ ಕೈಗಾರಿಕೆಗಳು, ಹೊಸ ತಂತ್ರಜ್ಞಾನಗಳು ತಮ್ಮ ಕೈಗಳಿಗೆ ದಕ್ಕಬೇಕಾಗಿದೆ. ಕಾರ್ಲ್‌ಮಾರ್ಕ್ಸ್, ಮತ್ತುಬರಿಸುವ ಅಫೀಮು ಎಂದು ದೇವರನ್ನು ಕರೆದಾಗ, ಆತನಿಗೆ ರಾಕ್ಷಸ ಮುಖವಿರಲಿಲ್ಲ ನಿಜ. ಆತ ಅತ್ಯಂತ ಪ್ರಾಜ್ಞನೂ, ಋಷಿಪುಂಗವನಂತಹವನೂ ಆಗಿದ್ದ. ಆತನ ಮಾತಿನಲ್ಲಿ ವಸ್ತುಸ್ಥಿತಿಯೊಂದನ್ನ ವಿಶ್ಲೇಷಿಸುವ ವಿನಯ ಕಾಣಿಸುತ್ತಿತ್ತು. ಆದರೆ ಅನುಯಾಯಿಗಳಲ್ಲಿ ವಿಗ್ರಹ ಭಂಜನೆಯ ತವಕವಿತ್ತು. ಅವರಿಗೆ ವಿಗ್ರಹ ಭಂಜಕತೆ ಅನಿವಾರ್ಯವೂ ಆಗಿತ್ತು.

ವಿಜ್ಞಾನವೆಂಬ ವಿಪರೀತ

ಎಲ್ಲ ವಿಚಾರಕ್ಕೂ, ಅನುಯಾಯಿಗಳನ್ನು ಹುಟ್ಟು ಹಾಕುವ ಮಹತ್ವಾಕಾಂಕ್ಷೆ ಇದ್ದೇ ಇರುತ್ತದೆ. ಅದು ವಿಚಾರದ ಶಕ್ತಿಯೂ ಹೌದು ದುರಂತವೂ ಹೌದು. ಕ್ರಿಸ್ತನ ವಿಚಾರಗಳು, ಮುಹಮ್ಮದನ ವಿಚಾರಗಳು, ಬಸವಣ್ಣನವರ ವಿಚಾರಗಳು ಎಲ್ಲದಕ್ಕೂ, ಎರಡು ಮೊನೆಯ ಕತ್ತಿಯ ಗುಣ ವ್ಯಕ್ತವಾಗಿರುವುದನ್ನ ನಾವು ಚರಿತ್ರೆಯಲ್ಲಿ ಕಂಡಿದ್ದೇವೆ. ಈ ಅರ್ಥದಲ್ಲಿ ವೈಜ್ಞಾನಿಕತೆಯ ಅತಿರೇಕಕ್ಕೂ, ಧಾರ್ಮಿಕ ಮೂಲಭೂತವಾದಿಗಳ ಅತಿರೇಕಕ್ಕೂ ವ್ಯತ್ಯಾಸಕಾಣುವುದಿಲ್ಲ. ಇವೆರಡೂ ವೈಚಾರಿಕ ವಿಪರೀತಗಳೇ ಹೌದು. ಆದರೆ ವೈಜ್ಞಾನಿಕತೆಯ ವಿಪರೀತ ಉಂಟುಮಾಡುವಷ್ಟು ಹಾನಿಯನ್ನ ಧಾರ್ಮಿಕ ಮೂಲಭೂತವಾದವೂ ಮಾಡಲಾರದು ಎಂದು ನಾವಿನ್ನೂ ಒಪ್ಪಲಿಕ್ಕೆ ಸಿದ್ದರಿಲ್ಲ. ಆದರಿದು ನಿಜ. ಏಕೆಂದರೆ ಇಡೀ ಜಗತ್ತನ್ನ ಆವರಿಸಿಕೊಂಡಿರುವ ಏಕೈಕ ಧರ್ಮ ಎಂಬುವುದಿಲ್ಲ. ಧರ್ಮಗಳ ನಡುವೆ ಅನೇಕತೆ ಇನ್ನೂ ಉಳಿದಿದೆ. ಮುಂದೆಯೂ ಉಳಿಯುತ್ತದೆ. ವೈಜ್ಞಾನಿಕತೆ ಪ್ರತಿರೋಧವೇ ಇಲ್ಲದಂತಹ ವಿಚಾರ ಧಾರೆ. ವಿಜ್ಞಾನ ಏಕೈಕ. ಹಾಗಾಗಿ ಭಯಾನಕ.

ಟೆಲಿವಿಷನ್ ಉಪಯುಕ್ತವಾದದ್ದು ಹಾಗಾಗಿ ಒಳ್ಳೆಯದು

ಉಪಯುಕ್ತತೆಯ ಒಪ್ಪಿತ ಮೌಲ್ಯದ ಹಾವಳಿ ಮನದಟ್ಟಾಗಬೇಕಾದರೆ ಮತ್ತೊಂದು ದಿಕ್ಕಿನ ಉದಾಹರಣೆಯೊಂದಿಗೆ ಪ್ರವೇಶ ಪಡೆಯುವುದು ಒಳ್ಳೆಯದು. ಉಪಯುಕ್ತ ತಂತ್ರಜ್ಞಾನವೊಂದನ್ನ ಗಮನಿಸಬಹುದು. ಟೆಲಿವಿಷನ್ ಉಪಯುಕ್ತವಾದದ್ದು. ಹಾಗಾಗಿ ಟೆಲಿವಿಷನ್ ಒಳ್ಳೆಯದು. ಟೆಲಿವಿಷನ್ ಒಳ್ಳೆಯದಿರಲಿಕ್ಕಿಲ್ಲ ಎಂಬ ನೂರಾರು ಪುರಾವೆಗಳು ನಮ್ಮೆದುರು ಬಂದು ಬಿದ್ದಾಗಲೂ,

ಟೆಲಿವಿಷನ್ ತಂತ್ರಜ್ಞಾನ ಒಳ್ಳೆಯದೇ ಹೌದು. ಅಕಸ್ಮಾತ್ ಕೆಟ್ಟ ಪರಿಣಾಮ ಆಗುತ್ತಿದ್ದರೆ, ಟೆಲಿವಿಷನ್ ಬಳಕೆಯಾಗುತ್ತಿರುವ ರೀತಿಯಲ್ಲಿ ತಪ್ಪಿದೆ ಎಂದು ವಾದಿಸುತ್ತೇವೆ ನಾವು. ಟೆಲಿವಿಷನ್ನಿನ ಉದಾಹರಣೆ ಮತ್ತೊಂದು ರೀತಿಯಿಂದಲೂ ಕುತೂಹಲಕರವಾದದ್ದು. ಹೆಚ್ಚು ಶಕ್ತಿಶಾಲಿಯಾದ ತಂತ್ರಜ್ಞಾನ ಹೆಚ್ಚು ಉಪಯುಕ್ತವಾದ ತಂತ್ರಜ್ಞಾನ. ಹಾಗಾಗಿ ಕಡಿಮೆ ಉಪಯುಕ್ತವಾದ ತಂತ್ರಜ್ಞಾನದ ಮೇಲೆ ಹೆಚ್ಚು ಉಪಯುಕ್ತವಾದ ತಂತ್ರಜ್ಞಾನ ದಬ್ಬಾಳಿಕೆ ನಡೆಸಬಹುದು. ಟೆಲಿವಿಷನ್ನಿನ ವಿರುದ್ಧದ ಹೋರಾಟದಲ್ಲಿ ಸಿನೆಮಾ ಸೋಲುತ್ತದೆ, ಸಿನಿಮಾದ ವಿರುದ್ಧದ ಹೋರಾಟದಲ್ಲಿ ರೇಡಿಯೋ ಸೋಲುತ್ತದೆ, ರೇಡಿಯೋದ ವಿರುದ್ಧ ವ್ಯಕ್ತಿಗತ ಗಾಯಕ ಸೋಲುತ್ತಾನೆ. ಇದು ಇಂಗ್ಲೀಷ್, ಹಿಂದಿ, ಕನ್ನಡ, ತುಳುವಿನ ಸರಪಳಿಯಂತೆಯೇ, ಮತ್ತೊಂದು ಸೋಲಿನ ಸರಪಳಿ.

ಲಾಭದಾಯಕ ಉದ್ದಿಮೆಯಾಗಿ ದೇವರುಗಳು

ಇಂದಿನ ಸಮಾಜದ ದುರಂತವೆಂದರೆ ಅದು ಲೌಕಿಕವಾಗಿ ಅನುಪಯುಕ್ತವಾದ ಎಲ್ಲ ಚಟುವಟಿಕೆಗಳನ್ನೂ ಉಪಯುಕ್ತವಾಗಿಸಿಬಿಟ್ಟಿದೆ. ಅಂದರೆ ಮಾರುಕಟ್ಟೆಯಲ್ಲಿ ಲಾಭದಾಯಕವಾಗಿ ಬಿಕರಿಮಾಡಬಲ್ಲ ಸರಕುಗಳನ್ನಾಗಿಸಿದೆ. ಹಾಗಾಗಿ ಇಂದಿನ ಸಮಾಜದ ದುರಂತ ಬರಿದೆ ತಾತ್ವಿಕ ಹಟಮಾರಿತನದಿಂದ ಹುಟ್ಟಿದ್ದಲ್ಲ. ನಮಗೆ ಅರಿವಾಗುವ ಮೊದಲೇ, ಉಪಯುಕ್ತತೆಯ ಹೊಸ ಮೌಲ್ಯಗಳು ಹಳೆಯ ಅಲೌಕಿಕ ಸಂಸ್ಥೆಗಳ ಆಕಾರ ಹಾಗೂ ಆಶಯಗಳನ್ನು ಬದಲು ಮಾಡಿಬಿಟ್ಟಿದೆ. ಈ ಅಂಶವನ್ನ ವಿವರಿಸುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ ನಾನು. ದೇವರು, ಸಂಗೀತ, ಸಾಹಿತ್ಯ ಎಲ್ಲದರ ಆಕಾರವೂ ಇಂದು ಪೂರ್ತಿ ಬದಲಾಗಿದೆ. ಹಾಗೂ ಅವೆಲ್ಲವುಗಳ ಹಳೆಯ ಆಶಯಗಳು ಹೆಚ್ಚೂ ಕಡಿಮೆ ನಿರ್ನಾಮವಾಗಿ ಹೋಗಿದೆ. ಅಕಸ್ಮಾತ್ ಉಳಿದಿರುವುದೇ ಆದರೆ ಪ್ರತಿಭಟನೆಯಲ್ಲಿ ಮಾತ್ರ ಅವುಗಳ ಅರ್ಥ ಉಳಿದಿದೆ. ಹೊಸ ಆಕಾರ, ಹೊಸ ಉದ್ದಿಮೆಗೆ ಸಹಕಾರಿಯಾಗಬಲ್ಲ ಆಕಾರ. ಉದ್ದಿಮೆಯನ್ನ ಲಾಭದಾಯಕವಾಗಿಸಬಲ್ಲ ಆಕಾರ. ಅಂದರೆ ನಾವಿಂದು ಹೊಸದೊಂದು ಅಂಗಿ ಹೊಲೆದು, ಹಳೆಯ ದೇವರು, ಸಾಹಿತ್ಯ, ಸಂಗೀತ ಇತ್ಯಾದಿಗಳ ಮೈಯನ್ನ ಬಲವಂತದಿಂದ ಅದರಲ್ಲಿ ತುರುಕುತ್ತಿದ್ದೇವೆ. ಹಾಗಾಗಿ ಮೇಲೆ ಹೇಳಿದ ಯಾವುದೇ ಚಟುವಟಿಕೆಗಳಿಗೂ ಪೂಜ್ಯತೆ ಉಳಿದಿಲ್ಲ. ದೇವರು, ಸಾಹಿತ್ಯ, ಸಂಗೀತಗಳಿಗೆ ಉಪಯುಕ್ತತೆ ಪ್ರಾಪ್ತವಾದಾಗಿನಿಂದ, ಸಮಕಾಲೀನ ವ್ಯಕ್ತಿ ಅವುಗಳಿಂದ ವಿಮುಖನಾಗಿದ್ದಾನೆ ; ಅವನು ದೇವರಿಂದ ವಿಮುಖನಾಗಿದ್ದಾನೆ ; ಸಂಗೀತದಿಂದ ವಿಮುಖನಾಗಿದ್ದಾನೆ ; ಸಾಹಿತ್ಯ ಕಲೆಗಳಿಂದ ವಿಮುಖನಾಗಿದ್ದಾನೆ.

ಧಾರ್ಮಿಕತೆ ಎಂಬ ಹಳೆಯ ಚಟ

ಹಾಗೆಂದು ಧಾರ್ಮಿಕತೆಗೆ ಪೂರ್ತಿಯಾಗಿ ಮುಖತಿರುಗಿಸಿ ನಡೆದು ಬಿಡಲಾರ ಅವನು. ಬಜಾರದಲ್ಲಿ ದೇವರ ಮೂರ್ತಿಗಳು, ಸಂಗೀತದ ಟೇಪುಗಳು, ಟಿವಿ ಧಾರಾವಾಹಿಗಳು ಕಂಡಾಗ, ತಾನೊಬ್ಬ ಅನುಯಾಯಿ ಎನ್ನುವ ಕಾರಣಕ್ಕೆ ಅವುಗಳನ್ನ ಕೊಳ್ಳುತ್ತಾನೆ. ಆದರೆ ಅನುಮಾನದಿಂದ ನೋಡುತ್ತಾನೆ.

ಬಹುಬೇಗ ಎಲ್ಲದರಿಂದ ಬೇಸರಗೊಳ್ಳುತ್ತಾನೆ. ಬಿಸಾಕಿಬಿಡುತ್ತಾನೆ. ಹಾಗಾಗಿ ಸಮಕಾಲೀನ ವ್ಯಕ್ತಿ ಒಡೆದ ವ್ಯಕ್ತಿತ್ವವಾಗಿದ್ದಾನೆ. ಅವನಿಗೆ ದೇವರಲ್ಲಿ ನಂಬಿಕೆಯಿಲ್ಲ, ಆದರೆ ದೇವರು ಬೇಕು. ವೈಯಕ್ತಿಕ ಸ್ತರದಲ್ಲಿ ಭಕ್ತನಾಗಲಾರ, ಆದರೆ ಸಾಮಾಜಿಕವಾಗಿ ಅನುಯಾಯಿಯಾಗಬಲ್ಲ. ರಾಮನ ಹೆಸರು ಹೇಳಿದರೆ ಓಟುಕೊಡಬಲ್ಲ. ಆದರೆ ಸ್ವತಃ ರಾಮನಾಗಲಾರ. ಸಿನೆಮಾಗಳಲ್ಲಿ ಕುಡಿಯದೆ, ಮಾನಭಂಗಮಾಡದೆ, ಬಡವರ ಪರವಾಗಿ ಉಳಿಯುವ ನಟನಿಗೆ - ಆತ ಬರಿಯ ನಟನೆಂದು ತಿಳಿದೂ - ಬೆಂಬಲ ನೀಡಬಲ್ಲ. ಆದರೆ ವೈಯಕ್ತಿಕ ಜೀವನದಲ್ಲಿ ಶುಚಿಯಾಗಿರಲಾರ.

ಅತಿ ವಾಸ್ತವತೆಯ ಹೆದರಿಕೆ ಎಂಬ ಸಾಮಾಜಿಕ ದುರಂತವು

ಸಮಕಾಲೀನ ವ್ಯಕ್ತಿಗೆ ತನ್ನ ದುರಂತದ ಅರಿವಿದೆ. ಹಾಗಾಗಿಯೆ ಆತ ಒಡೆದ ವ್ಯಕ್ತಿತ್ವವಾಗಿರುವುದು. ಸಮಕಾಲೀನ ವ್ಯಕ್ತಿಯನ್ನ **ಅತಿವಾಸ್ತವತೆ** ಹೆದರಿಸುತ್ತದೆ. ಬದುಕಿನ ಒಂದಷ್ಟು ಸಮಯವಾದರೂ ವಾಸ್ತವತೆಯಿಂದ ವಿಮುಖನಾಗುವುದು ಅವನಿಗೆ ಅಗತ್ಯವಾಗಿದೆ. ಆದರೆ ಹಿಂದಿನ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಭಕ್ತಿ ಹಾಗೂ ಶ್ರದ್ಧೆಯ ಮದ್ದು ಈಗ ಪರಿಣಾಮಕಾರಿಯಲ್ಲ. ಏಕೆಂದರೆ ಸಮಕಾಲೀನ ವ್ಯಕ್ತಿ ಅನುಮಾನದ ವ್ಯಕ್ತಿ. ಸಮಕಾಲೀನ ವ್ಯಕ್ತಿ ಭಕ್ತನಾಗಲಾರ. ಹಾಗಾಗಿ ಆತ **ಮತ್ತುಬರಿಸಲಿಕ್ಕಾಗಿ** ಬಾಹ್ಯ ಸಂಕೇತಗಳ ಮೊರೆಹೋಗುತ್ತಾನೆ. ಮಧ್ಯ, ಔಷಧಗಳು, ದೈಹಿಕ ಕಾಮ ಹಾಗೂ ಹಿಂಸೆಯ ಆಟ ಅಂತಹ ಸಾಧನಗಳು. **ಉಪಯುಕ್ತ** ಸಮಾಜದ ಮತ್ತೊಂದು ಶಾಖೆ ಇವುಗಳನ್ನು ಮಾರಾಟಮಾಡುತ್ತದೆ.

ಸಾಹಿತ್ಯ ವಿಮರ್ಶೆ ಹಾಗೂ ಉಪಯುಕ್ತತೆಯ ಒಪ್ಪಿತ ಮೌಲ್ಯ

ಬದುಕಿನ ಬೇರೆಲ್ಲ ವ್ಯವಹಾರಗಳನ್ನೂ ಪ್ರವೇಶಿಸಿ, ಮೊಸರಿನಂತೆ ಹೆಪ್ಪುಗಟ್ಟಿ ನಿಂತಿರುವ ಉಪಯುಕ್ತತೆಯ **ಒಪ್ಪಿತ ಮೌಲ್ಯ** ಸಾಹಿತ್ಯ ವಿಮರ್ಶೆಯನ್ನ ಪ್ರವೇಶಿಸದೆ ಬಿಟ್ಟೀತೆ? ಸಾಹಿತ್ಯ ವಿಮರ್ಶೆಯಲ್ಲಿ ಸಧ್ಯಕ್ಕೆ ಚಾಲತಿಯಲ್ಲಿರುವ ಪದಗಳನ್ನ ಗಮನಿಸಿ ; **ರೆಲೆವೆನ್ಸ್** (ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ), **ಜವಾಬ್ದಾರಿ** (ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ), **ಬದ್ಧತೆ** (ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ) ಇತ್ಯಾದಿ. ಸಾಹಿತ್ಯ ಕೃತಿಯ ಮೌಲ್ಯಮಾಪನಕ್ಕೆ ಇಂದು ಸಾರ್ವತ್ರಿಕ ಅಳತೆಗೋಲೊಂದಿದೆ: ಅದು **ಸಾಮಾಜಿಕತೆ.** ಇಂದಿನ ವಿಮರ್ಶಕರು ಪಂಪನಲ್ಲಿ ರೆಲೆವೆನ್ಸ್ ಹುಡುಕಿ ತೆಗೆದಿದ್ದಾರೆ, ಕುಮಾರವ್ಯಾಸನಲ್ಲಿ ಹುಡುಕಿ ತೆಗೆದಿದ್ದಾರೆ, ಕುವೆಂಪು, ಕಾರಂತ, ಅಡಿಗ ಎಲ್ಲರನ್ನೂ ಅಂಗುಲ ಹುಳುವಿನೋಪಾದಿಯಲ್ಲಿ ಅಳೆದು ಸಾಮಾಜಿಕತೆಯನ್ನ ನಿರ್ಣಯಿಸಿದ್ದಾರೆ. ಬಸವಣ್ಣ, ವಚನಕಾರರು ಇತ್ಯಾದಿ ಬಂಡಾಯಗಾರರಲ್ಲಂತೂ ಸಾಮಾಜಿಕ ರೆಲೆವೆನ್ಸ್ ಅಲ್ಲದೆ ಮತ್ತೇನೂ ಇಲ್ಲ ಅನ್ನುವ ಅಸಾಧಾರಣ ನಿರ್ಣಯಕ್ಕೆ ವಿಮರ್ಶಕರು ಬಂದು ನಿಂತಿದ್ದಾರೆ.

ಇತ್ತೀಚಿನ ಸಾಹಿತ್ಯ ಕೃತಿಯೊಂದನ್ನ ಗಮನಿಸೋಣ. ಗಿರೀಶ್ ಕರ್ನಾಡರ **ತುಘಲಕ್** ನಾಟಕವಿದೆ. ಅದೊಂದು ಒಳ್ಳೆಯ ನಾಟಕವೆಂದು ಓದಿದವರಿಗೆ, ಹಾಗೂ ನೋಡಿದವರಿಗೆ ಅನ್ನಿಸಿತ್ತು. **ತುಘಲಕ್**

ಏಕೆ ಒಳ್ಳೆಯ ಕೃತಿ ಎಂದು ವಿಶ್ಲೇಷಿಸಿದ ವಿಮರ್ಶಕರುಗಳು, ಅರವತ್ತರ ದಶಕದಲ್ಲಿ ಭಾರತೀಯ ರಾಜನೀತಿ ಕಂಡ ಸೋಲು ಹಾಗೂ ಹಾತಾಶೆಯ ಭಾವನೆ ಈ ನಾಟಕದಲ್ಲಿ ಸಮರ್ಥವಾಗಿ ಪ್ರತಿಧ್ವನಿತವಾಗಿದೆ ಎಂದು ನಿರ್ಣಯಿಸಿದರು. ತುಘಲಕ್ ನಾಟಕದ ಮಟ್ಟಿಗೆ ಇದು ಅಸಾಧುವಾದ ನಿರ್ಣಯವೇನೂ ಅಲ್ಲ. ಗಿರೀಶರು ನಾಟಕ ಬರೆದದ್ದು ಅರವತ್ತರ ದಶಕದಲ್ಲಿ; ನೆಹರೂ ಕೈ ಸೋತಿದ್ದು ಅರವತ್ತರ ದಶಕದಲ್ಲಿ; ತುಘಲಕ್‌ನನ್ನು ನಾಟಕದ ಕಡೆಯಲ್ಲಿ ಆವರಿಸುವ ನಿದ್ದೆ ಸೋಲಿನ ಸಂಕೇತ; ಈ ಎಲ್ಲ ಅಂಶಗಳನ್ನೂ ಒಟ್ಟಿಗೆ ಇಟ್ಟು ರಾಜಕೀಯ ಅರ್ಥಹುಟ್ಟಿಸಬಹುದಾಗಿದೆ ನಿಜ. ಆದರೆ ನಾಟಕದಲ್ಲಿ ಅಂತಹ ಸಾಮ್ಯ ಇಲ್ಲದೆಯೇ ಹೋಗಿದ್ದರೆ ? ಆಗ **ತುಘಲಕ್** ಕೆಟ್ಟ ಕೃತಿಯಾಗುತ್ತಿತ್ತೆ ? ಬಾಲ್ಯದಲ್ಲಿ ನಾವೆಲ್ಲರೂ ಪ್ರೀತಿಯಿಂದ ಓದುತ್ತಿದ್ದ ಚಂದಮಾಮದ **ರಕ್ಕಸಕೊಳ್ಳ** ಸಮಾಜದ ಪ್ರತಿಬಿಂಬ ಅಲ್ಲ. ಬಾಣಭಟ್ಟನ **ಕಾದಂಬರಿ** ಇಂದಿನ ಸಮಾಜದ ಪ್ರತಿಬಿಂಬ ಅಲ್ಲ. ಅವುಗಳನ್ನು ಹೇಗೆ ವಿಶ್ಲೇಷಿಸುವುದು?

ಆನಂದಿಸಬಹುದಾದ ಸಾಹಿತ್ಯ ಬೇರೆ, ಅನುಕರಿಸಬಹುದಾದ ಸಾಹಿತ್ಯ ಬೇರೆ

ಹಲವು ವಿಮರ್ಶಕರು, ಬಾಣಭಟ್ಟನ ಕಾದಂಬರಿ, ರಕ್ಕಸಕೊಳ್ಳ ಇತ್ಯಾದಿಗಳನ್ನ **ವಿಶೇಷ ಕೃತಿಗಳು** ಎಂದು ಕರೆದು, ಅವುಗಳಿಗೆಂದೇ ಬೇರೆಯ ವಿಮರ್ಶಾಮಾನದಂಡಗಳನ್ನ ಅಳವಡಿಸಿ ಸಂಕಟದಿಂದ ಪಾರಾಗುತ್ತಾರೆ. ಹೀಗೆ ಮಾಡುವುದರಿಂದ ಬಾಣಭಟ್ಟನ ಕಾದಂಬರಿ **ಆನಂದಿಸಬಹುದಾದದ್ದೇ** ಹೊರತು **ಅನುಕರಿಸಬಹುದಾದದ್ದು** ಅಲ್ಲ ಎನ್ನುವ ಆಶ್ಚರ್ಯಕರ ನಿರ್ಣಯಕ್ಕೆ ತಲುಪಿಬಿಡುತ್ತಾರೆ. ದೈನಂದಿನ ಬದುಕಿನಲ್ಲಿ ಈಗಾಗಲೇ **ಅತಿ ವಾಸ್ತವತೆಯ** ದಾಳಿಗೆ ಸಿಕ್ಕು ಜರ್ಜರಿತನಾಗಿರುವ ಲೇಖಕ, ಸಾಮಾಜಿಕ ಜವಾಬ್ದಾರಿಯ ಭಾರ ಹೊತ್ತು ಹೆಣಗಲಾರದೆ ತತ್ತರಿಸುತ್ತಿದ್ದಾನೆ. ಆತ ಚಂದಮಾಮದ ಮಾದರಿಯಲ್ಲಿ ಬರೆಯಲಾರ, ಬಾಣಭಟ್ಟನ ಮಾದರಿಯಲ್ಲಿ ಬರೆಯಲಾರ, ಹಾಡಿನ ಮಾದರಿಯಲ್ಲಿ ಬರೆಯಲಾರ, ಪತ್ತೇದಾರಿ ಕಾದಂಬರಿ ಬರೆಯಲಾರ. ಬರೆಯಬಾರದು. ಬಂಡಾಯದ ಮಾದರಿಯಲ್ಲಿ, ಇಲ್ಲವೆ ನವ್ಯ ಮಾದರಿಯಲ್ಲಿ ಬರೆಯಬಹುದು ಅಷ್ಟೆ. ಅಂದರೆ, ಇಂದಿನ ಎಲ್ಲ ಲೇಖಕರೂ ಹತಾಶೆಯ ಧ್ವನಿಯಲ್ಲಿ ಅಥವಾ ಸಿಟ್ಟಿನ ಆಕ್ರೋಶದಲ್ಲಿ ಮಾತ್ರ ಬರೆಯಬೇಕು. ಬರವಣಿಗೆಯಲ್ಲಿ ಪ್ರವೇಶ ಪಡೆಯುವ ಪ್ರತಿಯೊಂದು ಅನುಭವವೂ ಕೈಗೆ ತಾಕುವಂತಿರಬೇಕು, ಅಂದರೆ ಮೂರ್ತವಾಗಿರಬೇಕು. ಆಗ ಮಾತ್ರ ಅದು ಸಾಹಿತ್ಯಕೃತಿ, ಇಲ್ಲದಿದ್ದರೆ ಅದು ಚಂದಮಾಮವೊ, ರಕ್ಕಸಕೊಳ್ಳವೊ, ಎನ್. ನರಸಿಂಹಯ್ಯನೊ, ಮತ್ತೇನೂ ಆದೀತು.

ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧ

ಕನ್ನಡ ನವೋದಯದ ನಾಲ್ವರು ಹಿರಿಯ ಲೇಖಕರಲ್ಲಿ **ಉಪಯುಕ್ತತೆಯ** ಒಪ್ಪಿತ ಮೌಲ್ಯವನ್ನು ಮೊದಲಬಾರಿಗೆ ವಿರೋಧಿಸಿದವರು ಕುವೆಂಪು. ಅದನ್ನವರು, ಧಾರ್ಮಿಕತೆಗೊಂದು ಹೊಸ ಅರ್ಥಕೊಡುವ ಪ್ರಯತ್ನವಾಗಿ ಗ್ರಹಿಸಿದರು. ಮಾಸ್ತಿ ಹಾಗೂ ಬೇಂದ್ರೆ, ಹಳೆಯ ಅರ್ಥದಲ್ಲಿ

ಧಾರ್ಮಿಕರು ಹಾಗೂ ಭಕ್ತರು. ಹಾಗಾಗಿ ಅವರ ಕೃತಿಗಳಲ್ಲಿ ಧಾರ್ಮಿಕತೆ ಹುಡುಕಾಟವಲ್ಲ. ಇನ್ನು ಶಿವರಾಮ ಕಾರಂತರನ್ನ ತಾತ್ವಿಕ ಅನುಮಾನಗಳು ಕಾಡುವುದು ಕಡಿಮೆ. ಅವರದ್ದು ತಾತ್ವಿಕ ಪುಂಡತನ. ಹೊಸಜಗತ್ತು, ಹೊಸವಿಚಾರಗಳು, ವಿಜ್ಞಾನ, ಕಾರಂತರನ್ನ ಆಕರ್ಷಿಸುತ್ತದೆ. ಅವುಗಳನ್ನೆಲ್ಲಾ ಕನ್ನಡದೊಳಕ್ಕೆ ಬರಮಾಡಿಕೊಂಡ ಮೊದಲ ಲೇಖಕ ತಾನಾಗಬೇಕೆನ್ನುವ ಹುಮ್ಮಸ್ಸು ಅವರಿಗೆ. ಕಾರಂತರದ್ದು ಮೂಲತಃ ಚಿಕಿತ್ಸಕ ದೃಷ್ಟಿ. ಹೊಸ ಉಪಕರಣಗಳನ್ನ ಬಳಸಿಕೊಂಡು, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಜನರನ್ನ ತನ್ನ ಕಾರ್ಯ ಕ್ಷೇತ್ರವಾಗಿಸಿಕೊಂಡು, ಸಾಂಸ್ಕೃತಿಕ ದಾಖಲಾತಿಯ ಕಾರ್ಯಕ್ಕೆ ತೊಡಗುತ್ತಾರೆ ಕಾರಂತರು. ಹಾಗೆಂದೇ ಕಾರಂತರಿಗೆ ಪ್ರಿಯವಾದ ಮಾಧ್ಯಮ ಗದ್ಯ ; ಕಾದಂಬರಿಕ್ಷೇತ್ರ.

ಆದರೆ ಕುವೆಂಪು ಹಾಗಲ್ಲ. ಕನ್ನಡದ ಮೊದಲ ಮಹತ್ವದ ಶೂದ್ರ ಲೇಖಕನಾಗಲಿಕ್ಕೆ ಪ್ರತಿಭೆಯೊಂದೇ ಸಾಲದು ಎಂಬುದನ್ನು ಅರಿತಿದ್ದರು ಕುವೆಂಪು. ಮಲಯಾಳಂ ಭಾಷೆಯ ಕವಿ ಕುಮಾರನ್ ಆಶನ್ ರಂತೆ ಕುವೆಂಪುಗೆ ಕೂಡಾ, ಸಾಹಿತ್ಯ ಸೃಷ್ಟಿ ಹೊಸ ನೈತಿಕತೆಯ ಸೃಷ್ಟಿ ಕೂಡಾ ಹೌದು. ಒಂದನ್ನ ಬಿಟ್ಟು ಮತ್ತೊಂದನ್ನ ಸಾಧಿಸುವುದು ಸಾಧ್ಯವಿಲ್ಲ. ದೇವರ ಆವಿಷ್ಕಾರ ಹಾಗೂ ಆ ಮೂಲಕವಾಗಿ ಹೊಸ ನೈತಿಕ ಮೌಲ್ಯಗಳ ಪ್ರತಿಷ್ಠಾಪನೆ ಕುವೆಂಪು ಅವರ ಮುಖ್ಯ ಉದ್ದೇಶ. ಹಾಗಾಗಿಯೇ ಅವರು ಆಶ್ರಮಗಳಿಂದ, ರಾಮಕೃಷ್ಣಪರಮಹಂಸರಿಂದ ಅಷ್ಟೊಂದು ಆಕರ್ಷಿತರಾದದ್ದು.

ಕುವೆಂಪು ಅವರಿಗೆ ಮತ್ತೊಂದು ನಂಬಿಕೆಯಿತ್ತು ; ದೇವರ ಆವಿಷ್ಕಾರ ಮಾಡಲು ಹೊರಟ ವ್ಯಕ್ತಿಗೆ ವೈಯಕ್ತಿಕ ಶುಚಿ ಮುಖ್ಯ ಎಂದು. ಹಾಗಾಗಿಯೇ ಕುವೆಂಪು ಮಿಕ್ಕ ಲೇಖಕರಂತೆ, ಅನುಭವವನ್ನ ಅರಸಿಕೊಂಡು ಹೋಗಲಿಲ್ಲ. ಕುವೆಂಪು ಅವರಿಗೆ ಪತ್ನಿಯೇ ಪ್ರೇಯಸಿಯೂ ಆಗಿದ್ದರು. ಯಾವುದೇ ರೀತಿಯ ಸಂಚಾರಿ ಭಾವಗಳು ತನ್ನನ್ನ ತಾಗಕೂಡದೆಂಬ ಕಟ್ಟುನಿಟ್ಟು ಕುವೆಂಪು ಅವರಲ್ಲಿತ್ತು. ತನ್ನ ಎರಡು ಕಾದಂಬರಿಗಳನ್ನ ಬರೆಯುವಾಗ ಕುವೆಂಪು ಅವರಿಗೆ ಬರವಣಿಗೆಯ ಪ್ರಕ್ರಿಯೆಯಲ್ಲಿ ತಾನು ಅಶುಚಿಯಾಗಬಹುದೆಂಬ ಹೆದರಿಕೆ ಕಾಡಿದೆ. ಹಾಗೆಂದೇ ಅವರ ಬೃಹತ್ ಕಾದಂಬರಿಯಲ್ಲಿ ಸಂಚಾರಿ ಭಾವದ ಕೆಸರು ಪ್ರವೇಶ ಮಾಡಿದ್ದರೂ, ಅದು ಕಾದಂಬರಿಕಾರನನ್ನಾಗಲೀ ಅಥವಾ ಕಾದಂಬರಿಯ ನಾಯಕನನ್ನಾಗಲೀ ತಾಕದಂತೆ ಎಚ್ಚರವಹಿಸುತ್ತಾರೆ ಕುವೆಂಪು.

ದೇವರ ಆವಿಷ್ಕಾರಕ್ಕೆ ಸೂಕ್ತ ಮಾಧ್ಯಮ ಪದ್ಯ

ಪದ್ಯಬರೆಯುವುದು ಪುಟ್ಟಪ್ಪನವರಿಗೆ ಆನಂದದಾಯಕ ಚಟುವಟಿಕೆ. ಅಲ್ಲಿ ಸಂಚಾರಿಭಾವಗಳ ಕೆಸರು ತಾಕಲಾರದು. ಜೊತೆಗೆ ಸಂಗೀತ ಹಾಗೂ ಲಯಕ್ಕೆ ಸಂಬಂಧಿ ಪದ್ಯ. ಹಾಗಾಗಿ ದೇವರ ಅವಿಷ್ಕಾರಕ್ಕೆ ಹೆಚ್ಚು ಪ್ರಶಸ್ಥವಾದ ಕ್ಷೇತ್ರ ಎಂದು ತಿಳಿದಿದ್ದರು ಕುವೆಂಪು. ಪುಟ್ಟಪ್ಪನವರ ಒಟ್ಟು ಕಾವ್ಯವನ್ನ ಪರಿಗಣಿಸುವುದು ನನ್ನ ಪುಟ್ಟ ಲೇಖನಕ್ಕೆ ಭಾರವಾಗುತ್ತದೆ. ಜೊತೆಗೆ ಹಾಗೆ ಮಾಡಬಲ್ಲ

ವಿಸ್ತಾರವಾದ ಓದು ಕೂಡಾ ನನಗಿಲ್ಲ. ಹಾಗಾಗಿ ಅವರ **ಕಲ್ಕಿ** ಪದ್ಯದ ಉದಾಹರಣೆಯನ್ನು ಮಾತ್ರ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ಪುಟ್ಟಪ್ಪನವರ **ಕಲ್ಕಿ**, ಅವರದ್ದೇ ಇತರ ಕೃತಿಗಳಿಗಿಂತ ತುಂಬ ಭಿನ್ನವಾದ ಪದ್ಯ. ಸ್ವಲ್ಪ ಮಟ್ಟಿಗೆ ತಾತ್ವಿಕ ಗೊಂದಲವಿರುವ ಪದ್ಯ. **ಕಲ್ಕಿ** ಪದ್ಯದಲ್ಲಿ ತಾತ್ವಿಕ ಗೊಂದಲವಿದೆ ಎಂದೆ. ಅದು ಹಾಗಲ್ಲ. **ಕಲ್ಕಿ** ಪದ್ಯ ರಚಿಸುವುದಕ್ಕೆ ಮೊದಲು, ಪುಟ್ಟಪ್ಪನವರಲ್ಲಿ ತಾತ್ವಿಕ ಸರಳೀಕರಣವಿದೆ. **ಕಲ್ಕಿ** ಪದ್ಯ ಅದನ್ನ ಪರಿಹರಿಸುತ್ತದೆ. ಹಾಗೆಂದೇ **ಕಲ್ಕಿ** ಮಹತ್ವದ ಕೃತಿ. ಉಪಯುಕ್ತತೆಯ ಒಪ್ಪಿತ ಮೌಲ್ಯಕ್ಕೆ ಕನ್ನಡ ಕಾವ್ಯ ಒಡ್ಡಿದ ಅತ್ಯಂತ ಪ್ರಭಲ ವಿರೋಧ **ಕಲ್ಕಿ**ಯಲ್ಲಿ ಮೂಡಿಬಂದಿದೆ.

ಪದ್ಯ ಆರಂಭವಾದಾಗ, ಮೇಲುನೋಟಕ್ಕೆ, ಬಡವರ ಪರವಾದ, ಆದಿಮ ಸಮಾಜವಾದಿ (Primitive Socialist) ದೃಷ್ಟಿಕೋನವಿರುವ, ಬದ್ಧ ಕೃತಿ **ಕಲ್ಕಿ** ಎನ್ನುವ ಅನುಮಾನ ತರಿಸುತ್ತದೆ. ಕೃತಿಕಾರನೆ ಒಂದು ಘಟ್ಟದಲ್ಲಿ, **ಬಡವನೆ ಕಲಿಯುಗದಂತ್ಯದ ಕಲ್ಕಿ** ! ಎಂದು ಹೇಳಿ ಆ ರೀತಿಯ ಅನುಮಾನಗಳಿಗೆ ಪುಷ್ಟಿನೀಡುತ್ತಾರೆ. ಆದರೆ ಕೃತಿಯ ಆಕ್ರೋಷ ಹಾಗೂ ವಿನಾಶದ ದರ್ಶನ ಸಿದ್ಧಉತ್ತರಗಳನ್ನು ಕೊಚ್ಚಿಕೊಂಡು ಹೋಗಿ, ಪ್ರಳಯದ ಅಂಚಿಗೆ ಮುಟ್ಟಿಸಿ ಬಿಡುತ್ತದೆ. ಕೃತಿಕಾರನ ಆಶಯವನ್ನೂ ಮೀರಿ ಬೆಳೆಯುತ್ತದೆ ಕೃತಿ. ಬಡವನೆ ಕಲಿಯುಗದಂತ್ಯದ ಕಲ್ಕಿ ಎಂದು ಸಾರಿ ಪದ್ಯವನ್ನು ಮುಗಿಸಲೆಣಿಸಿದ ಕೃತಿಕಾರನನ್ನೆ ಚಕಿತಗೊಳಿಸಿ, ಬಡವನ ಜಠರಾಗ್ನಿ ಪ್ರಳಯದೋಪಾದಿಯಲ್ಲಿ ಬೆಳೆದು, ಗರ್ಭಿಣಿ ಸ್ತ್ರೀಯರು, ಬಾಣಂತಿಯರು, ನವವಧುಗಳು ಮೇಣ್ ಶ್ರೀಮಂತೆಯರು...... ಗುರುಗಳು ಶಿಷ್ಯರು ಮನೆಗಳು ಮಠಗಳು ಎಲ್ಲವನ್ನೂ ಕಬಳಿಸಿಬಿಡುತ್ತದೆ. ಬಡವನ ಜಠರಾಗ್ನಿ ಮೊದಲು ತಾಕುವುದು ಬಡವರ ಗುಡಿಸಲುಗಳಿಗೇ. ಅಲ್ಲಿಂದ ಅದು ಮತ್ತೊಂದೇ ದೃಶ್ಯವಾಗಿಬಿಡುತ್ತದೆ. ಹೊಸ ದೃಶ್ಯದಲ್ಲಿ ಸಾಯುವವರು ಗುರು, ಶಿಷ್ಯ, ಬಡವ ಶ್ರೀಮಂತ ಇತ್ಯಾದಿ ಸಾಮಾಜಿಕರಲ್ಲ ; ಅವರು ಬರಿದೆ ನರ ರುಂಡಗಳು, ನರ ಮುಂಡಗಳು. ಕೃತಿಕಾರ ಆಶ್ಚರ್ಯಚಕಿತನಾಗಿ ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಾನೆ, **ಇವನೆಯೆ ಕಲ್ಕಿ ? ಬಡವರ ಬಾಳು ? ಮೂರ್ತಿವೆತ್ತಿಹ ಬಡವರ ಗೋಳು!**

ಅಪರಿಮಿತವಾದ ಕರಾಳ ದರ್ಶನ

ಬದ್ಧಸಾಹಿತ್ಯಕ್ಕೆ ಲೌಕಿಕ ಪ್ರಪಂಚದಲ್ಲಿ ನಂಬಿಕೆ ಉಳಿದಿರುತ್ತದೆ. ಹಾಗಾಗಿ ಬದ್ಧನಿಗೆ ಆಗುವ ದರ್ಶನ ಪರಿಮಿತವಾದದ್ದು. ಸಮಾಜದ ದುರಂತವನ್ನವನು ವಿರೋಧಗಳಲ್ಲಿ ಗ್ರಹಿಸುತ್ತಾನೆ. ಹೇಗಾದರೂ ಮಾಡಿ ವಿರೋಧಿಯನ್ನ ಸೋಲಿಸಿದರೆ ಸಮಾಜ ಸರಿಯಾಗುತ್ತದೆ ಎನ್ನುವ ಹುಂಬ ಆಶಯ ಅವನಲ್ಲಿರುತ್ತದೆ. ಕುವೆಂಪು ಅವರ ಕೃತಿಯಲ್ಲಿ,**ಬಡವನೆ ಕಲಿಯುಗದಂತ್ಯದ ಕಲ್ಕಿ** ಎಂಬ ಘೋಷಣೆಯೊಂದಿಗೆ ರಾತ್ರಿ ಕಳೆದು, ಸಹಜವಾಗಿ ಬೆಳಗಾಗಿದ್ದರೆ, ಆಗ ಆದರ್ಶಮಯ ಜಗತ್ತು ಕವಿಯ ಕಣ್ಣಮುಂದಿರುತ್ತಿತ್ತು. ಹೊಸ ಜಗತ್ತು, ಹೊಸ ಬೆಳಕು, ಹಕ್ಕಿಗಳ ಚಿಲಿಪಿಲಿ, ಕೈಕೈ ಹಿಡಿದು ಪ್ರಗತಿಪಥದತ್ತ ನಡೆದಿರುವ ಹೆಣ್ಣುಗಂಡುಗಳು ಇರುತ್ತಿದ್ದವು. ಇದು ಕುವೆಂಪು ಅವರಿಗೆ

ಸೃಷ್ಟಿಸಲಿಕ್ಕೆಬಾರದ ಪ್ರಪಂಚವೇನಲ್ಲ. ಮಿಕ್ಕೆಡೆಗಳಲ್ಲಿ ಸೌಂದರ್ಯವನ್ನ ತುಂಬ ಸಮರ್ಥವಾಗಿಯೆ ನಿರ್ವಹಿಸಿದ್ದಾರೆ ಕುವೆಂಪು. ಕಲ್ಕಿ ಪದ್ಯದಲ್ಲಿ ಮಾತ್ರ ಕವಿಯ ಕನಸು ಒಡೆಯುತ್ತದೆ. ಕರಾಳದರ್ಶನವೊಂದು ಕವಿಯ ಮನಃಸ್ಥೈರ್ಯವನ್ನೇ ನಡುಗಿಸಿಬಿಡುತ್ತದೆ.

ಕಲ್ಕಿ ! ಕಲ್ಕಿ ! ಎನ್ನುತ ಚೀರಿ
ಕನಸೊಡೆದೆದ್ದೆ
ಇನ್ನೆಲ್ಲಿಯ ನಿದ್ದೆ

ಎಂದು ನಡುಗುತ್ತಾರೆ ಅವರು. ಇದೊಂದು ರೀತಿಯ ಪಲಾಯನ. ಒಂದೊಮ್ಮೆ ಅವರು ಹಟಹಿಡಿದು ಕನಸಿನ ಲೋಕದಲ್ಲಿಯೇ ಉಳಿದಿದ್ದರೆ **ಕಲ್ಕಿ** ಧಾವಿಸಿಬಂದು ಕವಿಯನ್ನೇ ಮುಗಿಸಿ ಬಿಡುತ್ತಿದ್ದ. ಕೃತಿಯ ಚಿಪ್ಪೊಡೆದು ಹೊರಬರುವುದರಿಂದ ಮಾತ್ರ, ಜೀವದಿಂದ ಉಳಿಯುವುದು ಸಾಧ್ಯವಾಗಿದೆ ಕೃತಿಕಾರನಿಗೆ. ಅಷ್ಟೊಂದು ಕರಾಳವಾದ ದರ್ಶನವದು.

ಕಲ್ಕಿ ಪದ್ಯದ ನಂತರವೂ ಪದ್ಯಗಳು ರಚನೆಯಾಗಿವೆ, ಬದುಕು ಮುಂದುವರೆದಿದೆ, ಜೀವಗಳು ಹುಟ್ಟಿವೆ, ಜೀವಗಳು ಸತ್ತಿವೆ. ಆದರೆ ಕವಿಯ ದರ್ಶನದಲ್ಲಿ ಇನ್ನೆಂದೂ ಅಳಿಸಲಾಗದ ಕರಾಳ ಸತ್ಯವೊಂದು ಛಾಪಿಸಿ ಬಿಟ್ಟಿದೆ. ಕುವೆಂಪು ಅವರ ಈ ದರ್ಶನವನ್ನ ಬಡವ ಬಲ್ಲಿದ ಎಂಬ ಸರಳ ವರ್ಗೀಕರಣದಿಂದ ನಿರ್ವಹಿಸಲಿಕ್ಕೆ ಸಾಧ್ಯವಿಲ್ಲ ಎಂದು ಮೊದಲೇ ಹೇಳಿದ್ದೇನೆ. ಹಾಗಾಗಿಯೇ ನಾನಂದದ್ದು, ಬಡವ ಬಲ್ಲಿದ ಎನ್ನುವ ವರ್ಗೀಕರಣ **ಕಲ್ಕಿ** ಪದ್ಯದ ಆರಂಭದಲ್ಲಿದ್ದ ಸೈದ್ಧಾಂತಿಕ ಗೊಂದಲ ಮಾತ್ರ ಎಂದು.

ಕುವೆಂಪು ಅವರ ತೀವ್ರ ಹತಾಶೆಗೆ ಕಾರಣವೇನು ? ಹಿಂದಿನ ತಿಳುವಳಿಕೆಗೆ ಹಿಂದಿರುಗಲಾರದ ಪರಿಸ್ಥಿತಿಯನ್ನ ಆಧುನಿಕ ಸಮಾಜ ನಿರ್ಮಿಸಿಕೊಂಡಿದೆ ಎನ್ನುವುದು ಕುವೆಂಪು ಅವರ ಅರಿವಿಗೆ ಬಂದಿದೆ. ಹಳೆಯ ಸಾಮಾಜಿಕ ಸಂಸ್ಥೆಗಳಾದ ಗುಡಿಗಳು, ಗೋಪುರಗಳು, ಧರ್ಮದ ಗೇಹ, ಗುರುಗಳು, ಶಿಷ್ಯರು ಯಾವುದೂ ಈಗ ಉಪಯೋಗಕ್ಕೆ ಬಾರದು. ಎಲ್ಲವೂ ಕಲ್ಕಿಯ ರಾಕ್ಷಸದವಡೆಗೆ ಬಲಿಯಾಗಲು ಅರ್ಹವಾದವುಗಳಾಗಿವೆ. ಎಲ್ಲವೂ ಶಿಥಿಲವಾಗಿವೆ. ಹಾಗಾಗಿಯೆ ಕುವೆಂಪು ಅವರಿಗೆ ದೇವರ ಅವಿಷ್ಕಾರ ಹಾಗೂ ಹೊಸ ನೈತಿಕ ಜಗತ್ತಿನ ನಿರ್ಮಾಣ ಎರಡನ್ನೂ ಒಟ್ಟಿಗೆ ಸಾಧಿಸಬೇಕೆನ್ನುವ ಹಟವಿದೆ. ಹಾಗಾಗಿಯೇ ಕುವೆಂಪು ಅವರ ಕೃತಿಗಳಲ್ಲಿ ವಾಸ್ತವತೆಯ ಅಂಶಗಳು ಸಮರ್ಥವಾಗಿ ಮೂಡಿಬಂದಿದ್ದರೂ, ನಾಯಕ ಪಾತ್ರ ಮಾತ್ರ ಅವಾಸ್ತವ ಎನ್ನುವಷ್ಟು ಪರಿಶುದ್ಧನೂ, ನೈತಿಕನೂ ಆಗಿರುತ್ತಾನೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಕುತೂಹಲಕಾರಿ ಸಂಗತಿ ಇದೆ. ಕುವೆಂಪು ಅವರ ಈ ದರ್ಶನ ಭಕ್ತಿಪರಂಪರೆಯ ದರ್ಶನವಲ್ಲ. ಕುವೆಂಪು ಅವರದ್ದು ಒಂದು ರೀತಿಯ ಬ್ರಾಹ್ಮಣ ದರ್ಶನವೇ ಹೌದು. ನಾಲ್ಕು ಯುಗಗಳು; ಅವುಗಳ ಕಡೆಯಲ್ಲಿ ಬರುವ, ಅನೈತಿಕವಾದ ಕಲಿಯುಗ; ಕಲಿಯುಗದ

ಅಂತ್ಯದಲ್ಲಿ, ಕಟ್ಟ ಕಡೆಯ ಅವತಾರವಾಗಿ ಬರುವ ಕ್ರೂರನಾದ ಕಲ್ಕಿ. ಇದು ಶ್ರೇಣೀಕೃತವಾದ ನೈತಿಕ ವ್ಯವಸ್ಥೆಯೊಂದರ ನರಕದ ಕಲ್ಪನೆ, ಅಥವಾ ಸರ್ವನಾಶದ ಕಲ್ಪನೆ.ಆಧುನಿಕ ಬ್ರಾಹ್ಮಣನಿಗೆ ಸಾಧ್ಯವಾಗದ ನೈತಿಕ ಪ್ರಪಂಚವೊಂದನ್ನ ಸೃಷ್ಟಿಸಲು ಹೊರಟ **ಶೂದ್ರತಪಸ್ವಿ** ಕುವೆಂಪು.

ಧಾರ್ಮಿಕ ಶಿಥಿಲತೆಯನ್ನ ಗುರುತಿಸುವ ಅಡಿಗರು

ಇಲ್ಲಿ ಅಡಿಗರ ಉದಾಹರಣೆಯನ್ನ ನೆನೆಯುವುದು ಅಪ್ರಸ್ತುತವಾಗಲಾರದು. ಅಡಿಗರನ್ನೂ ಕೂಡಾ ಉಪಯುಕ್ತತೆಯ ಒಪ್ಪಿತ ಮೌಲ್ಯಗಳು ಕೆರಳಿಸುತ್ತವೆ. ಅವರನ್ನೂ ಕೂಡಾ ದೇವರು ಹಾಗೂ ಧಾರ್ಮಿಕತೆ ಕಾಡುತ್ತವೆ. ಆದರೆ ಅಡಿಗರಿಗೆ ಹೊಸ ದೇವರ ಅವಿಷ್ಕಾರದ ಜರೂರಿಲ್ಲ. ಹೊಸದೊಂದು ನೈತಿಕ ಪ್ರಪಂಚವನ್ನ ಕಟ್ಟಿಯೇನು ಎಂಬ ಆತ್ಮ ಸ್ಥೈರ್ಯವೂ ಅಡಿಗರಲ್ಲಿ ಉಳಿದಿಲ್ಲ. ಹಾಗೆ ನೋಡಿದರೆ, ಆತ್ಮ ಸ್ಥೈರ್ಯದ ಕೊರತೆ ನಮ್ಮ ಸಂಪ್ರದಾಯದ ಪ್ರಮುಖ ದೌರ್ಬಲ್ಯಗಳಲ್ಲಿ ಒಂದು. ಅಥವಾ ಪ್ರಮುಖ ಲಕ್ಷಣಗಳಲ್ಲಿ ಒಂದು.

ಅಡಿಗರನ್ನ ಪ್ರಧಾನವಾಗಿ ಕಾಡುವ ಸಮಸ್ಯೆ, ಕಲ್ಮಶಗೊಳ್ಳುತ್ತಿರುವ ಮೂರ್ತಿಗಳದ್ದು ಹಾಗೂ ಬಾಡಿಹೋಗುತ್ತಿರುವ ದೇವ ಪ್ರಭಾವಳಿಗಳದ್ದು. ಅಡಿಗರಿಗೆ ರಾಮನಾಗಬೇಕೆಂಬ ಸಂಕಲ್ಪವಿಲ್ಲ ; ರಾಮನ ಮೂರ್ತಿ ಕೆತ್ತುವ ಹಂಬಲವಿದೆ. ತನ್ನನ್ನೇ ಹುತ್ತಗಟ್ಟಿಸಿಕೊಂಡು ಪುರುಷೋತ್ತಮನ ರೂಪವನ್ನು ಕಡೆದು ನಿಲ್ಲಿಸಬೇಕೆಂಬ ಆಶಯ ಅಡಿಗರದ್ದು. ಅವರು ಮತ್ತೆ ಮತ್ತೆ ತನ್ನ ಕೃತಿಗಳಲ್ಲಿ ಅಗೆಯುವುದು, **ಕಂಡೀತು ಗೆರೆ ಮಿರಿವ ಚಿನ್ನದದಿರು** ಎನ್ನುವ ಆಸೆಯಿಂದ. ಹಾಗೆ ಚಿನ್ನದದಿರು ಸಿಕ್ಕಾಗ **ಹೊನ್ನ ಕಾಯಿಸಿ ಹಿಡಿದು ಬಡಿದಿಷ್ಟ ದೇವತಾ ವಿಗ್ರಹಕ್ಕೊಗ್ಗಿಸಬೇಕು** ಎನ್ನುವ ಆಶಯವಿದೆ ಅಡಿಗರಿಗೆ. ಅಡಿಗರು ಹಾಗೂ ಕುವೆಂಪು ಅವರ ದಾರಿಗಳು ಬೇರೆಬೇರೆ. ಅಡಿಗರ ದಾರಿಯ ಕಡೆಯಲ್ಲಿ ಆರೆಸ್ಸೆಸ್‌ನ ಸಂಸ್ಥೆ ನಿಂತಿದೆ. ಕುವೆಂಪು ದಾರಿಯ ಕಡೆಯಲ್ಲಿ ನಾರಾಯಣ ಗುರುಗಳ ಮಾದರಿಯ ಧಾರ್ಮಿಕತೆ ನಿಂತಿದೆ.

ಅಲೋಪತಿಯ ಮದ್ದನ್ನ ಸೂಚಿಸುವ ಶಿವರಾಮ ಕಾರಂತರು

ವಿಗ್ರಹ ಭಂಜಕತೆಯ ಮತ್ತೊಂದು ಮುಖ ಸ್ಥಾವರ ನಿರ್ಮಾಣ. ಇದು ಅಡಿಗರು ಹಾಗೂ ಇತ್ತೀಚೆಗೆ ಶಿವರಾಮಕಾರಂತರ ಸಮಸ್ಯೆಯೂ ಹೌದು. ಪುಟ್ಟಪ್ಪನವರನ್ನ ಕಾಡುವ ಉಪಯುಕ್ತತೆಯ ಒಪ್ಪಿತ ಮೌಲ್ಯ ಶಿವರಾಮಕಾರಂತರನ್ನೂ ಕಾಡುತ್ತದೆ. ಆದರೆ ಶಿವರಾಮಕಾರಂತರದ್ದು **ಆಂತರಿಕ ಬಂಡಾಯ**. ಆಧುನಿಕ ಸಮಾಜವಿನ್ನೂ ನಿಜವಾದ ಅರ್ಥದಲ್ಲಿ ಆಧುನಿಕವಾಗಿಲ್ಲ, ಆಧುನಿಕವಾಗಬೇಕು ಎಂದು ನಂಬುವವರು ಕಾರಂತರು. ಕಾರಂತರ ಚಿಕಿತ್ಸಕ ದೃಷ್ಟಿ ಈಗಲೂ, ಎಲ್ಲ ಸಮಸ್ಯೆಗಳಿಗೂ, **ಅಲೋಪತಿಯ** ಮದ್ದನ್ನೇ ಸೂಚಿಸುತ್ತದೆ. ಮೊದಲು ದೇಹ ಸರಿಯಾಗಲಿ ಅನಂತರ ಆತ್ಮ ತನ್ನಿಂದ ತಾನೆ ಸರಿಹೋಗುತ್ತದೆ ಎಂದು ನಂಬಿದವರು ಕಾರಂತರು. ಕಾರಂತರ ಬಲಪಂಥೀಯ ರಾಜಕೀಯ ಧೋರಣೆಗೆ ಅದಕ್ಷತೆಯ ಬಗೆಗಿನ ಅವರ ತಿರಸ್ಕಾರ ಕಾರಣ. ದಕ್ಷತೆಯನ್ನು ಬೆಂಬಲಿಸ ಹೊರಟ

ಕಾರಂತರು ಸ್ವತಂತ್ರ ಪಕ್ಷದ ಬೆಂಬಲಿಗರಾದರು. ಕಾರಂತರಿಗೆ **ಸಮಾಜವಾದ** ಅಸಹನೀಯವಾಗುವುದೂ ಇದೇ ಕಾರಣಕ್ಕಾಗಿ. ಅವರಿಗೆ **ಸಮಾಜವಾದ** ಅದಕ್ಷತೆಯ ಸಂಕೇತ. ಐದೂ ಬೆರಳು ಒಂದೇ ಮಾದರಿ ಎನ್ನುವುದು ಶ್ರೇಷ್ಠತೆಯ ವಿರೋಧಿ ತಾನೆ ?

ಪರಿಸರದ ಸಮಸ್ಯೆಯಿರಲಿ, ಬಾಬರಿ ಮಸೀದಿಯಿರಲಿ, ಕಾರಂತರು ಸೂಚಿಸುವ ಪರಿಹಾರವೊಂದೆ; ಅನಾರೋಗ್ಯಕರ ಅಂಗಗಳನ್ನ ಕಿತ್ತು ಆರೋಗ್ಯಕರ ಅಂಶಗಳನ್ನ ಕಸಿ ಮಾಡು. ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲಿಕ್ಕೆ ಮುಸಲ್ಮಾನರು ತಯಾರಿಲ್ಲದಿದ್ದರೆ ಅವರು ಪಾಕಿಸ್ತಾನಕ್ಕೆ ಹೋಗಿ ಬಿಡಲಿ ಎಂದು ಹಟ ಮಾಡುವಷ್ಟು ತಾಳ್ಮೆ ಕಳೆದುಕೊಳ್ಳಬಲ್ಲರು ಕಾರಂತರು. ಕಿಲುಬಿದ ಮೂರ್ತಿಗಳನ್ನ ಕಂಡು ಕೊರಗುವ ಅಡಿಗರು, ಅಪ್ರಬುದ್ಧ ಆಧುನೀಕರಣವನ್ನ ಕಂಡು ಸಿಟ್ಟಾಗುವ ಶಿವರಾಮಕಾರಂತರು, ಎಲ್ಲರೂ ಕಡೆಗೆ ಆರೆಸ್ಸೆಸ್ಸಿನ ತೆಕ್ಕೆಯಲ್ಲಿ ಬೀಳುವುದು, ಆರೆಸ್ಸೆಸ್ಸಿನ ವಿಪರ್ಯಾಸವೂ ಹೌದು.

ಭಕ್ತನಾಗಲಾರದ ಆಧುನಿಕ ಪಾಪಿ

ಆಧುನಿಕ ಮನುಷ್ಯ ಭಕ್ತನಾಗಲಾರ. ಇದು ಆತನನ್ನ/ ಆಕೆಯನ್ನ ಇಂದು ಅತ್ಯಂತ ಆಳದಲ್ಲಿ ಕಾಡುತ್ತಿರುವ ಸಮಸ್ಯೆ. ಹಾಗಾಗಿಯೇ, ಹಸಿವು ಹಾಗೂ ವರ್ಗ ಸಂಘರ್ಷಗಳನ್ನ ಮುಂದಿಟ್ಟುಕೊಂಡು ಹೊರಟಿರುವ ಎಡಪಂಥೀಯ ಚಳುವಳಿಗಳು ಸೋಲುತ್ತಿರುವುದು. ಹಾಗಾಗಿಯೇ ಭಾರತದಲ್ಲಿ ಬಿ. ಜೆ. ಪಿ. ಶಿವಸೇನೆಯಂತಹ ರಾಜಕೀಯ ಶಕ್ತಿಗಳು, ಪ್ರಪಂಚದ ಇತರೆಡೆಗಳಲ್ಲಿ ಧಾರ್ಮಿಕ ಮೂಲಭೂತವಾದಿಗಳು ಪ್ರಭಲರಾಗುತ್ತಿರುವುದು. ಆಧುನಿಕ ಮಾನವನ ಈ ಆಧ್ಯಾತ್ಮಿಕ ಬಿಕ್ಕಟ್ಟು ರಾಜಕೀಯ ರಂಗದಲ್ಲಿ ಅದೆಂತಹ ವಿಪರ್ಯಾಸವನ್ನ ಸೃಷ್ಟಿಸಿದೆಯೆಂದರೆ, ಮೂಲತಃ ಪ್ರಾಮಾಣಿಕರಾದ ಎಡಪಂಥೀಯರು ಈ ಹೊತ್ತು ರಾಜಕೀಯವಾಗಿ ಸೋಲುತ್ತಿದ್ದಾರೆ ಹಾಗೂ ಲಾಭ ಬಡುಕ, ಅಪ್ರಾಮಾಣಿಕ ಜನರ ಬೆಂಬಲ ಪಡೆದ ಧಾರ್ಮಿಕ ಮೂಲಭೂತವಾದಿಗಳು ಅಟ್ಟಹಾಸಗೈಯುತ್ತಿದ್ದಾರೆ. ಈ ಎರಡು ದುರಂತಗಳ ನಡುವೆ ನಿಂತಿರುವ ಮಾನವ ಜನಾಂಗ ಉಳಿವಿನ ಭಯದಿಂದ ತತ್ತರಿಸುತ್ತಿದೆ.

ಹಾಸ್ಯಾಸ್ಪದವಾದ ಪ್ರತಿಭಟನೆ

ಭಕ್ತನಾಗಲಾರದ ಆಧುನಿಕ ಮನುಷ್ಯ ತನ್ನ ಪರಿಸ್ಥಿತಿಯನ್ನ ಪ್ರತಿಭಟನೆಯಿಲ್ಲದೆ ಒಪ್ಪಿಕೊಳ್ಳುತ್ತಿದ್ದಾನೆ ಎಂದೇನೂ ಇಲ್ಲ. ಆತ ಪ್ರತಿಭಟಿಸುತ್ತಿದ್ದಾನೆ. ಆದರೆ ಅಸಹಾಯಕನಾಗಿದ್ದಾನೆ. ಹಾಗಾಗಿ ಆತನ ಪ್ರತಿಭಟನೆಗಳು ಅತ್ಯಂತ ಹಾಸ್ಯಾಸ್ಪದವಾದ ಹಾಗೂ ವಿಚಿತ್ರವಾದ ರೀತಿಗಳಲ್ಲಿ ವ್ಯಕ್ತವಾಗುತ್ತಿದೆ. ಉದಾಹರಣೆಗೆ ಅರವತ್ತರ ದಶಕದಲ್ಲಿ ಯೂರೋಪಿನ ಮಧ್ಯಮವರ್ಗದ ಯುವಕರು ಹಿಪ್ಪಿಗಳಾಗಿ ಅಂಡಲೆದದ್ದು ಇಂತಹದ್ದೊಂದು ಆಧ್ಯಾತ್ಮಿಕ ಪ್ರತಿರೋಧದ ಉದಾಹರಣೆ.

ಗಾಂಧೀಜಿಯವರ ಪ್ರತಿರೋಧ

ಮಾನವ ಜನಾಂಗ, ತಾನೇ ಸೃಷ್ಟಿಸಿಕೊಂಡದ್ದು, ಕೈಗಾರಿಕಾ ಮೂಲದ ಈ ಆಧುನಿಕ ಸಮಾಜ. ಕೈಗಾರಿಕ ಮೂಲದ ಆಧುನಿಕ ವ್ಯವಸ್ಥೆ ರಾಕ್ಷಸ ಶಕ್ತಿ ಹೊಂದಿದ ವ್ಯವಸ್ಥೆ. ಈ ಶತಮಾನದ ಹೆಚ್ಚಿನ ಬುದ್ಧಿವಂತರು ಈ ವ್ಯವಸ್ಥೆಯ ಆರಾಧಕರು. ಎಡ ಹಾಗೂ ಬಲ ಪಂಥಗಳೆರಡರಲ್ಲೂ ಈ ವ್ಯವಸ್ಥೆಗೆ ಸಮಾನವಾದ ಬೆಂಬಲಿಗರಿದ್ದಾರೆ. ಜೊತೆಗೆ ಈ ವ್ಯವಸ್ಥೆಯಿಂದಾಗಿ ಮಾನವನ ಆಯಸ್ಸು ಹೆಚ್ಚಿದೆ, ಸಂಪತ್ತು ಹೆಚ್ಚಿದೆ, ಪ್ರಭುತ್ವ ಬಲಗೊಂಡಿದೆ, ಹಾಗೂ ನಿಸರ್ಗದ ಮೇಲೆ ವಿಜಯ ಸಾಧಿಸಬಹುದು ಎನ್ನುವ ಆಶಾ ಭಾವನೆ ಆತನಲ್ಲಿ ಮೂಡಿದೆ. ವೈಜ್ಞಾನಿಕವಾದ ಸಮಾಜ ವ್ಯವಸ್ಥೆ ತಾನು, ಎನ್ನುವ ಹೆಗ್ಗಳಿಕೆ ಆಧುನಿಕ ಸಮಾಜ ವ್ಯವಸ್ಥೆಗಿದೆ. ಹಾಗೆ ನೋಡಿದರೆ ಸಾರ್ವಜನಿಕ ಜೀವನದಲ್ಲಿ ಈ ವ್ಯವಸ್ಥೆಯ ಬೆಂಬಲಿಗರಿಗೆ ಎದುರಾಗಿರುವ ಏಕೈಕ ತಲೆನೋವು ಎಂದರೆ ಪರಿಸರ ಮಾಲಿನ್ಯದ್ದು ಮಾತ್ರ. ಈ ವ್ಯವಸ್ಥೆ ಮಾನವನ ಮೈಯ್ಯನ್ನ ಛಂದವಾಗಿಟ್ಟಿದೆ ; ಆತ್ಮವನ್ನ ಮಾರಿಕೊಂಡಿದೆ ಅಷ್ಟೆ.

ಪ್ರಾಯಶಃ ಈ ಶತಮಾನದಲ್ಲೇ, ಗಾಂದೀಜಿಯವರೊಬ್ಬರು ಮಾತ್ರ, ಕೈಗಾರಿಕಾ ಮೂಲದ ಆಧುನಿಕ ಸಮಾಜ ವ್ಯವಸ್ಥೆಯನ್ನ ಇಡಿಯಾಗಿ ಧಿಕ್ಕರಿಸಿದ ಪ್ರಭಾವಶಾಲಿ ಚಿಂತಕ ಎಂದು ಕಾಣುತ್ತದೆ. ಈ ಶತಮಾನದ ಆರಂಭದಲ್ಲಿ ಗಾಂಧೀಜಿ ಬರೆದ ಹಿಂದ್ ಸ್ವರಾಜ್ ಪುಸ್ತಿಕೆಯಲ್ಲಿ, ಕೈಗಾರಿಕಾ ಮೂಲದ ಆಧುನಿಕತೆಯನ್ನ ಸಾರಾಸಗಟಾಗಿ ತ್ಯಜಿಸುತ್ತಾರೆ ಅವರು. ಅನಂತರ, ತನ್ನ ಜೀವಿತದ ಉದ್ದಕ್ಕೂ ಅದೇ ಅಭಿಪ್ರಾಯಕ್ಕೆ ಬದ್ಧರಾಗಿ ನಿಂತು, ಸ್ವಾತಂತ್ರ್ಯ ಚಳುವಳಿಯ ನಕ್ಷೆ ಹಾಕುತ್ತಾರೆ ಗಾಂಧೀಜಿ. ಹಿಂದ್ ಸ್ವರಾಜ್ ಪುಸ್ತಕ ಹೊರ ಬಿದ್ದ ನಾಲ್ಕು ದಶಕದ ನಂತರ ಅವರನ್ನ ಪ್ರಶ್ನೆ ಮಾಡುವ ಯುರೋಪಿಯನ್ ಸಮಾಜವಾದಿಗಳಿಗೆ ಗಾಂಧೀಜಿ ಸ್ಪಷ್ಟ ಉತ್ತರ ನೀಡುತ್ತಾರೆ. ಅವರು ಗಾಂಧೀಜಿಯವರನ್ನ ಕೆದಕಿ 'ನೀವು ಯಂತ್ರ ವಿರೋಧಿ ಎಂದಾಯಿತಲ್ಲ ?' ಎಂದು ಚರ್ಚೆಗೆಳೆದಾಗ " ಮಾನವನ ಸಭ್ಯತೆಗೆ ಅಡ್ಡ ಬರದಂತಹ ಯಂತ್ರಗಳಿದ್ದರೆ ಅವುಗಳನ್ನ ಸ್ವಾಗತಿಸುತ್ತೇನೆ ನಾನು'' ಎನ್ನುತ್ತಾರೆ ಅವರು. 'ಛರಕವೂ ಒಂದು ಯಂತ್ರ, ಹಲ್ಲಿನ ಕಸ ತೆಗೆಯಲಿಕ್ಕೆ ನೀವು ಬಳಸುವ ಕಡ್ಡಿಯೂ ಒಂದು ಯಂತ್ರ' ಎಂದು ಪಟ್ಟಿ ಮಾಡುತ್ತ, ಹೊಲಿಗೆ ಯಂತ್ರವನ್ನು ನಾನು ಒಪ್ಪುತ್ತೇನೆ ಅನ್ನುತ್ತಾರೆ. ಹೊಲಿಗೆ ಯಂತ್ರ ಹೆಂಗಸಿಗೆ ಸಭ್ಯತೆಯನ್ನ ತಂದಿತ್ತಿದೆ ; ಅವಳ ಕಷ್ಟಗಳನ್ನಿಷ್ಟು ಕಡಿಮೆ ಮಾಡಿ ಸಹಾಯ ಮಾಡಿದೆ ಎನ್ನುತ್ತಾರೆ ಗಾಂಧೀಜಿ.

ಅಲೌಕಿಕನಲ್ಲದ ದೇವರು

ರಾಜಕಾರಣ ಹಾಗೂ ದೇವರ ಧ್ಯಾನದ ನಡುವೆ ಸಂಪೂರ್ಣ ಹೊಂದಾಣಿಕೆ ಇರಬೇಕೆಂದು ಹೆಣಗಿದರು ಗಾಂಧೀಜಿ. ಹಾಗಾಗಿ ಅವರಿಗೆ ಯಂತ್ರದ ಬಗ್ಗೆ ಚಿಂತಿಸುವಾಗ ಒಂದು ತರಹದ

ವಿಚಾರ, ದೇವರ ಬಗ್ಗೆ ಚಿಂತಿಸುವಾಗ ಮತ್ತೊಂದು ತರಹದ ವಿಚಾರ ಮಾಡುವುದು ಸಾಧ್ಯವೇ ಇದ್ದಿಲ್ಲ. ಗಾಂಧೀಜಿಯವರ ಆಧ್ಯಾತ್ಮಿಕತೆ, ಕೈಗೆಟುಕದ ಅಲೌಕಿಕ ಹಂಬಲಗಳಿಂದ ಹುಟ್ಟಿದುದಲ್ಲ. ಹಾಗೆಂದು ಆಧ್ಯಾತ್ಮಿಕತೆ ಮೂಲತಃ ಅಲೌಕಿಕ ಅನುಭವ ಹೌದು. ಭಕ್ತಿ ಪಂಥದ ಎಲ್ಲ ಸಂತರರಿಗೂ ಅನ್ವಯಿಸುವ ಮಾತಿದು. ಅವರೆಲ್ಲರೂ, ತನ್ನ ಲೌಕಿಕ ಬದುಕನ್ನ ನಿಯಂತ್ರಿಸುವ ಮೂಲಕ, ಸರಳಗೊಳಿಸುವ ಮೂಲಕ, ಬಡತನದ ಬದುಕಿನಲ್ಲಿ ಸೌಂದರ್ಯವನ್ನು ಕಾಣುವ ಮೂಲಕ, ದೇವರ ಸಾನಿಧ್ಯವನ್ನ ತಲುಪಲು ಯತ್ನಿಸಿದರು.

ಆಧುನಿಕ ಮಾನವ ಮತ್ತೆ ಸುಖಿಯಾಗಬೇಕಾದರೆ ಇರುವುದು ಇದೊಂದೇ ದಾರಿ. ತಾನು ಬದುಕಲಿಕ್ಕೆ ತೀರ ಅನಿವಾರ್ಯವಲ್ಲದ ಎಲ್ಲ ಸಾಧನಗಳನ್ನೂ ಆತ ತ್ಯಜಿಸಬೇಕು. ತಾನು ಮತ್ತೆ ಭಕ್ತನಾಗಲಿಕ್ಕೆ ಅಡ್ಡಿಯಾಗುತ್ತಿರುವ ಉಪಯುಕ್ತತೆಯ ಒಪ್ಪಿತ ಮೌಲ್ಯವನ್ನವನು ಧಿಕ್ಕರಿಸಬೇಕು. ಆತ ಮತ್ತೆ ಭಕ್ತನಾಗಬೇಕು.

ಸಿಂಡಿಕೇಟ್ ಬ್ಯಾಂಕ್

ಕರ್ನಾಟಕದ ಮಿಲಿಯಾಂತರ ಜನರ ಬೆಳವಣಿಗೆಯ ಜತೆಗಾರ

ತನ್ನೆಲ್ಲಾ ವಿನೂತನ ಜನಪರ ಯೋಜನೆಗಳ ಪ್ರಯೋಗಶಾಲೆಯಾದ ಕರ್ನಾಟಕದ ನೆಲದ ಮಕ್ಕಳಿಗೆ ಉಳಿತಾಯದ ಪ್ರಥಮ ಪಾಠ ಹೇಳಿದ ನಮ್ಮ ಬ್ಯಾಂಕು, ಯಾವುದೇ ಉದ್ಯಮದ ಅಭಿವೃದ್ಧಿಯನ್ನು ಸಹಕರಿಸದೇ ಉಳಿದಿಲ್ಲ. ತನ್ನ ಕಾರ್ಯ ಕ್ಷೇತ್ರದಲ್ಲಿರುವ ಸಮಾಜ ಹಿತವೇ ತನ್ನ ಹಿತವೆಂದು ನಂಬಿ ಬಂದ ಈ ಬ್ಯಾಂಕು " ಉಳ್ಳವರು - ಇಲ್ಲದವರು " ಎಂಬ ತಾರತಮ್ಯದೇ, ಬೇಸಾಯ, ಬೃಹತ್ ಕೈಗಾರಿಕೆ, ರಪ್ತು ಕ್ಷೇತ್ರ, ಸಣ್ಣ ಉದ್ದಿಮೆ, ಗುಡಿಕೈಗಾರಿಕೆ, ಸೇವಾಕ್ಷೇತ್ರ, ಸ್ವಉದ್ಯೋಗ ಮುಂತಾದ ಹತ್ತು ಹಲವು ಕ್ಷೇತ್ರಗಳ ಕ್ರಾಂತಿಕಾರೀ ಮಾರ್ಪಾಡಿಗೆ ಸಹಕಾರಿಯಾಗಿದೆ, ಮಾತ್ರವಲ್ಲದೇ ಅನಿವಾಸಿ ಭಾರತೀಯರಿಗೆ ಹತ್ತು ಹಲವು ವಿಧದ ನೆರವನ್ನು ನೀಡುತ್ತಿದೆ.

ಎಲ್ಲ ವರ್ಗದ ಜನರ ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಯನ್ನು ಪೂರೈಸಲು ಶ್ರಮಿಸುತ್ತಾ ಪ್ರತಿಯೊಬ್ಬ ಪ್ರಜೆಯೂ " ನನ್ನ ಬ್ಯಾಂಕು " ಎಂದು ಆತ್ಮೀಯವಾಗಿ ಕರೆಯುವಂತಾಗಿದೆ. ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಅರ್ಥವ್ಯವಸ್ಥೆಯ ಬಗ್ಗೆ ಸಮರ್ಪಕ ಹಿಡಿತ ಸಾಧಿಸುವ ಈ ಬ್ಯಾಂಕು, ಗ್ರಾಹಕರ ಬೆಳೆಯುತ್ತಿರುವ ನಿರೀಕ್ಷೆಗೆ ಸರಿಯಾಗಿ ತನ್ನೆಲ್ಲಾ ವ್ಯವಹಾರಗಳನ್ನೂ ನಿತ್ಯನೂತನಗೊಳಿಸುತ್ತಾ " ಜನಮನದ ಗರ್ಭಗುಡಿಯಲ್ಲಿ ನೆಲೆ ನಿಂತ ನಮಗೆ ಸೇವೆಯೇ ಆರಾಧನೆ" ಎಂಬ ಪರಂಪರೆಯನ್ನು ನೆಚ್ಚಿಕೊಂಡಿದೆ.

ರಾಷ್ಟ್ರದ ಆರ್ಥಿಕ ರಂಗದಲ್ಲಿ ತನ್ನದೇ ಆದ ವೈಶಿಷ್ಟ್ಯದೊಂದಿಗೆ ಎದ್ದು ನಿಂತಿರುವ ಬ್ಯಾಂಕು ೧೯೯೪ ಮಾರ್ಚ್ ಅಂತ್ಯದವೇಳೆಗೆ ೧೦,೦೦೦ ಕೋಟಿ ರೂಪಾಯಿ ಠೇವಣಿ ಸಂಗ್ರಹದ ಗುರಿ ಇಟ್ಟುಕೊಂಡಿದೆ.

ರೈತ ಚಳುವಳಿ

ಭಾರತದ ಪ್ರಜಾಪ್ರಭುತ್ವ ಮತ್ತು ರೈತ ಹೋರಾಟ

ಬದಲಾಗುತ್ತಿರುವ ಪರಿಕಲ್ಪನೆಗಳು ಹಾಗೂ ಧೋರಣೆಗಳು



ಡಾ. ಮುಜಾಫ್ಫರ್ ಅಸ್ಸಾದಿ

೧೯೮೦ ವಿವಿಧ ಸಾಮಾಜಿಕ ಚಳುವಳಿಗಳಿಂದಾಗಿ ಅತ್ಯಂತ ವಿಶಿಷ್ಟ ದಶಕ. ಈ ದಶಕದಲ್ಲಿ ಸಾಮಾಜಿಕ ಚಳುವಳಿಗಳು ಹೊಸತನದೊಂದಿಗೆ ರೂಪುಗೊಳ್ಳುತ್ತಾ ಸಾಮಾಜಿಕ ಚೌಕಟ್ಟಿನೊಳಗೆ ಭದ್ರವಾಗಿ ನೆಲೆಯೂರಲು ಪ್ರಯತ್ನಿಸಿದವು.

ಈ ದಶಕದಲ್ಲಿ ರೈತ ಹೋರಾಟದ ಬಗ್ಗೆ ಹುಟ್ಟಿದ ಚಿಂತನೆಗಳಲ್ಲಿ ವೈವಿಧ್ಯವಿದೆ. ಇದೇ ಕಾಲದಲ್ಲಿ ಹುಟ್ಟಿ ಬಂದ ಎಡ ಪಂಥೀಯ ಚಿಂತನೆಗಳು, ೧೯೬೦ ರ ದಶಕದಲ್ಲಿ ರೂಪುಗೊಂಡಿದ್ದ ಉತ್ಪಾದನಾತ್ಮಕ (Mode of Production) ಚಿಂತನೆಗಳಿಂದ ದೂರ ಸರಿದು ಸಾಮಾಜಿಕ ಚಳುವಳಿಗಳಲ್ಲಿ, ಅದರಲ್ಲೂ ಮುಖ್ಯವಾಗಿ ರೈತ ಹೋರಾಟ, ಮಹಿಳಾವಾದ ಮತ್ತು ಪರಿಸರ ಚಳುವಳಿಗಳ ಮೇಲೆ ಕೇಂದ್ರೀಕೃತಗೊಂಡವು. ಇದೇ ಕಾಲದಲ್ಲಿ ಚಿಂತಕರು, ರೈತ ಹೋರಾಟವನ್ನು ಜಾತಿ ಮತ್ತು ವರ್ಗದ ಮೂಲಕ ಅಭ್ಯಸಿಸಲು ಪ್ರಯತ್ನಿಸಿದರು. ಇನ್ನು ಕೆಲವರು ಹೋರಾಟದ ರೂಪ ರೇಖೆಗಳನ್ನು ಅಭ್ಯಸಿಸಿ ಈ ಹೋರಾಟಗಳನ್ನು ಕುಲಕ್ (Kulak) ಅಥವಾ ಜಾನುವಾರುಗಳ ಬಂಡವಾಳಶಾಹಿ ಎಂದು (Bullock Capitalist) ಕರೆದರು. ಇನ್ನು ಕೆಲವರು ತುಲನಾತ್ಮಕ ಬೆಲೆಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿ ರೈತ ಹೋರಾಟವನ್ನು ಅರ್ಥೈಸಲು ಪ್ರಯತ್ನಿಸಿದರು. ಆದರೆ ಇವರ್‍ಯಾರೂ ಸ್ವತಃ ರೈತರಲ್ಲೇ ಬದಲಾಗುತ್ತಿರುವ, ಭಾರತದ ಪ್ರಭುತ್ವದ ಕುರಿತ ಪರಿಕಲ್ಪನೆಯನ್ನು ಅಭ್ಯಸಿಸುವ

ಪ್ರಯತ್ನವನ್ನು ಮಾಡಲಿಲ್ಲ; ಅದರೊಂದಿಗೆ ಪ್ರಭುತ್ವದ ಕಾರ್ಯಸೂಚಿಗಳಲ್ಲಿ ಆಗುತ್ತಿರುವ ಬದಲಾವಣೆಯನ್ನೂ ಗಮನಿಸಲಿಲ್ಲ. ಪ್ರಭುತ್ವಕ್ಕೆ ಬಂದಿರುವ ವಿರೋಧಗಳು ಹೇಗೆ ಒಳಮುಖವಾದವು ಮತ್ತು ಹೊರಮುಖವಾದವು ಎಂಬುದನ್ನೂ ಇವರು ಚರ್ಚಿಸಲಿಲ್ಲ. ಈ ಅಭ್ಯಾಸ ಎರಡು ರೀತಿಯಲ್ಲಿ ನಮಗೆ ಸಹಾಯ ಮಾಡುತ್ತದೆ. ಬೆಳೆಯುತ್ತಿರುವ ಹಾಗೂ ಬದಲಾಗುತ್ತಿರುವ ಸಂವಾದ. ಬದಲಾಗುತ್ತಿರುವ ಪ್ರಭುತ್ವದ ಕಾರ್ಯಸೂಚಿ.

- ಪ್ರಭುತ್ವವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ರೈತ ಹೋರಾಟಗಳು ಈ ಕೆಳಗಿನ ಪರಿಕಲ್ಪನೆಗಳನ್ನು ಹೊಂದಿದ್ದವು.
- ರೈತರು ಬಲಾಢ್ಯ ವರ್ಗಕ್ಕೆ ಸೇರುವುದಿಲ್ಲ
- ರೈತರು ಆಳುವ ವರ್ಗಕ್ಕೆ, ಸೇರುವುದು ಕೂಡ ಅಸಾಧ್ಯ
- ರೈತರೇ ಭಾರತದ ನಿಜವಾದ ಬಹುಸಂಖ್ಯಾತರು
- ರೈತರಿಗೆ ರಾಜಕೀಯ ಅಧಿಕಾರದ ಬಗ್ಗೆ ಇರುವ ನಿರಾಸಕ್ತಿಯೇ ಪ್ರಸ್ತುತ ರಾಜಕೀಯ ದರ್ಪಕ್ಕೆ ಮೂಲ ಕಾರಣ.

ಈ ಪರಿಕಲ್ಪನೆಗಳ ಜೊತೆಗೆ, ರೈತ ಹೋರಾಟಗಳು ಭಾರತದ ಬಂಡವಾಳ ಹಾಗೂ ಪಾಶ್ಚಾತ್ಯ ಬಂಡವಾಳಗಳ ನಡುವೆ ಇರುವ ಸಂಬಂಧಗಳ ಬಗ್ಗೆ ಸಂವಾದಿಸಲು ಯತ್ನಿಸುತ್ತವೆ. ಇದರೊಂದಿಗೆ ಭಾರತದ ಪ್ರಭುತ್ವದ ಮೇಲಿರುವ ಅದರ ಪ್ರಭಾವವನ್ನು ಶಕ್ತಿ ರಾಜಕಾರಣದ ಚೌಕಟ್ಟಿನೊಳಗೆ ಅರ್ಥೈಸುವ ಯತ್ನವನ್ನೂ ಮಾಡುತ್ತವೆ. ರೈತ ಹೋರಾಟಗಳ ಪ್ರಕಾರ, ಭಾರತದಲ್ಲಿರುವ ಬಡಕಲು ಬಂಡವಾಳವು ಒಂದು ಅಂತರರಾಷ್ಟ್ರೀಯ ಬಂಡವಾಳದ ಕಾರಸ್ಥಾನ. ಭಾರತವನ್ನು ಇತಿಹಾಸದುದ್ದಕ್ಕೂ ಕೆಳಮಟ್ಟದಲ್ಲಿರಿಸಲು ಈ ಬಂಡವಾಳಶಾಹಿಗಳು ಶ್ರಮಿಸುವುದು ಹೊಸತೇನಲ್ಲ. ಪಾಶ್ಚಾತ್ಯ ಬಂಡವಾಳಶಾಹಿಗೆ ಭಾರತವು ಬಡಕಲಾದರೆ ಹೆಚ್ಚಿನ ಲಾಭವಿದೆ ಅದಕ್ಕಾಗಿ ಅದು ಹಲವು ನೆಲೆಗಳ ಮೂಲಕ ಕ್ರಿಯಾಶೀಲವಾಗುತ್ತದೆ.

> “೧೯೪೭ ಕ್ಕೆ ಹಿಂದೆ ಫರಂಗಿಯವರು ಯಾವ ಯಾವ ದೇಶಗಳನ್ನು ತಮ್ಮ ವಸಾಹತುಗಳನ್ನಾಗಿಸಿಕೊಂಡಿದ್ದರೋ ಅಂತಹ ದೇಶಗಳು ಸ್ವತಂತ್ರರಾದ ನಂತರವೂ ಅವುಗಳ ಮೇಲೆ ಆರ್ಥಿಕ ವಸಾಹತನ್ನು ಸ್ಥಾಪಿಸಿಕೊಂಡಿರುವುದು
>
> ಇಂತಹ ಆರ್ಥಿಕ ವಸಾಹತನ್ನು ಈ ಫರಂಗಿ ರಾಷ್ಟ್ರಗಳು ತಮ್ಮ ಹಿಂದಿನ ಗುಲಾಮ ರಾಷ್ಟ್ರಗಳಲ್ಲಿ, ಜಗತ್ತಿನ ಎಲ್ಲಾ ಜನಾಂಗಗಳಿಗೂ ಸಮಾನವಾಗಿ ಅರ್ಥವಾಗದಂತಹ ತಾಂತ್ರಿಕತೆಯನ್ನು ಕಡ್ಡಾಯಗೊಳಿಸುವ ಮೂಲಕ ಸಾಧಿಸಿದ್ದಾರೆ. ಯೂರೋ - ಅಮೆರಿಕೆಯ ಉತ್ಪಾದನಾ ಕ್ರಮ ಮತ್ತು ತಾಂತ್ರಿಕತೆಯ ಆಧಾರದ ಮೇಲೆ ಅವಲಂಬಿತವಾಗಿರುವ ಈ ಮಾಜಿ ಗುಲಾಮ

> ದೇಶಗಳಿಂದ ಯಂತ್ರಜ್ಞಾನವನ್ನು ಬಚ್ಚಿಟ್ಟು ಈ ದೇಶಗಳ ಉತ್ಪಾದನೆಯನ್ನು ಕುಂಠಿತಗೊಳಿಸುವುದರ ಜೊತೆಗೆ ತಮ್ಮ ಯಂತ್ರಗಳಿಗೆ ದುಬಾರಿ ಬೆಲೆಗಳನ್ನು ನಿಗದಿ ಮಾಡಿ ಪೂರ್ಣ ಉದ್ಯೋಗ ಸಾಧನೆಯೇ ಸಾಧ್ಯವಿಲ್ಲದಂತೆ ಈ ದೇಶಗಳ ಆರ್ಥಿಕ ವ್ಯವಸ್ಥೆಯನ್ನು ಬಡಕಲು ಬಂಡವಾಳ ಶಾಹಿಗಳಾಗಿಯೇ ಉಳಿಯುವಂತೆ ಮಾಡಿವೆ.

ಇದಕ್ಕಿಂತ ಬೇರೆಯಲ್ಲದ ಯೋಜನೆಯನ್ನು ಭಾರತದ ಬಂಡವಾಳಶಾಹಿಯು, ಈ ದೇಶದ ಜನಸಾಮಾನ್ಯರ ಮೇಲೆ ಹೇರುತ್ತದೆ. ಭಾರತದ ಅನಭಿವೃದ್ಧಿಯನ್ನು ಈ ವರ್ಗಗಳು ತಮ್ಮದೇ ಆದ ಮಾದರಿಗಳಲ್ಲಿ ಸಾಕಾರಗೊಳಿಸುತ್ತದೆ. ಈ ವರ್ಗಗಳು ವೈಜ್ಞಾನಿಕ ಜ್ಞಾನವನ್ನು ತಡೆ ಹಿಡಿದು, ಅದರ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿ, ಬೆಳವಣಿಗೆಯನ್ನು ವಕ್ರಗೊಳಿಸುತ್ತದೆ. ಸಂಪತ್ತನ್ನು ಅಸಮರ್ಪಕವಾಗಿ ಹಂಚುವುದರ ಮೂಲಕ ವ್ಯಕ್ತಿಗತ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಅಸಮತೋಲನವನ್ನು ತರುತ್ತದೆ, ಮತ್ತು ಅದನ್ನು ಕಾಯ್ದುಕೊಳ್ಳುತ್ತದೆ. ಅಂತಿಮವಾಗಿ, ಬಡಕಲು ಬಂಡವಾಳವನ್ನು, ಎತ್ತಿ ಹಿಡಿಯುವುದರ ಮೂಲಕ ಆರ್ಥಿಕ - ಸಾಮಾಜಿಕ ವೈರುಧ್ಯಗಳನ್ನು ಬೆಳೆಯಲು ಅವಕಾಶ ನೀಡುತ್ತದೆ. ಇಂತಹ ಶೋಷಣೆಗಳು ಅಂತಿಮವಾಗಿ ಎರಡು ರೀತಿಯ ಜೀತದಾಳುಗಳನ್ನು ನಿರ್ಮಿಸುತ್ತದೆ. ಮೊದಲನೆಯದು ಉತ್ಪಾದಕ ಜೀತದಾಳು, ಎರಡನೆಯದು ಬಳಕೆದಾರ ಜೀತದಾಳು. ಮೊದಲನೆಯದರಲ್ಲಿ ರೈತರು ಶೋಷಿತ ವರ್ಗ ಹಾಗೂ ಉತ್ಪಾದಕ ಜೀತದಾಳಾಗುತ್ತಾರೆ. ಎರಡನೆಯದರಲ್ಲಿ ಕೈಗಾರಿಕಾ ಕಾರ್ಮಿಕ ವರ್ಗದವರು ಹಾಗೂ ನೌಕರ ವರ್ಗದವರು ಕಂಡು ಬರುತ್ತಾರೆ. ಆದರೆ, ರೈತರನ್ನು ಜೀತದಾಳುಗಳಂತೆ ಬಂಡವಾಳಶಾಹಿಯು ಹಿಡಿದಿಟ್ಟಿರುವ ರೀತಿ - ನೀತಿಯು ವಿಶಿಷ್ಟವಾದುದು.

> "ಭಾರತದ ಕೈಗಾರಿಕೆಗಳು ಮಾಡುತ್ತಿರುವ ಈ ಲೂಟಿಗೆ ಪೂರಕವಾಗುವಂತೆ ಅವುಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಬೆಳೆದ ರೈತನ ಬೆಲೆಗಳಿಗೆ ಮಾತ್ರ ಬೆಲೆ ನಿಗದಿ ಮಾಡುವ ಮತ್ತು ಆಹಾರ ಧಾನ್ಯಗಳಿಗೆ ಮಾತ್ರ ನಿಕೃಷ್ಟ ಬೆಲೆ ನಿಗದಿ ಮಾಡಿ ರೈತರನ್ನು ಉತ್ಪಾದಕ ಜೀತದಾಳುಗಳಂತೆ ಹಿಡಿದಿಟ್ಟುಕೊಂಡಿದೆ "

ಇತ್ತೀಚಿನ ದಿನಗಳಲ್ಲಿ ಭಾರತದ ಬಂಡವಾಳ, ಅಂತರರಾಷ್ಟ್ರೀಯ ಬಂಡವಾಳಗಳ ನಡುವಿನ ಸಂಬಂಧದ ವಿಶ್ಲೇಷಣೆಯಲ್ಲಿ ಅನೇಕ ಬದಲಾವಣೆಗಳು ಆಗಿದೆ. ಭಾರತದ ಪ್ರಭುತ್ವ ಈಗ ಉದಾರ ನೀತಿಯ ಕಾಲಘಟ್ಟದಲ್ಲಿದೆ. ಈ ಕಾಲದಲ್ಲಿ ಭಾರತದ ಬಂಡವಾಳ ಶಾಹಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ದಲ್ಲಾಳಿ ಅಥವಾ ಒಡಂಬಡಿಕೆಯ ಬಂಡವಾಳವೆಂದು ಚಿತ್ರಿಸುವ ಯತ್ನವನ್ನು ರೈತ ಹೋರಾಟಗಳು ಮಾಡಿದವು. ಈ ಹೊಸ ವಿಶ್ಲೇಷಣೆಯ ಪ್ರಕಾರ ಸಾಮ್ರಾಜ್ಯಶಾಹಿ ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಉಗಮ ಏಕ ಕಾಲದಲ್ಲಿ ಆಯಿತು. ಇವುಗಳ ವಿಕಾಸವು ಜೊತೆ ಜೊತೆಗಿನ ಬೆಳವಣಿಗೆಯಲ್ಲದೆ, ಅಂತರರಾಷ್ಟ್ರೀಯ ಬಂಡವಾಳಶಾಹಿಯ ಧೋರಣೆಗಳಲ್ಲಿ ಆರ್ಥಿಕ

ಸಾಮ್ರಾಜ್ಯಶಾಹಿ ಮಾತ್ರವಲ್ಲ, ಬೌದ್ಧಿಕ ಉತ್ಪಾದನೆ ಬೆಲೆಲೂಟಿಯ ಸಾಮ್ರಾಜ್ಯಶಾಹಿಗಳೂ ಸೇರಿಕೊಂಡಿವೆ. ಈ ಹೊಸ ವಿಶ್ಲೇಷಣೆಯಲ್ಲಿ ಎಡಪಂಥೀಯ ಮಾರ್ಕ್ಸ್‌ವಾದ ಹಾಗೂ ಲೋಹಿಯಾವಾದದ ಕೆಲವು ಅಂಶಗಳನ್ನು ಕಾಣಬಹುದು. ೧೯೯೨ -೯೩ ರಲ್ಲಿ ರೈತ ಹೋರಾಟಗಳು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಕುರಿತು ಮಾತನಾಡತೊಡಗಿದ್ದು ವಿಶಿಷ್ಟವಾಗಿದೆ. ಈ ರೀತಿಯ ವಿಭಿನ್ನ ವಾದಗಳನ್ನು ಕ್ರೋಢೀಕರಿಸುವ ಸಂದರ್ಭದಲ್ಲಿ ರೈತ ಹೋರಾಟಗಳು ವಿರೋಧಾಬಾಸಗಳಿಗೆ ಅವಕಾಶಗಳನ್ನು ನೀಡಿದ್ದು ದುರದೃಷ್ಟ. ಇದು ರೈತ ಹೋರಾಟಗಳ ಪತನಕ್ಕೆ ನಾಂದಿಯಾಯಿತು.

ಭಾರತದ ಪ್ರಭುತ್ವವನ್ನು ವಿರೋಧಿಸುವ ವಿಷಯದಲ್ಲಿ ರೈತ ಹೋರಾಟಗಳಲ್ಲಿ ಎರಡು ಹಂತಗಳನ್ನು ಕಾಣುತ್ತೇವೆ - ಮೊದಲನೇ ಹಂತದಲ್ಲಿ - ೧೯೮೦ ರ ದಶಕ - ತುಲನಾತ್ಮಕ ಬೆಳೆಗಳ ಮುಖಾಂತರ ಮತ್ತು ಇನ್ನಿತರ ವಿಷಯಗಳ ಮುಖಾಂತರ ಪ್ರಭುತ್ವವನ್ನು ವಿರೋಧಿಸಿದವು. ಈ ವಿರೋಧ ಕೇವಲ ಸಂವಾದ ರೂಪದಲ್ಲಿರದೆ, ಚಳುವಳಿಯ ರೂಪದಲ್ಲಿತ್ತು. ಈ ದಶಕದ ಇನ್ನೊಂದು ವೈಶಿಷ್ಟವೆಂದರೆ, ಪ್ರಭುತ್ವದ ಬಗೆಗಿನ ವಿರೋಧವನ್ನು ಅಂತರೀಕರಣಗೊಳಿಸಲಾಯಿತು. ರೈತ ಹೋರಾಟದ ಎರಡನೇ ಹಂತವು ಭಾರತದ ಪ್ರಭುತ್ವದ ಆರ್ಥಿಕ ಉದಾರ ನೀತಿಯ ಕಾಲದಲ್ಲಿ ತಲೆದೋರಿತು. ಇದನ್ನು ಈಗಲೂ ಕಾಣಬಹುದು. ಈ ಹಂತದಲ್ಲಿಯೇ ಪ್ರಭುತ್ವದ ವಿರೋಧವನ್ನು ಬಾಹ್ಯೀಕರಿಸಲಾಯಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಬಂಡವಾಳಶಾಹಿಯ ಬೆಳವಣಿಗೆಯಿಂದಾಗಿ ರೈತ ತನಗರಿಯದಂತೆಯೇ ಮಾರುಕಟ್ಟೆ - ಕಾರ್ಯ ವಿಧಾನದಲ್ಲಿ ಪಾಲುಗೊಂಡದ್ದರಿಂದ ತುಲನಾತ್ಮಕ ಬೆಳೆಗಳಿಗೆ, ಮತ್ತು ಸಂಬಂಧಿಸಿದ ವಿಷಯಗಳಿಗೆ ಪ್ರಾಮುಖ್ಯತೆ ದೊರೆಯಿತು. **ಬಂಡವಾಳಶಾಹಿ ಮಾರುಕಟ್ಟೆ** ಹಾಗೂ **ತುಲನಾತ್ಮಕ ಬೆಳೆಗಳು** ರೈತರಿಗೆ ಬೇಕಾದ ವಾದ-ಸಂವಾದದ ಆಯಾಮ-ಅವಕಾಶಗಳನ್ನು ಕಲ್ಪಿಸಿಕೊಳ್ಳಲು ಸಹಕಾರಿಯಾಯಿತು. ಜೊತೆ ಜೊತೆಗೇ ರೈತರು, ಭಾರತದ ಪ್ರಭುತ್ವಕ್ಕೆ ತಮ್ಮ ಬಗ್ಗೆ ಇರುವ ಕಳಕಳಿ ಹಾಗೂ ಚಿಂತನೆಗಳನ್ನು ಪ್ರಶ್ನಿಸತೊಡಗಿದರು. ಇದು ಅಂತಿಮವಾಗಿ ಒಂದು ಬಗೆಯ ನಿರಾಶಾವಾದಿತ್ವದ ನಿಲುವಿನ ಕಡೆಗೆ ರೈತರನ್ನು ಕೊಂಡುಯ್ಯಿತು. ರೈತರು ಭಾರತದ ಪ್ರಭುತ್ವವನ್ನು ಒಂದು **ಸಂವಾದ ಪ್ರಭುತ್ವ** (Discourse State) ಎಂದು ಕರೆದರು. ಇದು ರಾಜ್ಯದ ಪರಿಕಲ್ಪನೆಯನ್ನು ನಿರ್ಮೂಲನಗೊಳಿಸುವ ಯತ್ನವೂ ಹೌದು; ಈ ಸಂವಾದ-ರಾಜ್ಯದ ಪರಿಕಲ್ಪನೆಯ ಪ್ರಕಾರ ಭಾರತ (ರಾಜ್ಯವು) ಅಂತಿಮವಾಗಿ ಸಂವಾದಗಳನ್ನು ಸೃಷ್ಟಿಸುತ್ತದೆ. ಅದು ಜಾತೀಯತೆ, ಕೋಮುವಾದ ಹೀಗೆ ಯಾವುದೇ ಸಮಸ್ಯೆಯ ಕುರಿತು ಕೇವಲ ಸಂವಾದಗಳನ್ನು ನಿರ್ಮಿಸುತ್ತದೆ. ಆದ ಕಾರಣವೇ ಭಾರತದ ಪ್ರಭುತ್ವದ ಯಾವುದೇ ನೀತಿಯು ಪರಿಪೂರ್ಣತೆಯನ್ನು ಸಾಧಿಸುವ ಆಶಾವಾದವನ್ನು ತೋರಿಸುವುದಿಲ್ಲ.

ಈ ಸಂವಾದ ಪ್ರಭುತ್ವದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ರೈತ ಹೋರಾಟದಲ್ಲಿ ಎರಡು ಮುಖ್ಯ ಧ್ಯೇಯಗಳಿರುವುದನ್ನು ನಾವು ಕಾಣಬಹುದು. ಮೊದಲನೆಯದು, ಭಾರತ ಪ್ರಭುತ್ವ ಕಾರ್ಯಸೂಚಿಯ ಪಟ್ಟಿಯಲ್ಲಿ ಸಂವಾದಗಳಲ್ಲಿ ರೈತರಿಗೆ ಪ್ರಮುಖ ಸ್ಥಾನವನ್ನು ಕಲ್ಪಿಸಿಕೊಡುವುದು. ಎರಡನೆಯದು, ರೈತರ ಬಗ್ಗೆ ಲಾಗಾಯ್ತಿನಿಂದ ಇರುವ ಜಡತ್ವ, ಮೌಲ್ಯ ಹೀನ, ವಿಚಾರಹೀನ, ಇತ್ಯಾದಿ ಅಭಿಪ್ರಾಯಗಳನ್ನು ಬದಲಾಯಿಸುವುದು. ರೈತರ ಸ್ಥಾನವನ್ನು ಎತ್ತಿಹಿಡಿಯುವಂತಹ ಇನ್ನಿತರ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಯಿತು. **ರೈತರೇ ಭಾರತದ ಪ್ರಮುಖ ಶ್ರಮ ಜೀವಿಗಳು, ರೈತರು ತಮ್ಮ ದೇಶದಲ್ಲಿ ಅಡಿಯಾಳುಗಳು**, ನಗರ **ಸಂಸ್ಕೃತಿಯ ಬೆಳವಣಿಗೆಗೆ ಮೂಲ ರೈತರ ಶೋಷಣೆ** ಮುಂತಾಗಿ.

ತುಲನಾತ್ಮಕ ಬೆಲೆಗಳು ಅಂತಿಮವಾಗಿ ಕೆಳಸ್ತರದಿಂದ ಬಂಡವಾಳವನ್ನು ಬೆಳೆಸಲು ಅವಕಾಶ ನೀಡುತ್ತದೆ. ಗ್ರಾಮ-ನಗರಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ರೈತ, ರೈತ ಕೂಲಿಕಾರರ ಆರ್ಥಿಕ ಅಭಿವೃದ್ಧಿಯನ್ನು ಎತ್ತಿ ಹಿಡಿಯುತ್ತದೆ. ಆದ ಕಾರಣವೇ, ರೈತರು ತುಲನಾತ್ಮಕ ಬೆಲೆ ಕುರಿತಾದ ಬೇಡಿಕೆಗಳನ್ನು ಭಾರತದ ಪ್ರಭುತ್ವದ ಮುಂದಿಟ್ಟಾಗ, ಕೈಗಾರಿಕೆ ಹಾಗೂ ಕೃಷಿ ನಡುವೆ ಐಕ್ಯವನ್ನು ಸಾಧಿಸುವ ಯತ್ನ ಮಾಡಿದೆ. ಇದಕ್ಕೆ ಕಾರಣವಿಲ್ಲವೆಂದಲ್ಲ. ವಾಸ್ತವವಾಗಿ, ಕೈಗಾರಿಕಾ ಬಂಡವಾಳವು ಸ್ವಾತಂತ್ರ್ಯೋತ್ತರ ಭಾರತದ ಪ್ರಭುತ್ವದ ಮೇಲೆ ತನ್ನ ಹಿಡಿತವನ್ನು ಸಾಧಿಸಿದೆ. ಇದು ರೈತರಿಗೆ ಇರಸು ಮುರುಸಿನ ವಿಷಯವಾಗಿತ್ತು. ಈ ಹತೋಟಿಯು ರೈತರನ್ನು ಅಧಿಕಾರ ಕೇಂದ್ರದಿಂದ ವಂಚಿಸಿ ಎರಡನೇ ದರ್ಜೆಯ ಪ್ರಜೆಗಳನ್ನಾಗಿ ಪರಿವರ್ತಿಸಿತ್ತು. ಆದ ಕಾರಣ ರೈತರು ಪ್ರಭುತ್ವದ ಮೇಲೆ ಹತೋಟಿ ಸಾಧಿಸಲು ಮತ್ತು ಕೈಗಾರಿಕೆ-ಕೃಷಿ ನಡುವೆ ಐಕ್ಯ ಸಾಧಿಸಲು ಕೆಲವು ವಿಶಿಷ್ಟ ಬೇಡಿಕೆಗಳನ್ನು ೧೯೮೦ರ ದಶಕದಲ್ಲಿ ಮುಂದಿಟ್ಟರು. ಅವುಗಳಲ್ಲಿ ಮುಖ್ಯವಾದುದು: ಸಮಾನ ಬೆಲೆಗಳು, ಕೃಷಿಯನ್ನು ಕೈಗಾರಿಕೆಯೆಂಬಂತೆ ಪರಿಗಣಿಸುವುದು, ಯೋಜನೆಗಳಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ಕೃಷಿಗೆ ನೀಡುವುದು, ನಗರ-ಗ್ರಾಮಗಳ ಅಂತರವನ್ನು ಕಡಿಮೆ ಮಾಡುವುದು, ನಗರಗಳ ಕೈಗಾರಿಕಾ ಬೆಳವಣಿಗೆಯ ಮೇಲೆ ಕಡಿವಾಣ ಹಾಕುವುದು, ಅಧಿಕಾರ ಕೇಂದ್ರಗಳ ಮೇಲೆ ಕೈಗಾರಿಕಾ ಬಂಡವಾಳ ಶಾಹಿಯ ಹಿಡಿತವನ್ನು ಕಡಿಮೆ ಗೊಳಿಸುವುದು ಇತ್ಯಾದಿ ಇತ್ಯಾದಿ. ಆದರೆ, ಈ ಬೇಡಿಕೆಗಳಲ್ಲಿ ಕೈಗಾರಿಕಾ ಬಂಡವಾಳ ವರ್ಗಗಳನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸುವ ಬೇಡಿಕೆಯನ್ನು ರೈತರು ಎಲ್ಲಿಯೂ ವ್ಯಕ್ತಪಡಿಸುವುದಿಲ್ಲ. ಇದಕ್ಕೆ ಕಾರಣವಿಲ್ಲವೆಂದಲ್ಲ. ಈ ರೀತಿಯ ಬೇಡಿಕೆಯು ರೈತ ಹೋರಾಟಕ್ಕೆ ಹೊಸ ಆಯಾಮ ನೀಡುತ್ತದೆಯಲ್ಲದೆ, ಸಾಮಾಜಿಕವಾಗಿ ಹಲವು ಬಗೆಯ ವರ್ಗ ಸಂಘರ್ಷ (ನೇರ ಸಂಘರ್ಷ)ಗಳಿಗೆ ಕಾರಣವಾಗಿ ರೈತ ಹೋರಾಟವನ್ನು ನಿಸ್ತೇಜಗೊಳಿಸುವುದೆಂಬ ನಂಬಿಕೆಯು ಇದರ ಹಿಂದೆ ಇತ್ತು.

೧೯೮೦ ರ ದಶಕದ ರೈತ ಹೋರಾಟಗಳು ಪ್ರಭುತ್ವವನ್ನು ವಿರೋಧಿಸುವಾಗ ವಿರೋಧಾತ್ಮಕ ನೀತಿಯನ್ನು ಅಳವಡಿಸಿಕೊಂಡಿದೆ. ಒಂದೆಡೆ ರೈತ ಹೋರಾಟಗಳು ರಾಜಕೀಯ ಪ್ರಭುತ್ವದ ವಿರುದ್ಧ

ತಮ್ಮದೇ ಪಕ್ಷವನ್ನು ಕಟ್ಟಿ ಚುನಾವಣೆಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಹಿಡಿತವನ್ನು ಸಾಧಿಸಲು ಯತ್ನಿಸಿದವು. ಇದಕ್ಕೆ ಪೂರಕವಾಗಿ ರಾಜಕೀಯ ಸಮತೋಲನದ (Balance of Power) ತಂತ್ರವನ್ನು ಕೂಡ ಬಳಸಿದವು. ಜೊತೆಗೆ, ರಾಜಕೀಯ ಪಕ್ಷಗಳೊಂದಿಗೆ ಹೊಂದಾಣಿಕೆಯನ್ನು ಮಾಡಿ, ವಿವಿಧ ರಾಜಕೀಯ ಸಂಸ್ಥೆಗಳ ಮೇಲೆ ತಮ್ಮ ಹತೋಟಿಯನ್ನು ಸಾಧಿಸುವ ಯತ್ನವನ್ನೂ ಮಾಡಿದವು. ಈ ಎಲ್ಲ ಪ್ರಯತ್ನಗಳ ಹಿಂದೆ ಇದ್ದ ಪ್ರಮುಖ ವ್ಯಕ್ತಿ, ಮಾಜಿ ಪ್ರಧಾನ ಮಂತ್ರಿ ದಿವಂಗತ ಚರಣ್ ಸಿಂಗ್. ಇವರು ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಬರೆದ ಪತ್ರವೊಂದರಲ್ಲಿ ಈ ಯತ್ನದ ಅಂಶಗಳನ್ನು ಕಾಣಬಹುದು.

> "It would not only be in the interest of farmers and the downtrodden but also in the interest of the country as a whole that a maximum number of sincere farmers enter the parliament and legislative assemblies. I hope you will extend your co-operation"

ಇದೇ ರೀತಿಯ ಮತ್ತೊಂದು ಯತ್ನವನ್ನು ದಿವಂಗತ ಎಚ್. ಎನ್. ಬಹುಗುಣ ಮಾಡಿದ್ದರು. ಇವೆರಡು ಯತ್ನಗಳು ವಿಫಲವಾದದ್ದು ಇತಿಹಾಸಕ್ಕೆ ಸೇರಿದ ವಿಷಯ. ಈ ವೈಫಲ್ಯದಿಂದಾಗಿ ಭಾರತದ ಪ್ರಭುತ್ವ ತನ್ನ ಸಮತೋಲನವನ್ನು ಕಾಯ್ದುಕೊಳ್ಳಲು ಸಾಧ್ಯವಾಯಿತು.

ಈ ಸಂದರ್ಭದಲ್ಲಿ ರೈತರಲ್ಲಿ ಹುಟ್ಟಿಕೊಂಡ **ಸಾಂಸ್ಕೃತಿಕ ಆಸಕ್ತಿ**ಯ ಹಿನ್ನೆಲೆಯಲ್ಲಿ ಎರಡು ಮುಖ್ಯ ಅಂಶಗಳಿವೆ. - ಪೌರ ಸಮಾಜ (Civil Society) ದ ಮೇಲೆ ಪ್ರಭಾವ ಬೀರುತ್ತಿರುವ ಫಾಸಿಸ್ಟ್ ಶಕ್ತಿಗಳನ್ನು ವಿರೋಧಿಸಿ, ಭಾರತದ ಪ್ರಭುತ್ವದ ಜಾತ್ಯಾತೀತತೆ ಹಾಗೂ ಪ್ರಜಾಪ್ರಭುತ್ವಗಳ ಚೌಕಟ್ಟನ್ನು ಕಾಯ್ದುಕೊಳ್ಳುವುದು: ಹಾಗೂ ವಿಚಾರಶೀಲ ರೈತ ಸಮುದಾಯವೊಂದನ್ನು ಸೃಷ್ಟಿಸುವುದು, ರೈತರು ಕೋಮುವಾದ, ಫಾಸಿಸಂ ಹಾಗೂ ಜಾತ್ಯಾತೀತತೆಗಳ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸುವ ಶಕ್ತಿಯನ್ನು ಪಡೆಯುವುದು.

ಇಷ್ಟೇ ಅಲ್ಲದೆ, ಭಾರತದ ಪ್ರಭುತ್ವವನ್ನು ತುಲನಾತ್ಮಕ ಬೆಲೆ ಹಾಗೂ ರಾಜಕೀಯ ಸಂವಾದಗಳ ಮೂಲಕ ವಿರೋಧಿಸುವಾಗ ರೈತರು ಕುಸಿಯುತ್ತಿರುವ ಸಾಂಸ್ಕೃತಿಕ ನೆಲೆಗಟ್ಟಿನ ಕುರಿತು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದರು. ಜೊತೆಗೆ ತಮ್ಮ ನೈಜ ಸಂಸ್ಕೃತಿಯ ಹುಡುಕಾಟದ ಯತ್ನವನ್ನು ನಡೆಸಿದ್ದರು. ಇದರಲ್ಲಿದ್ದ ವಿರೋಧಾಭಾಸವೇನೆಂದರೆ, ಈ ಹುಡುಕಾಟದಲ್ಲಿ ಮೂಲ ಸಂಸ್ಕೃತಿ (Core culture)ಯನ್ನು ಕಂಡುಕೊಳ್ಳುವ ಸಂಕಲ್ಪವಿರಲಿಲ್ಲ. ಇದಕ್ಕೆ ಕಾರಣ ಈ ಬಗೆಯ ಹುಡುಕಾಟ ಅಂತಿಮವಾಗಿ ರೈತರಿಗೆ ಹೊಸ ಸಮಸ್ಯೆಗಳನ್ನು ತಂದಿಡಬಹುದು ಎಂಬ ವಿಚಿತ್ರ ಹೆದರಿಕೆ.

ಹೀಗಾಗಿ ರೈತರು ಸಾಂಸ್ಕೃತಿಕ ಅಭ್ಯಾಸವನ್ನು ಬೇರೆ ರೀತಿಯಿಂದ ಮಾಡಲು ಪ್ರಯತ್ನಿಸಿದರು, ಆ ಅಭ್ಯಾಸಗಳು ಬೇರೆ ಬೇರೆ ಮಟ್ಟದಲ್ಲಿದ್ದವು. ಆರಂಭದಲ್ಲಿ, ಇದು ಪ್ರತಿಭಟನೆ ರೂಪದಲ್ಲಿ ವ್ಯಕ್ತವಾದವು. ಮೊದಲು ಈ ಪ್ರತಿಭಟನೆಯು ಬಂಡವಾಳಶಾಹೀ ಜೀವನ ಶೈಲಿಯ ವಿರುದ್ಧವಾಗಿತ್ತು. ನಂತರ, ಪುರುಷ ಪ್ರಧಾನ ಸಂಸ್ಕೃತಿ ಮತ್ತು ಸಾಮಾಜಿಕ ಸಂಬಂಧಗಳನ್ನು ವಿರೋಧಿಸುವುದಾಗಿತ್ತು. ಅಂತಿಮವಾಗಿ ಅದು ಅಂತರರಾಷ್ಟ್ರೀಯ, ಬಂಡವಾಳಶಾಹೀ ಪ್ರಧಾನ ಜೀವನಮಟ್ಟಗಳನ್ನು ವಿರೋಧಿಸಿತು. ಈ ರೀತಿಯ ಪ್ರತಿಭಟನೆಗೆ ಕಾರಣಗಳಿವೆ. ಭಾರತದ ಪ್ರಭುತ್ವವು ಹೇಗೆ ನೋಡಿದರೂ, ಈ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಹದ್ದು. ಇಷ್ಟೇ ಅಲ್ಲದೆ ಅದು ಈ ಸಂಸ್ಕೃತಿಯನ್ನು ತನ್ನ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡಿದೆ. ಇದರೊಂದಿಗೆ, ಭಾರತದ ಪ್ರಭುತ್ವವು ಯಥಾಸ್ಥಿತಿಯನ್ನು ಜೀವನ ಶೈಲಿಗಳಲ್ಲಿ ಮತ್ತು ಸಂಬಂಧಗಳಲ್ಲಿ ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ. ಇದು ಈ ಪ್ರಭುತ್ವದ ಒಂದು ವೈರುಧ್ಯ.

ರೈತರು ಗಾಂಧೀವಾದದ ಜೀವನ ಶೈಲಿ, ಅಧಿಕಾರದ ವಿಕೇಂದ್ರೀಕರಣ ಇತ್ಯಾದಿಗಳನ್ನು ಬೆಂಬಲಿಸುತ್ತಾರೆ. ಇದರೊಂದಿಗೆ ಸರಳವಿವಾಹ, ಅಂತರಜಾತೀಯ ವಿವಾಹ ಇತ್ಯಾದಿಗಳನ್ನು ಎತ್ತಿ ಹಿಡಿಯುತ್ತಾರೆ. ಸರಳ ವಿವಾಹವು, ಅವರ ಪ್ರಕಾರ ಮಾನಸಿಕ ಮತ್ತು ಧಾರ್ಮಿಕ ಸಂಕೋಲೆ-ದಾಸ್ಯಗಳಿಂದ ಸ್ವತಂತ್ರಗೊಳಿಸುವ ಸಾಧನ. ಇದು ಮೌಢ್ಯತೆ, ಮೂರ್ಖತೆ ಹಾಗೂ ದಾಸ್ಯತನವನ್ನು ಹೋಗಲಾಡಿಸುತ್ತದೆ. ವೈಚಾರಿಕ ದೃಷ್ಟಿಕೋನ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಬೆಳೆಸುತ್ತದೆ. ಸಮಾನತಾ ಸಮಾಜದ ನಿರ್ಮಾಣವನ್ನು ಮಾಡುತ್ತದೆ. ಈ ಬಗೆಯ ವೈಚಾರಿಕತೆಯಿಂದಾಗಿಯೇ ರೈತ ಹೋರಾಟಗಳು ಮಹಿಳೆಯರಿಗೆ ಪೂರಕವಾದ ಕೆಲವು ಬೇಡಿಕೆಗಳನ್ನು ಮುಂದಿಡಲು ಸಾಧ್ಯವಾಯಿತು. ಅವುಗಳಲ್ಲಿ ಮುಖ್ಯವಾಗಿ ದಿನಗೂಲಿ ದರಗಳಲ್ಲಿ ಸಮಾನತೆ, ಆಸ್ತಿಯಲ್ಲಿ ಸಮಪಾಲು, ಶೋಷಣೆಯಿಂದ ಮುಕ್ತಿ-ಈ ಎಲ್ಲಾ ಚಿಂತನೆಗಳೂ, ತಮ್ಮ ತಾರ್ಕಿಕ ಪರಿಪೂರ್ಣತೆಯನ್ನು ತಲುಪದೇ ಇದ್ದರೂ ರೈತರಲ್ಲಿ ಇವು ತಮ್ಮ ಸ್ವಂತಿಕೆಯ ಬಗ್ಗೆ ಒಂದು ಧೃಡವಾದ ವೈಚಾರಿಕ ಅಭಿಪ್ರಾಯವನ್ನು ಸೃಷ್ಟಿಸಿದವು. ಆದ ಕಾರಣವೇ, ರೈತರು ತಮ್ಮ ಬಗ್ಗೆ ಈ ರೀತಿ ಹೇಳುತ್ತಾರೆ. ರೈತರು ಮಾನಸಿಕವಾಗಿ, ಕೃತಿಯಲ್ಲಿ ಮತ್ತು ಸಂವಾದಗಳಲ್ಲಿ ನವ್ಯತೆಗೆ ಸೇರುತ್ತಾರೆ. ಇದರೊಂದಿಗೆ ಅವರು ತಮ್ಮ ಸ್ವಂತದ ಬಗ್ಗೆ ಹೊಸ ಪರಿಕಲ್ಪನೆಗಳನ್ನು ಕಟ್ಟಿಕೊಳ್ಳುತ್ತಾರೆ. ಉದಾ :- ರೈತ ದೇಶದ ನೈಜವಾದ ಬೆಳೆಗಾರ, ಹೊಸ ಹೋರಾಟದ ಹರಿಕಾರ ಹೊಸ ಪ್ರತಿಭಟನೆಯ ಧ್ವನಿ ಇತ್ಯಾದಿ. ವಾಸ್ತವವಾಗಿ ರೈತರ ಪ್ರಜ್ಞೆಯು ವಿವಿಧ ಧ್ವನಿಗಳಲ್ಲಿ ಮತ್ತು ವಿವಿಧ ಮಟ್ಟದ ವೈಚಾರಿಕತೆ ಮತ್ತು ಭಾವನಾತ್ಮಕತೆಗಳಲ್ಲಿ ವ್ಯಕ್ತವಾಗುತ್ತವೆ. ಉದಾ :- ಶ್ರಮ ನಮ್ಮದು; ಮಜಾ ಯಾರದೊ?, ಹಾಲು ಕರೆಯುವವರು ನಾವು; ಕುಡಿಯುವವರು ಯಾರೊ?, ಎಮ್ಮೆ ಸಾಲ ನಮಗೆ ; ಹಾಲು ಬೆಣ್ಣೆ ಯಾರಿಗೊ?, ಕೋಳಿ ಸಾಲ ನಮಗೆ; ಮೊಟ್ಟೆ -ಊಟ ಯಾರಿಗೊ?, ಬೆಳೆಯುವವರು ನಾವು ; ತಿನ್ನುವವರು ಯಾರೋ?, ಅನ್ನ ದುಡಿಮೆ ನಮ್ಮದು; ಮಜಾ ಯಾರದೊ? ಇತ್ಯಾದಿ.

ಆದರೆ, ಸಂಸ್ಕೃತಿ-ಸಾಮಾಜಿಕ ಸಂಬಂಧಗಳನ್ನು ವಿರೋಧಿಸುವಾಗ ರೈತರು ಮತ್ತು ರೈತ ಹೋರಾಟಗಳು ತಮಗರಿಯದಂತೆಯೇ ವಿರೋಧಾಭಾಸಗಳಿಗೆ ಈಡಾಗುತ್ತವೆ. ಒಂದೆಡೆ ಅವು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಶೋಷಿಸುವ ಅಥವಾ ದಮನಿಸುವ ಸಾಮಾಜಿಕ ಸಂಬಂಧ ಹಾಗೂ ನಂಬಿಕೆಗಳನ್ನು ಪ್ರತಿಭಟಿಸಲು ಯತ್ನಿಸುತ್ತವೆ ಅದೇ ವೇಳೆಗೆ ಭೂ ಸುಧಾರಣೆಯಂತಹ ಕ್ರಾಂತಿಕಾರಿ ವಿಷಯಗಳನ್ನು ತಮ್ಮ ಕಾರ್ಯಕ್ರಮದಿಂದ ಹೊರಗಿಡುತ್ತವೆ. ಯಾಕೆಂದರೆ ಭೂ ಸುಧಾರಣೆ ಲಾಗಾಯ್ತಿನ ನಂಬಿಕೆಗಳನ್ನೂ, ಸಾಂಸ್ಕೃತಿಕ ಸಂಬಂಧಗಳನ್ನೂ ಬದಲಾಯಿಸಿ ಬಲಾಢ್ಯ ವರ್ಗಗಳನ್ನು ಪೂರ್ಣ ನಾಶ ಮಾಡುವ ಸಾಧ್ಯತೆಯಿದೆ. ಕ್ರಾಂತಿಕಾರಿ ಬದಲಾವಣೆಯ ಕುರಿತು ರೈತ ಹೋರಾಟಗಳು ನಿರ್ಲಿಪ್ತತೆಯನ್ನು ತಾಳಿವೆ.

ಈ ಬಗೆಯ ವಿರೋಧಾಭಾಸದ ಧೋರಣೆಗಳ ಜೊತೆ ಜೊತೆಗೆ ರೈತ ಹೋರಾಟಗಳು ನವ್ಯೋತ್ತರ ಬದಲಾವಣೆ (Post modernism) ಪರವಾಗಿ ತಮ್ಮ ಚಿಂತನೆಗಳನ್ನು ಅಲ್ಲಲ್ಲಿ ವ್ಯಕ್ತಪಡಿಸುತ್ತವೆ. ವಾಸ್ತವವಾಗಿ ನವ್ಯೋತ್ತರ ಪರಿಕಲ್ಪನೆಗಳು ಇತ್ತೀಚಿನ ದಿನಗಳಲ್ಲಿ **ನವ ಹಿಂದುತ್ವವನ್ನು** ಎತ್ತಿ ಹಿಡಿಯುವುದು ಸ್ಪಷ್ಟವಾಗಿದೆ. ಈ **ನವ ಹಿಂದುತ್ವ** ಸಂಸ್ಕೃತಿ, ಹಾಗೂ ಪರಂಪರೆ ಹಾಗೂ ತಾತ್ವಿಕತೆಗಳನ್ನು ತನ್ನ ಸಾಧನವನ್ನಾಗಿ ಉಪಯೋಗಿಸುತ್ತದೆ. ಇದು ಇತಿಹಾಸದ ಪುಟಗಳಿಂದ ತನ್ನ ವಾದವನ್ನು ಆರಂಭಿಸುತ್ತದೆ. ಕೆಲವು ಸಾಂಸ್ಕೃತಿಕ ಸಂಕೇತಗಳನ್ನು ತನ್ನ ಬೆಳವಣಿಗೆಗಾಗಿ ಉಪಯೋಗಿಸುತ್ತದೆ. ಈ ಬಗೆಯ ಬೆಳವಣಿಗೆಯ ಹಿಂದೆ ಫ್ಯಾಸಿಸ್ಟ್ ರಾಜ್ಯವನ್ನು ನಿರ್ಮಾಣ ಮಾಡುವ ಹುನ್ನಾರವಿದೆ. ಇದಕ್ಕೆ ತದ್ವಿರುದ್ಧವಾಗಿ ರೈತರು ತಮ್ಮ ವಾದವನ್ನು ಮುಂದಿಡುತ್ತಾರೆ, ಹಾಗೂ ವಿರೋಧವನ್ನು ತಾತ್ವಿಕ ಸಂವಾದದ ನೆಲೆಯಲ್ಲಿ ವ್ಯಕ್ತಪಡಿಸುತ್ತಾರೆ. ಇವರ ಪ್ರಕಾರ ಫ್ಯಾಸಿಸ್ಟ್ ಶಕ್ತಿಗಳ ಪರಿಕಲ್ಪನೆಯಾದ ಸಾಂಸ್ಕೃತಿಕ ಸಮಾನತೆಯು ಅಂತಿಮವಾಗಿ ರೈತಾಪಿ ಸಂಸ್ಕೃತಿಯನ್ನು ನಾಶ ಮಾಡುತ್ತದೆ, ಅದರೊಂದಿಗೆ ರೈತರಿಗಿರುವ ಸ್ವಾಯುತ್ತತೆಯನ್ನೂ ನಿರ್ಮೂಲನ ಮಾಡುತ್ತದೆ. ಇದಕ್ಕಾಗಿಯೇ ಭಾರತದ ಪ್ರಭುತ್ವ ಮತ್ತು ಪೌರ ಸಮಾಜವನ್ನು ಫ್ಯಾಸಿಸ್ಟ್ ಶಕ್ತಿಗಳಿಂದ ಮುಕ್ತಗೊಳಿಸಲು ರೈತರು ತಮ್ಮದೇ ರೀತಿಯಲ್ಲಿ ಹೆಣಗಾಡುತ್ತಾರೆ.

ಇದಕ್ಕಾಗಿಯೇ ರೈತ ಹೋರಾಟಗಳು ಚಾರಿತ್ರಿಕ ವ್ಯಕ್ತಿಗಳನ್ನು ಮತ್ತು ಉದಾರ ನೀತಿಯನ್ನು ಪ್ರತಿಫಲಿಸುವ ಚಾರಿತ್ರಿಕ ಸಂವಾದಗಳನ್ನು ಬಳಸುತ್ತವೆ. ಗಾಂಧಿ, ಅಂಬೇಡ್ಕರ್ ರೈತ ಹೋರಾಟಗಳಿಗೆ ಚಾರಿತ್ರಿಕ ವ್ಯಕ್ತಿಗಳಾಗುತ್ತಾರೆ. ಈ ಹೋರಾಟಗಳು ಉಪಯೋಗಿಸಿದ ನುಡಿಗಟ್ಟುಗಳು **ಸ್ವರಾಜ್ಯ, ಮಾಡು ಇಲ್ಲವೇ ಮಡಿ, ಎರಡನೇ ಸ್ವರಾಜ್ಯ ,ಬೀಜ ಸತ್ಯಾಗ್ರಹ** ಅಥವಾ **ಅಲ್ಲಾ ಹೊ ಅಕ್ಬರ್, ಹರಹರ ಮಹಾದೇವ**ದಂತಹ ಘೋಷಣೆಗಳು ಚಾರಿತ್ರಿಕ ಸಂವಾದಗಳನ್ನು ಒಳಗೊಂಡಿರುವುದು ಮಾತ್ರವಲ್ಲ; ಅವು ವರ್ತಮಾನದ ಹೋರಾಟ ತಂತ್ರಗಳೂ ಆಗುತ್ತವೆ. ಇದರಿಂದಾಗಿಯೇ, ರೈತ ಹೋರಾಟಗಳು ಹಿಂದುತ್ವ ಶಕ್ತಿಗಳನ್ನು ವಿರೋಧಿಸಲು ಸಾಧ್ಯವಾಯಿತಲ್ಲದೇ, ಒಂದು ಸಂವೇದನಾಶೀಲ ರೈತ ಸಮೂಹವನ್ನು ಬೆಳೆಸಲು ಸಹಕಾರಿಯಾಯಿತು.

ಎರಡನೇ ಹಂತ : ೧೯೯೦ ರಿಂದ ೧೯೯೪

ಭಾರತದ ಪ್ರಭುತ್ವವು ಹೊಸ ಉದಾರ ನೀತಿ (New liberalism) ಹಾಗೂ ಡಂಕೆಲ್ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿದಾಗ ರೈತರು ಭಾರತದ ಬಗೆಗಿನ ತಮ್ಮ ಪರಿಕಲ್ಪನೆಯನ್ನು ಬಾಹ್ಯೀಕರಿಸಿಕೊಂಡರು. ಇದರೊಂದಿಗೆ ರೈತರು ದೇಶೀಯ ಬಂಡವಾಳದ ಬದಲಿಗೆ ಅಂತರರಾಷ್ಟ್ರೀಯ ಬಂಡವಾಳದ ಮೇಲೆ ಹೆಚ್ಚಿನ ಒತ್ತು ನೀಡಿದರು-ಆ ಮೂಲಕ ಭಾರತದ ಪ್ರಭುತ್ವವನ್ನು ನಿರ್ವಚಿಸಿದರು.

ಈ ಸಂದರ್ಭದಲ್ಲಿ ಭಾರತದ ಪ್ರಭುತ್ವವನ್ನು **ಮೃದು ರಾಷ್ಟ್ರ** (Soft State) ಎಂದೂ ಅವರು ವ್ಯಾಖ್ಯಾನಿಸಿದರು. ತಮ್ಮ ಈ ವ್ಯಾಖ್ಯಾನಕ್ಕಾಗಿ ಅವರು ಈ ಕೆಳಗಿನ ಅಂಶಗಳನ್ನು ಮುಂದು ಮಾಡಿದರು. ಪಾಶ್ಚಾತ್ಯ ರಾಷ್ಟ್ರಗಳ ಬಗ್ಗೆ ಭಾರತದ ಪ್ರಭುತ್ವ ತೋರಿಸುತ್ತಿರುವ ಮೃದುತ್ವ, ನವ ವಸಾಹತುಶಾಹಿಗೆ ವ್ಯಕ್ತಪಡಿಸುತ್ತಿರುವ ಬೆಂಬಲ, ಡಂಕೆಲ್ ಪ್ರಸ್ತಾಪಗಳಿಂದಾಗಿ ರೈತರಿಗೆ ಬಂದಿರುವ ಆಪತ್ತಿಗೆ ತನ್ನ ವಿರೋಧವನ್ನು ವ್ಯಕ್ತಪಡಿಸದೇ ಇರುವುದು, ಮತ್ತು ಅಂತಿಮವಾಗಿ ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣವನ್ನು ತಡೆಗಟ್ಟಲು ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೇ ಇರುವುದು. ಆದ್ದರಿಂದ ಈ ದಶಕದಲ್ಲಿ ಪ್ರಭುತ್ವದ ಪರಿಕಲ್ಪನೆಯು ಪಾಶ್ಚಾತ್ಯ ಬಂಡವಾಳಶಾಹಿಯ ಪರಿಕಲ್ಪನೆಯಿಂದ ಪ್ರಭಾವಿತವಾಯಿತು.

ರೈತ ಹೋರಾಟದ ಪ್ರಕಾರ, ಪಾಶ್ಚಾತ್ಯ ಬಂಡವಾಳಶಾಹೀ ದೇಶಗಳು (ಅದರೊಂದಿಗೆ ವಿಶ್ವ ಬ್ಯಾಂಕ್)ಬೆಂಬಲ ಬೆಲೆಯನ್ನು ಹಿಂತೆಗೆದುಕೊಳ್ಳಲು ಒತ್ತಡ ಹೇರುತ್ತವೆ. ರೈತರ ಪ್ರಕಾರ, ಬೆಂಬಲ ಬೆಲೆಗಳನ್ನ ಹಿಂತೆಗೆದುಕೊಳ್ಳುವ ನೀತಿಗೆ ಭಾರತದ ಪ್ರಭುತ್ವ ಕಾರಣವಲ್ಲ, ಪಾಶ್ಚಾತ್ಯ ಬಂಡವಾಳಶಾಹಿಯ ಪ್ರಭಾವ ಮತ್ತು ಭಾರತದ ಪ್ರಭುತ್ವದ ಮೇಲೆ ಅವರ ಹಿಡಿತವೇ ಇದಕ್ಕೆ ಕಾರಣ. ಇದು ಪಾಶ್ಚಾತ್ಯ ಬಂಡವಾಳಗಳಿಗೆ ಪ್ರಯೋಜನವಾಗುತ್ತದೆ. ಒಂದೆಡೆ ಬೆಂಬಲ ಬೆಲೆಗಳ ರದ್ದು ಮಾಡುವಿಕೆ ರೈತರನ್ನು ಇನ್ನಷ್ಟು ಬಡವರನ್ನಾಗಿ ಮಾಡುತ್ತದೆ. ಇನ್ನೊಂದೆಡೆ ಈ ರೀತಿಯ ವರ್ಗದ ಹುಟ್ಟುವಿಕೆಯಿಂದಾಗಿ ಪಾಶ್ಚಾತ್ಯ ಬಂಡವಾಳಕ್ಕೆ ಕಡಿಮೆ ಕೂಲಿಗೆ ಕಾರ್ಮಿಕರು ಸಿಗುತ್ತಾರೆ. ಇಲ್ಲಿ ಪಾಶ್ಚಾತ್ಯ ಬಂಡವಾಳಶಾಹಿಯ ಆಂತರಿಕ ದ್ವಂದ್ವವೂ ಸೇರಿಕೊಂಡಿದೆ. ಅದು ಒಂದೆಡೆ ತಮ್ಮ ದೇಶಗಳ ಕೃಷಿ ಹಾಗೂ ರೈತರಿಗೆ ಅತೀ ಹೆಚ್ಚಿನ ಬೆಂಬಲ ಬೆಲೆ ಮತ್ತು ಸಹಾಯ ಧನ ನೀಡುತ್ತಿದೆ. ಇದಕ್ಕೆ ತೀರಾ ವಿಭಿನ್ನವಾದ ನೀತಿಯನ್ನು ತೃತೀಯ ಜಗತ್ತಿನಲ್ಲಿ ಅದೇ ರಾಷ್ಟ್ರಗಳು ಪಾಲಿಸುತ್ತದೆ-ಮುಖ್ಯವಾಗಿ ಅವು ಬೆಂಬಲ ಬೆಲೆಗಳನ್ನು ಹಿಂತೆಗೆದುಕೊಳ್ಳುವಂತೆ ಇಲ್ಲಿನ ಪ್ರಭುತ್ವಗಳನ್ನು ಪ್ರಚೋದಿಸುತ್ತದೆ. ರೈತರ ಪ್ರಕಾರ, ಆರಂಭದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ತೃತೀಯ ಜಗತ್ತಿನ ಮಾರುಕಟ್ಟೆಗಳಲ್ಲಿ ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಅವಕಾಶ ಕೇಳುತ್ತವೆ, ನಂತರ **ಕೃಷಿ ವಸಾಹತು** (Agriculture Colony) ಸ್ಥಾಪಿಸಲು ಪ್ರಯತ್ನಿಸುತ್ತವೆ. ಅಂತಿಮವಾಗಿ ತೃತೀಯ ಜಗತ್ತನ್ನು, ಪಾಶ್ಚಾತ್ಯ ಬಂಡವಾಳಶಾಹಿಗಳಿಗೆ ಪೂರಕವಾದ ಆಹಾರ ಮಾರುಕಟ್ಟೆ ಗಳನ್ನಾಗಿ ಪರಿವರ್ತಿಸುತ್ತವೆ.

ಈ ಸಂವಾದದ ಜತೆಜತೆಗೆ ರೈತರು ಸಂಸ್ಕೃತಿಗೆ ಸಂಬಂಧಿಸಿದ ಪ್ರಶ್ನೆಯನ್ನು ಕೂಡ ಎತ್ತಲು ಪ್ರಯತ್ನಿಸುತ್ತಾರೆ. ಈ ಶಕ್ತಿಯುತವಾದ ಬಂಡವಾಳಶಾಹಿಯು ಭಾರತದ ಮೇಲೆ ಪಾಶ್ಚಾತ್ಯ ಬಂಡವಾಳ ಸಂಸ್ಕೃತಿಯನ್ನು ಹೇರಿ ಪ್ರಜಾ-ರೈತ ಸಂಸ್ಕೃತಿಯನ್ನು ನಾಶಪಡಿಸುತ್ತದೆ. ಅದರೊಂದಿಗೆ ಪ್ರಜೆಗಳು ಸಾಂಸ್ಕೃತಿಕ ಪರಕೀಯತೆಯತ್ತ ಸಾಗುತ್ತಾರೆ. ಇದು ಸಾಂಸ್ಕೃತಿಕ ಬಿಕ್ಕಟ್ಟು ಹಾಗೂ ದಮನಕ್ಕೆ ಕಾರಣವಾಗುತ್ತದೆ. ಇಡೀ ಸಂಸ್ಕೃತಿ ಹಾಗೂ ಜನಸಮೂಹ ಬಿಕನಾಸಿಯಾಗುತ್ತದೆ.

Major decisions are taken in Washington Geneva or at IMF/GATT Secretariat, with no popular participation. We seem to be entering into a new era of colonization with our productions and consuption and our national resource being increasingly controlled.

"This directly result on the one hand in the further accelaration of the pauperisation of rural India and on the other hand increase the dangerous trend of cosmetic consumersion at the expense of common man"

ವಾಸ್ತವವಾಗಿ ಈ ಎಲ್ಲಾ ವಾದಗಳೂ ಡಂಕೆಲ್ ಪ್ರಸ್ತಾಪನೆಗಳ ಸಂದರ್ಭದಲ್ಲಿ ಮೂಡಿಬಂದವು.

ಆರ್ಥಿಕ ಉದಾರನೀತಿಯನ್ನೊಳಗೊಂಡಿರುವ ಡಂಕೆಲ್ ಪ್ರಸ್ತಾವನೆಯು ಅಂತರರಾಷ್ಟ್ರೀಯ ನ್ಯಾಯ ಸಂಹಿತೆಯನ್ನು ಭಾರತದ ರಾಜಕೀಯದ ಮೇಲೆ ಹೇರುವ ಸಾಧ್ಯತೆಯನ್ನು ರೈತರು ಅಲ್ಲಗಳೆಯುವುದಿಲ್ಲ. ಇಲ್ಲಿ ಪಾಶ್ಚಾತ್ಯ ರಾಜ್ಯಗಳು ತಮ್ಮ ದ್ವಂದ್ವ ನೀತಿಯನ್ನು ಪ್ರದರ್ಶಿಸುತ್ತವೆ. ಪಾಶ್ಚಾತ್ಯ ಬಂಡವಾಳಶಾಹೀ ಪ್ರಭುತ್ವ ಒಂದೆಡೆ ವಂಶವಾಹಿ ಬೀಜಗಳನ್ನು ಲಪಟಾಯಿಸುತ್ತದೆ. ಅದರೊಂದಿಗೆ ನೈಸರ್ಗಿಕ ಬೀಜ ಸಂಪನ್ಮೂಲಗಳನ್ನು ಖಾಸಗಿ ಆಸ್ತಿಯಲ್ಲವೆಂದು ವಾದಿಸಿ ಅವುಗಳ ಮೇಲೆ ಹತೋಟಿಯನ್ನು ಸಾಧಿಸುತ್ತದೆ. ಅದೇ ವೇಳೆಗೆ ಅದು ತಂತ್ರಜ್ಞಾನ ಹಾಗೂ ಜ್ಞಾನದ ಮೇಲೂ ತನ್ನ ಅಧಿಕಾರವನ್ನು ಪ್ರತಿಪಾದಿಸುತ್ತದೆ. ಹೀಗೆ ದೇಶಿಯ ರೈತರು ವಂಶವಾಹಿಗಳ ಮೇಲಿರುವ ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಇದು ಉತ್ಪಾದನಾ ಸ್ವಾತಂತ್ರ್ಯ, ಮಾನಸಿಕ ಸ್ವಾತಂತ್ರ್ಯ ಹಾಗೂ ಸಾಗಾಣಿಕೆಯ ಸ್ವಾತಂತ್ರ್ಯದ ಮೇಲೂ ಪ್ರತಿಕೂಲ ಪರಿಣಾಮ ಮಾಡುತ್ತದೆ.

ಈ ಎಲ್ಲ ಕಾರಣಗಳಿಂದ ವಿಶಿಷ್ಟ ಸಾಮಾಜಿಕ ಸಮೂಹವಾಗಿರುವ ರೈತರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ. ಅವರು ತಮ್ಮ ಪರಿಸರ, ನೈಸರ್ಗಿಕ ಹಾಗೂ ಸಾಮಾಜಿಕ ವ್ಯವಸ್ಥೆಯಿಂದಲೂ ಪರಕೀಯರಾಗುತ್ತಾರೆ. ಪ್ರಭುತ್ವದ ಆರ್ಥಿಕ ಉದಾರ ನೀತಿ ಒಂದು ಸ್ವತಂತ್ರ ಉತ್ಪಾದಕರ ವರ್ಗವಾಗಿರುವ ರೈತರನ್ನು ಕೂಲಿಕಾರ್ಮಿಕ ವರ್ಗವಾಗಿ ಪರಿವರ್ತಿಸುವ ಸಾಧ್ಯತೆಯನ್ನು ರೈತ

ಹೋರಾಟಗಳು ಅಲ್ಲಗಳೆಯುವುದಿಲ್ಲ. ಈ ಬಗೆಯ ಪರಿವರ್ತನೆಯಿಂದ ರಾಜಕೀಯದ ಮೇಲೆ ಆಗುವ ಪ್ರಭಾವ ಸಾಮಾನ್ಯದ್ದಲ್ಲ.

ಡಂಕೆಲ್ ಪ್ರಸ್ತಾವನೆಯು ನಮ್ಮ ರಾಷ್ಟ್ರೀಯ ಕಾನೂನುಗಳಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತದೆ. ಇದರಿಂದಾಗಿ ರಾಜ್ಯ ಪಟ್ಟಿಯಲ್ಲಿರುವ ಮೂವತ್ತು ವಿಷಯಗಳನ್ನು ಬದಲಾಯಿಸಬೇಕಾಗುತ್ತದೆ. ಅಲ್ಲದೆ, ಇದರಿಂದಾಗಿ ಲೋಕಸಭೆ ಹಾಗೂ ವಿಧಾನಸಭೆಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತವೆ. ಇದು ನಮ್ಮ ರಾಜಕೀಯ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತದೆ.

ಈ ಸಂವಾದವು **ಸಾಕ್ಷ್ಯಾಧಾರಗಳನ್ನು ಮುಂದಿಡುವ ಜವಾಬ್ದಾರಿ** ಯ (Burden of proof) ಮೇಲೂ ಕೇಂದ್ರೀಕೃತವಾಗಿದೆ. ಡಂಕೆಲ್ ಪ್ರಸ್ತಾವನೆ ಈ ಜವಾಬ್ದಾರಿಯನ್ನು ರೈತರ ಮೇಲೆ ಹೊರಿಸಿದೆ. ಇದು ರೈತರನ್ನು ಕ್ರಿಮಿನಲ್ ಕಾನೂನಿನ ಚೌಕಟ್ಟಿನೊಳಗೆ ತರುವ ಯತ್ನವೂ ಹೌದು.

ಈ ಉದಾರ ನೀತಿಯನ್ನು ವಿರೋಧಿಸುವಾಗ ರೈತರು ಒಂದು ಬಲಾಢ್ಯ ಪ್ರಭುತ್ವದ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಇದಕ್ಕಾಗಿ ಕೆಲವು ಅಂಶಗಳ ಅವಶ್ಯಕತೆಯನ್ನು ಅವರು ಒತ್ತಿ ಹೇಳುತ್ತಾರೆ.

- ನವ ವಸಾಹತುಶಾಹಿಯ ಪರಿಕಲ್ಪನೆಯನ್ನು ವಿರೋಧಿಸುವ ಶಕ್ತಿ,
- ಪಾಶ್ಚಾತ್ಯ ಧನ ಸಹಾಯವಿಲ್ಲದೆ ಬೆಳವಣಿಗೆಯನ್ನು ಮಾಡುವ ನಿರ್ಧಾರದ ಶಕ್ತಿ,
- ಯಾವುದೇ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಪಾಶ್ಚಾತ್ಯ ಬಂಡವಾಳಶಾಹಿಯ ಹತೋಟಿಯಿಲ್ಲದಂತೆ ಮಾಡುವುದು,
- ರೈತರ ಮೂಲಭೂತ ಹಕ್ಕುಗಳಾದ ಉತ್ಪಾದನೆ, ಮಾರಾಟ ಹಾಗೂ ಮಾರುಕಟ್ಟೆ ಹಕ್ಕುಗಳನ್ನು ಎತ್ತಿ ಹಿಡಿಯುವುದು,
- ಅಂತರರಾಷ್ಟ್ರೀಯ ಬಂಡವಾಳವನ್ನು ತಡೆಹಿಡಿಯುವುದು, ಅಂತಿಮವಾಗಿ,
- ಆಮದು ವಸ್ತುಗಳ ಮೇಲೆ ಹಿಡಿತವನ್ನು ಸಾಧಿಸುವುದು - ಈ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಮತ್ತು ಪ್ರಭುತ್ವವನ್ನು ಬಲಾಢ್ಯಗೊಳಿಸಲು ಹಾಗೂ ಅಂತರರಾಷ್ಟ್ರೀಯ ಬಂಡವಾಳವನ್ನು ವಿರೋಧಿಸಲು-ರೈತರು ಒಂದು ನವೀನ ಮಾರ್ಗೋಪಾಯವನ್ನು ಕಂಡುಹಿಡಿದರು. ಅದನ್ನು **ಗಾಂಧಿ ಹಿಂಸತ್ವ** (Gandhian Violence) ಎಂದು ಕರೆದರು. ಇದು ಅಂತರರಾಷ್ಟ್ರೀಯ ಒಡೆತನಗಳ ಮೇಲೆ ಆಕ್ರಮಣವನ್ನು ಬಯಸುತ್ತದೆ. ಈ ತತ್ವವನ್ನು ಇತಿಹಾಸದಿಂದ ಪಡೆಯಲಾಗಿದೆ. ಇತಿಹಾಸದಲ್ಲಿ ಸಜೀವ ವಸ್ತುಗಳ ಮೇಲಿನ ಆಕ್ರಮಣವನ್ನು ಗಾಂಧೀಜಿ ಕೆಲವು ಸಲ ಸಮರ್ಥಿಸಿದ್ದರು.

ಅಂತರರಾಷ್ಟ್ರೀಯ ಬಂಡವಾಳದ ಮೇಲೆ ನಡೆದ ಅಥವಾ ನಡೆಸುವ ಆಕ್ರಮಣವು ಅಹಿಂಸಾತತ್ವದ ಒಂದು ರೂಪ.

ಇದಕ್ಕೆ ತೀರಾ ಹತ್ತಿರ ಇರುವ ಇನ್ನೊಂದು ಮಾರ್ಗ **ಬೀಜ ಸತ್ಯಾಗ್ರಹ**. ಇದಕ್ಕೆ ವಿಶಾಲವಾದ ತಳಹದಿ ಇದೆ. ಇದು ರೈತರ ಪರಿಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ. ರಾಷ್ಟ್ರೀಯತೆಯ ಪರಿಕಲ್ಪನೆಗೆ ಇಂಬು ಕೊಡುತ್ತದೆ. ಅಂತರರಾಷ್ಟ್ರೀಯ ಪ್ರಭಾವವನ್ನು ಕಡಿಮೆ ಮಾಡುತ್ತದೆ. ಅಂತಿಮವಾಗಿ ಇದು ಎರಡನೇ ಗಣರಾಜ್ಯದ ಪರಿಕಲ್ಪನೆಯನ್ನು ಮುಂದಿಡುತ್ತದೆ.

ರೈತರ ಪ್ರಭುತ್ವದ ಬಗೆಗಿನ ಪರಿಕಲ್ಪನೆ ಹಾಗೂ ಕಾರ್ಯಸೂಚಿಯಲ್ಲಿ ನಾವು ವೈವಿಧ್ಯವನ್ನು ಕಾಣಬಹುದು- ವೈರುಧ್ಯವನ್ನು ಅಂತರೀಕರಣಗೊಳಿಸಲಾಯಿತು, ಇಲ್ಲವೇ, ಬಾಹ್ಯೀಕರಿಸಲಾಯಿತು. ಇಂತಹ ನಡವಳಿಕೆಗಳು ರೈತ ಹೋರಾಟದಲ್ಲಿ ವಿರೋಧಾಭಾಸಗಳಿಗೆ ಅವಕಾಶವನ್ನು ಮಾಡಿಕೊಟ್ಟಿತು. ಆದ ಕಾರಣವೇ ರೈತ ಹೋರಾಟ ೧೯೯೦ ರ ದಶಕದಲ್ಲಿ ಒಂದು ಪ್ರಭಾವಶಾಲಿ ಹೋರಾಟವಾಗಿ ಕಂಡುಬರುವುದಿಲ್ಲ. ಈ ರೀತಿಯಿಂದಾಗಿ ಭಾರತದ ಪ್ರಭುತ್ವವು ತನ್ನ ಸಮತೋಲನವನ್ನು ಕಾಯ್ದುಕೊಂಡಿತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಹಾರ್ದಿಕ ಶುಭಾಶಯಗಳು

ಬಿ. ಎಸ್. ವಿಶ್ವನಾಥನ್	ಪಿ. ಪಿ. ಭರಮ ಗೌಡರ್	ಜಯಕರ್ ಜರೋಮೆ ಐ. ಎ. ಎಸ್.,
ಅಧ್ಯಕ್ಷರು	ಕಾರ್ಯದರ್ಶಿ	ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ

ಅಭಿವೃದ್ಧಿ ಬ್ಯಾಂಕು ನಿಯಮಿತ ಬೆಂಗಳೂರು - ೫೬೦ ೦೧೮

ಶ್ರೀ ಶ್ರೀ ಶ್ರೀರಂಗಂ ಶ್ರೀನಿವಾಸರಾವ್ ತೆಲುಗು ಕಾವ್ಯವನ್ನು ವಿಶ್ವ ವ್ಯಾಪಿಗೊಳಿಸಿದ ಕವಿ. **ಭಾವ ಕವಿತ್ವ** ಪ್ರಕಾರದಿಂದ ಅಭ್ಯುದಯ **ಕವಿತ್ವ** ಪ್ರಕಾರಕ್ಕೆ ಕಾವ್ಯವನ್ನು ಕೊಂಡೊಯ್ದ ಶ್ರೇಯಸ್ಸು ಶ್ರೀ ಶ್ರೀಯವರಿಗೆ ಸಲ್ಲುತ್ತದೆ.

ಪ್ರಭವ, **ಮಹಾಪ್ರಸ್ಥಾನ**ಗಳು ಇವರ ಕವನ ಸಂಕಲನಗಳು. ೧೯೫೦ರಲ್ಲಿ ಪ್ರಥಮ ಮುದ್ರಣಗೊಂಡ **ಮಹಾ ಪ್ರಸ್ಥಾನ** ೧೯೮೮ ರ ವೇಳೆಗೆ ಹತ್ತೊಂಬತ್ತು ಮುದ್ರಣಗಳನ್ನು ಕಂಡಿದೆ. ತೆಲುಗು ಕಾವ್ಯ ಕ್ಷೇತ್ರದಲ್ಲಿ ಇತಿಹಾಸವನ್ನೇ ಸೃಷ್ಟಿಸಿದವರು ಶ್ರೀ ಶ್ರೀ. ೧೯೩೪--೧೯೪೭ರ ಅವಧಿಯಲ್ಲಿ

ಬರೆದ ೪೨ ಕವನಗಳು **ಮಹಾ ಪ್ರಸ್ಥಾನ** ಸಂಕಲನದಲ್ಲಿದೆ. **ಮಹಾಪ್ರಸ್ಥಾನ**ದ ಗೀತೆಗಳಲ್ಲಿ ವಸ್ತುವಿನ ನವ್ಯತೆ, ಭಾವ ನವ್ಯತೆ, ಶಬ್ದನವ್ಯತೆ ಹಾಗೂ ಛಂದೋನವ್ಯತೆಯ ಸಮರ್ಪಕವಾದ ಬಳಕೆ ಇದೆ ಎಂದು ಏಟ್ಕೂರಿ ಪ್ರಸಾದ್ ಗುರುತಿಸಿದ್ದಾರೆ.

ಕಡಲ ಶೃತಿಯ ನಿರಂತರತೆಯಲ್ಲಿಯೇ (ಮದ್ರಾಸಿನಲ್ಲಿ ಅವರು ಮನೆ ಮಾಡಿದ್ದು ಸಹ ಅದಕ್ಕಾಗಿಯೇ) ತನ್ನ ಮನಸ್ಸಿನ ಕಡಲನ್ನ ಮಥಿಸಿ ಕವಿತೆ ರಚಿಸುತ್ತಾರೆ ಶ್ರೀ ಶ್ರೀ. ಜನರ ಹೋರಾಟಗಳು ಯಾವುದೇ ಇರಲಿ ಅದರೊಂದಿಗೆ ಒಂದಾಗಿರಲು ಪ್ರಯತ್ನಿಸಿದ್ದಾರೆ ಶ್ರೀ ಶ್ರೀ. ದುಡಿಯುವ ಜನರ ಸಂಪರ್ಕದಲ್ಲಿರುವಾಗಲೇ ಕವಿತ್ವಕ್ಕೆ ಸಾರ್ಥಕತೆ ಬರುತ್ತದೆ ಎಂದು ನಂಬಿದ್ದಾರೆ ಅವರು.

ಶ್ರೀ ಶ್ರೀ ಯವರ ಕವನಗಳನ್ನು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿದ **ಗೋನವಾರ ಕಿಶನ್‌ರಾವ್ ಎಚ್. ಎಸ್. ಶಿವಪ್ರಕಾಶ್, ರಾಘವೇಂದ್ರ ರಾವ್**, ಬಂಜಗೆರೆ ಜಯಪ್ರಕಾಶ್‌ಇವರಿಗೆ ರುಜುವಾತು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ನಾನು

ಭೂತವನು,
ಯಜ್ಞೋಪವೀತವನು,
ಬಂಡಾಯ ಗೀತವನು ನಾನು !
ಸ್ಮರಿಸಿದರೆ ಪದ್ಯ,
ಅರಚಿದರೆ ವಾದ್ಯ,
ಅಗ್ನಿವೇದಿಕೆ ಎದುರು ರಕ್ತನೈವೇದ್ಯ!

ಲೋಕಗಳು,
ಭವಭೂತಿ ಶ್ಲೋಕಗಳು,
ಪರಮೇಶ್ವರನ ಲೋಲಾಕುಗಳು,
ನನ್ನ ಮಹೋದ್ರೇಕಗಳು !
ನನ್ನ ಕಲ್ಪನೆಗಳು ಚಂಪಕಮಾಲೆ !
ರಸರಾಜ್ಯ ಜೋಕಾಲೆ !
ನನ್ನ ಚೀತ್ಕಾರಗಳೇ,
ಕೇದಾರ ಗೌಳ!

ಗಿರಿಗಳು,
ಸಾಗರಗಳು, ಸೈತಾನಗಳು,

ಝುರಿಗಳು ನನ್ನ ಸಹೋದರರು!
ನಾನೇ ಒಂದು ದುರ್ಗ!
ನಂದೇ ಒಂದು ಸ್ವರ್ಗ!
ಅನರ್ಗಳ, ಅನಿತರಸಾಧ್ಯ ನನ್ನ ಮಾರ್ಗ !

ನವ್ಯಕವಿತೆ

ಸಿಂಧೂರ, ರಕ್ತಚಂದನ,
ಬಂದೂಕು, ಸಂಧ್ಯಾರಾಗ,
ಹುಲಿಯು ಕೊಂದ ಜಿಂಕೆ ನೆತ್ತರು.
ಹಾರುವ ಕೆಂಪು ಧ್ವಜಾ,
ಪ್ರಳಯರುದ್ರನ ನೇತ್ರಾಗ್ನಿ,
ಕಲಕತ್ತಾ ಕಾಳಿಯ ನಾಲಿಗೆ
ಬೇಕು ನವ್ಯಕವಿತೆಗೆ -

ಘಾಟುಭರಿತ ಗಂಧಕದ ಹೊಗೆ,
ಉಕ್ಕೇರಿರುವ ಸಪ್ತಸಮುದ್ರಗಳು,
ಹೊತ್ತಿ ಉರಿಯುವ ಇದ್ದಿಲು ಗಣಿ,
ಭುಗಿಲೆನ್ನುವ ಬೆಂಕಿಯ ಜ್ವಾಲೆ,
ಪ್ರವಹಿಸುವ ವಿದ್ಯುತ್ ತೇಜ,
ರೊಚ್ಚಿಗೆದ್ದ ಜನ ಜಾತರೆ
ಬೇಕು ನವ್ಯಕವಿತೆಗೆ -

ಕೊಕ್ಕರೆಯ ರೆಕ್ಕೆಸಪ್ಪಳ,
ಹೊಗೆಯೇ ಇರದ ಜ್ವಾಲಾ ಮುಖಿ,
ದಟ್ಟಡವಿಯ ಗಬ್ಬೆನುವ ಗರ್ಜನೆ,
ಗಂಟಲು ಬಿರಿದ ಘಂಟಾ ಘೋಷ
ಖಡ್ಗಮೃಗದ ಉದ್ರೇಕಿತ ಊಳು,
ಝುಂಝಾವೃತ ಷಡ್ಜನಾದ
ಬೇಕು ನವ್ಯಕವಿತೆಗೆ -

ಅನಂತರದೆಡೆಗೆ

- ಇದೇನಿದು ನಿರಂತರ ಭಯ?
- ಕಗ್ಗತ್ತಲಿನ ಮಸಿ !
- ಇದೇನಿದು ಈ ಅಪಸ್ವರ?
- ತಂತಿ ಹರಿದಿದೆ !
- ಅವೇನವು ರಂಗಿನ ನೆರಳುಗಳು ?
- ಸಾವು, ಬದುಕು !
- ಎಲ್ಲಿಗೆ ಹೋಗುತಿದೆ ಈ ರಾತ್ರಿ?
-ಅನಂತರದೆಡೆಗೆ !

ಅನು : **ಗೋನವಾರ ಕಿಶನ್‌ರಾವ್**

ಮಹಾಪ್ರಸ್ಥಾನ

ಮತ್ತೊಂದು ಪ್ರಪಂಚ
ಮತ್ತೊಂದು ಪ್ರಪಂಚ
ಮತ್ತೊಂದು ಪ್ರಪಂಚ ಕರೆದಿದೆ !
ನಡೆಯಿರಿ ಮುಂದಕೆ
ನಡೆಯಿರಿ ನಗುತಾ ಮುಂದಕೆ
ಹೋಗೋಣ, ಹೋಗೋಣ, ಮೇಲ್ಮೇಲಕೆ !

ಹೆಜ್ಜೆ ತಿಳಿಯುತಾ
ಹಾಡು ಹಾಡುತಾ
ಹೃದಯಾಂತರಾಳ ಗರ್ಜಿಸುತಾ -
ನಡೆಯಿರಿ ಹೋಗೋಣ
ಕೇಳಿಸಲಿಲ್ಲವೇ
ಮತ್ತೊಂದು ಪ್ರಪಂಚದ ಜಲಪಾತ ?

ದಾರಿಯುದ್ದಕೂ ಗುಂಡಿಗೆ ನೆತ್ತರು
ತರ್ಪಣ ಕೊಡುತಾ ನಡೆಯಿರಿ ಮುಂದಕೆ !
ದಾರಿಗಳ ನಡೆದು
ಕೋಟೆಗಳ ತೊರೆದು
ಕೋಟೆಗಳನ್ನೆಲ್ಲಾ ದಾಟಿರಿ !

ನದಿನದಾದಿಗಳು
ಕಾಡು, ಮೇಡು, ಬೆಟ್ಟಗುಡ್ಡ
ಮರಳುಗಾಡೇ ನಮಗೆ ಪ್ರತಿರೋಧವೇ ?

ನಡೆಯಿರಿ ಮುಂದಕೆ !
ನಡೆಯಿರಿ ಮುನ್ನುಗುತಾ ಮುಂದಕೆ !
ಹೋಗೋಣ, ಹೋಗೋಣ ಮೇಲ್ಮೇಲಕೆ !

ಮೂಳೆ ಕೊಳೆತ
ವಯಸ್ಸು ನರೆತ
ಸೋಮಾರಿಗಳೇ ! ಸಾಯಿರಿ !
ರಕ್ತ ಕುದಿವಾ
ಶಕ್ತಿ ತುಂಬಿರುವಾ
ಸೈನಿಕರೇ! ಬಾ ಬನ್ನಿರೀ !

ಹರೋ ! ಹರೋ ಹರಾ !
ಹರಾ ! ಹರಾ ! ಹರಾ !
ಹರೋ ಹರಾ! ಎಂದು ಚಲಿಸಿರಿ !
ಮತ್ತೊಂದು ಪ್ರಪಂಚ
ಮಹಾ ಪ್ರಪಂಚ
ಧರಿತ್ರಿ ತುಂಬಾ ತುಂಬಿದೆ !
ನಡೆಯಿರಿ ಮುಂದಕೆ !
ನಗುತ್ತಾ ಮುನ್ಮುಂದಕೆ !
ಪ್ರಭಂಜನದಂತೆ ಬೋರ್ಗರೆಯಿರಿ !
ಭಾವಾ ವೇಷದಿಂದ ಪ್ರಸರಿಸಿರಿ !
ವರ್ಷದಂಬರ ಪ್ರಳಯ ಘರ್ಜನೆಯಂತೆ
ಘಟ ಘಟ ಘಟ ಘಟ ಮುರಿದು ನಡೆಯಿರಿ !
ನಡೆಯಿರಿ !
ನಡೆಯಿರಿ !
ನಡೆಯಿರಿ ! ಮುಂದಕೆ !
ಕಾಣಿಸಲಿಲ್ಲವೇ ಮತ್ತೊಂದು ಪ್ರಪಂಚದ
ಕಣ ಕಣ ಉರಿಯುವ ತ್ರೇತಾಗ್ನಿ ?

ಹಾರಿ, ಹಾರಿ, ಬೀಳುತಿವೆ
ಎಂಭತ್ತು ಲಕ್ಷ ಮೇರುಗಳು
ಸುತ್ತಿ, ಸುತ್ತಿ, ಸುತ್ತಿ, ಸಮುದ್ರಗಳು
ಜಲ ಪ್ರಳಯ ನರ್ತನ ಮಾಡುತಿವೆ !
ಮರಮರ ಮರಳಿ ಕುದಿ-
ಯುವ ಎಣ್ಣೆನಾ ? ಅಲ್ಲವಿದು,
ಉಷ್ಣರಕ್ತಕಾಸಾರ !
ಶಿವ ಸಮುದ್ರ
ನಯಾಗಾರಗಳ ಹಾಗೆ
ಓಡಿರಿ ! ಓಡಿರಿ ಮುಂದಕೆ !
ನಡೆಯಿರಿ ಮುಂದಕೆ !
ನಗುತಾ ಮುನ್ಮುಂದಕೆ !
ಮತ್ತೊಂದು ಪ್ರಪಂಚದ ಕಂಚು ನಗಾರಿ
ವಿರಾಮವರಿಯದೆ ಮೊಳಗಿದೆ !

ಹಾವುಗಳಂತೆ
ಬೇಟೆನಾಯಿಗಳಂತೆ
ಧನಂಜಯನಂತೆ ಸಾಗಿರಿ!
ಕಾಣಿಸಲಿಲ್ಲವೇ ಮತ್ತೊಂದು ಪ್ರಪಂಚದ
ಅಗ್ನಿ ಕಿರೀಟದ ಧಗ ಧಗ
ಕೆಂಪು ಬಾವುಟದ ನಿಗನಿಗ
ಹೋಮ ಜ್ವಾಲೆಯ ಭುಗ ಭುಗ ?

(ಏಪ್ರಿಲ್, ೧೯೩೪)

ಜಯಭೇರಿ

ನಾನು ಸಹಿತ
ಪ್ರಪಂಚಾಗ್ನಿಗೆ
ಸಮಿತ್ತು ಒಂದನು ಆಹುತಿ ನೀಡಿದೆ !

ನಾನು ಸಹಿತ
ವಿಶ್ವ ಸೃಷ್ಟಿಗೆ
ಅಶ್ರುವೊಂದನು ಧಾರೆ ಎರೆದೆ !

ನಾನು ಸಹಿತ
ಭುವನ ಘೋಷಕೆ
ಉನ್ಮತ್ತ ಕೊರಳ ತೆರೆದು ಕೂಗಿದೆ !

***

ಬೇಸಿಗೆ ಕಾಲ ಹತ್ತಿ ಉರಿದಾಗ
ಚಿಟ್ಟೆಯಾಗಿತೆ ?
ದಗೆಗೆ ಕಮರಲಿಲ್ಲವೇ ?

ಮಳೆಗಾಲ ಆವರಿಸಿದಾಗ
ಆಪಾದಮಸ್ತಕ
ನೆಂದು ನೀರಾಗಲಿಲ್ಲವೇ ?

ಶೀತಕಾಲ ಕೊರೆದಾಗ
ಕೊರಡುಗಟ್ಟಿ
ಹಸಿವೆನಿಸಿ ಕೂಗಿಟ್ಟೆನಲ್ಲ !

***

ನಾನೊಬ್ಬನೇ
ನಿಂತುಬಿಟ್ಟರೆ -
ಬಿರುಗಾಳಿ, ಮಳೆಮೋಡ, ಇಬ್ಬನಿಯ ಸೋನೆ
ಭೂಮಿ ಮೇಲೆ ಮುರಿದು ಬೀಳುತ್ತವೆ !

ಅಂಬರದಿಂದ ಇಣುಕಿ ನೋಡುವ
ಬಣ್ಣ ಬಣ್ಣದ ತಾರೆಗಳೆಲ್ಲ ಉದುರಿ
ರಕ್ತ ಕಕ್ಕುತ್ತಾ
ಸಿಡಿದು ಹೋಗುತ್ತವೆ !

ಹಗಲುಗಳೆಲ್ಲ ಒಡೆದು ಹೋಗಿ
ನಿಶಿಥಿಗಳೆಲ್ಲ ಸವೆದುಹೋಗಿ
ಮಹಾ ಪ್ರಳಯ ಜಗದ ತುಂಬಾ
ಪ್ರಗಲ್ಭಿಸುತ್ತದೆ !

ನಾನೊಬ್ಬನೇ ಧಾತ್ರಿ ತುಂಬಾ
ತುಂಬಿ ಹೋಗಿ
ನನ್ನ ಕೊರಳ ದನಿ ತುಂತುರಾಗಿ
ಜಗವೆಲ್ಲಾ ಹನಿಯಾಗಲು
ಆ ಮೂಹೂರ್ತ ಆಗಮಿಸುತ್ತದೆ

***

ನಾನು ಸಹಿತ
ಪ್ರಪಂಚಾಬ್ಧದ
ಶ್ವೇತ ಎಲೆಯಾಗಿ ಪಲ್ಲವಿಸುತ್ತೇನೆ !

ನಾನು ಸಹಿತ
ವಿಶ್ವ ವೀಣೆಗೆ
ತಂತಿಯಾಗಿ ಆರೋಹಣ
ಅವರೋಹಣವಾಗುತ್ತೇನೆ !

ನಾನು ಸಹಿತ
ಭುವನ ಭವನದ
ಪತಾಕೆಯಾಗಿ ಮೇಲೇಳುತ್ತೇನೆ !

(ಜೂನ್, ೧೯೩೩)

ಜಗನ್ನಾಥ ರಥ ಚಕ್ರಗಳು (ಆಯ್ದ ಭಾಗಗಳು)

ಬರುತಿದೆ ಬರುತಿದೆ...
ಜಗನ್ನಾಥ
ಜಗನ್ನಾಥ
ಜಗನ್ನಾಥ ರಥ ಚಕ್ರ !
ಜಗನ್ನಾಥ ರಥ ಚಕ್ರ !
ರಥ ಚಕ್ರಗಳ್
ರಥ ಚಕ್ರಗಳ್
ರಥಚ್ರಕ್ರಗಳ್, ರಥ ಚಕ್ರಾ

ಬರುತಲಿದೆ ಬರುತ್ತಿದೆ...!
ಪತಿತರೇ
ಭ್ರಷ್ಟರೇ !
ಹರಿದಾರಿಯಿಂದ ಹಾದು
ರಥ ಚಕ್ರಗಳು, ರಥ ಚಕ್ರಗಳು
ಬರುತ್ತಿವೆ, ಬರುತ್ತಿವೆ !
ಸಿಂಹಾಚಲ ಚಲಿಸಿದೆ
ಹಿಮಾಚಲ ಕರಗಿದೆ
ವಿಂಧ್ಯಾಚಲ ಸೀಳಿದೆ -
ಸಿಂಹಾಚಲ
ಹಿಮಾಚಲ
ವಿಂಧ್ಯಾಚಲ ಸಂಧ್ಯಾ ಚಲ
ಮಹಾನಗರಗಳು ಹಾರುತಿವೆ !
ಮಹಾರಥ ಚಲಿಸುತಿದೆ !
ಚೂರ್ಣವಾದ
ಘೂರ್ಣವಾದ
ದೀರ್ಣವಾದ ಗಿರಿಶಿಖರಗಳು
ಗಿರಗಿರ ತಿರುಗುತಲಿದೆ !
ಪತಿತರೇ !
ಭ್ರಷ್ಟರೇ !
ಯಾತನಾ ಸರ್ಪ ದಷ್ಟರೇ !
ಬನ್ನಿರೋ ! ಬನ್ನಿರೋ ! ಬನ್ನಿರಿ !

ಊರಾಚೆ, ನೀರಿಂಗಿದ
ಕೆರೆಯ ಪಕ್ಕ, ಮರದ ನೆರಳು -
ಗೋಣಿ ಹಿಡಿದು, ಮಡಕೆ ಜೊತೆ
ಎತ್ತ ನೋಡಿದರತ್ತ ಕತ್ತಲೆ
ಅತ್ತ ದುಃಖ, ಕಡು ನಿರಾಶೆ -
ಸೆರೆಮನೆಗಳಲು, ನೇಣುಗಂಬ
ಕಾಲುವೆಯಲಿ ಆತ್ಮಹತ್ಯೆ !
ಮೋಸ ಹೋದ ತಮ್ಮಂದಿರೇ !
ನಿಮ್ಮ ನೋವು ನಾನು ಬಲ್ಲೆ...
ತಾಪದಲಿ, ಇರಿಸು ಮಳೆಯಲಿ
ನರಕೊರೆವ ಚಳಿಯಲಿ
ನವೆ ಕೆರಳಿಸುವ ಹಿಂಡುವ
ನಿಮ್ಮ ನೋವು, ನಿಮ್ಮ ಗಾಥೆ

ಅನು : ಎಚ್. ಎಸ್. ಶಿವಪ್ರಕಾಶ್
ರಾಘವೇಂದ್ರ ರಾವ್

ಸಾವಿಲ್ಲದ ಚಾರು ಶೀಲನಿಗೆ

ವಿದ್ಯುತ್ ಪ್ರವಹಿಸುವ ನಿನ್ನ ನರಗಳಿಂದ
ವಿಪ್ಲವ ಶಾಲು ಹೆಣೆದವನೆ
ಬಿಳಿಯ ಭಯಕ್ಕೆ ಎದುರಾಗಿ
ಕೆಂಪು ಬೀಭತ್ಸ ಚೆಲ್ಲಿದವನೆ

ಬಿಸಿ ರಕ್ತವುಕ್ಕುವ ಯುವತಿ ಯುವಕರನ್ನು
ಅಡವಿಯೊಳಕ್ಕೆ ಕಳುಹಿಸಿದವನೆ
ಅಡವಿಯೊಳಗಿಂದ ಮೈದಾನಕ್ಕೆ
ಆನಂದವ ಇಳಿಸಿದವನೆ

ಆಲೋಚನೆಗಳ ಘಾಟು ಏಳಿಸಿ
ಆಚರಣೆಯಾಗಿ ಮಾರ್ಪಡಿಸಿದವನೆ
ಅನ್ಯಾಯಗಳ ಕಟಿ ಕಟಿ ಹತ್ತಿಸಿ
ಆಯುಧಕ್ಕೆ ಅಲಗಳ ಕಲಿಸಿದವನೆ

ಭ್ರಮೆಗೆ ಡಮರುಗ ಹೊಡೆದು
ಶ್ರಮಕೆ ತಿಲಕವನ್ನಿಟ್ಟು
ಕಷ್ಟದ ಕೆಲಸ ಕೈಗಿಟ್ಟವನೆ
ನಿರ್ಬಂಧದ ಆಟ ಕಟ್ಟಿಹಾಕಿದವನೆ

ಜನ ಬಲ ಎಂಬ ಶಸ್ತ್ರದಲ್ಲಿ
ಧನ ವ್ರಣವ ಶಸ್ತ್ರಿಸಿದವನೆ
ಡಿಯರ್ ಕಾಮ್ರೇಡ್ ಚಾರುಮಜೂಂದಾರ್
ಇಗೋ ನಮ್ಮೆಲ್ಲರ ಜೋಹಾರ್

ಅನು : ಬಂಜಗೆರೆ ಜಯಪ್ರಕಾಶ

ತಿಂಗಳ ಕವಿತೆ

ಬಿ. ಆರ್. ಲಕ್ಷ್ಮಣರಾವ್
ಬಂದಗದ್ದೆ ರಾಧಾಕೃಷ್ಣ

ಕಾನೂನು ಪ್ರೇಮದ ಹಾಗೆ

ಬಿ. ಆರ್. ಲಕ್ಷ್ಮಣರಾವ್

ಕಾನೂನು ಎಂದರೇನು ?
ಹೇಳುತ್ತಾನೆ ರೈತ :
'ಅದು ಸೂರ್ಯನೇ ಸೈ,
ನಮ್ಮ ಬಾಳೆಂಬೋ ಬೇಸಾಯವೆಂಬೋ
ಗಡಿಯಾರಕ್ಕೆ
ಕೀಲಿ ಕೈ'

ತೊದಲುತ್ತಾನೆ ಮುದುಕ :
'ಅದು ನಮ್ಮ ಪುರಾತನರ
ಸದಸದ್ ವಿವೇಕ'

ಚೀರುತ್ತಾನೆ ಮೊಮ್ಮಗ :
'ಅದು ಕೇವಲ ಮೂಕ ಜೀವಿಗಳ
ಹೆಗಲ ನೊಗ.

ಘೋಷಿಸುತ್ತಾನೆ ಸಂತ :
'ಅದು ಭಗವಂತನ
ನುಡಿ ಮುತ್ತುಗಳ ಸಂಪುಟ,
ನನ್ನ ಪ್ರವಚನ,
ಧರ್ಮಗ್ರಂಥ'.

ಆದೇಶಿಸುತ್ತಾನೆ ನ್ಯಾಯಾಧೀಶ :
'ಕಾನೂನಿಗೆ ಎಲ್ಲರೂ ಒಂದೇ,
ನೀನೂನು ಮತ್ತು ನಾನೂನು.
ಕಾನೂನು ಎಂದರೆ
ಕಾನೂನು.'

ವ್ಯಾಖ್ಯಾನಿಸುತ್ತಾನೆ ಪಂಡಿತ :
'ಅದು ಸಾಗರದಂತೆ ಗಹನ.
ಯಾವುದು ಅಕ್ರಮ ? ಯಾವುದು ಸಕ್ರಮ?
ಯಾವುದಕ್ಕೆ ಶಿಕ್ಷೆ ? ಯಾವುದಕ್ಕೆ ರಕ್ಷೆ?
ಇದು ಅರ್ಥವಾಗುವುದಿಲ್ಲ
ಅಲ್ಪಮತಿಗಳಿಗೆ
ಖಂಡಿತ.'

ಕೆಲವರು ಹೇಳುತ್ತಾರೆ :
'ಕಾನೂನು ನಮ್ಮ ಹಣೆ ಬರಹ'
ಇನ್ನು ಕೆಲವರು ಹೇಳುತ್ತಾರೆ :
'ಅದು ನಮ್ಮ ರಾಷ್ಟ್ರದ ತರಹ'
ಸಿನಿಕರು ಕೇಳುತ್ತಾರೆ :
'ಏನದು ಕಾನೂನು ?
ಅದು ಇನ್ನೂ ಇದೆಯೇನು ?'

ಜನಜಂಗುಳಿ ಕನಲಿ ಕಿರಿಚುತ್ತದೆ:
'ಕಾನೂನೆಂದರೆ ನಾವು '
ಹೆಡ್ಡ ಪಿಸುಗುಟ್ಟುತ್ತಾನೆ :
'ಅಲ್ಲಿ ನನಗೂ ಉಂಟು ಕಾವು '.

****

ಪ್ರಿಯೆ,
ಕಾನೂನಿನ ಬಗ್ಗೆ ಹೆಚ್ಚಿಗೆ
ನಮಗಾದರೂ ಏನು ಗೊತ್ತು ಮಹಾ,
ಇತರರಿಗೆ ಗೊತ್ತಿರುವುದರ ವಿನಹ?
ನಾನಂತೂ ಒಪ್ಪಿಕೊಳ್ಳಲು ಸಿದ್ಧ,

ನನಗೆ ಗೊತ್ತಿಲ್ಲ ಯಾವುದು ಸಮ್ಮತ,
ಯಾವುದು ನಿಷಿದ್ಧ.
ಒಟ್ಟಾರೆ,
ಸಂತೋಷವೋ ದುಃಖವೋ
ಎಲ್ಲರೂ ಒಪ್ಪುತ್ತಾರೆ
ಕಾನೂನು ಇದೆ ಎಂಬುದ.
ಅಂದ ಮೇಲೆ, ಕಾನೂನನ್ನು ಅರ್ಥೈಸಲು
ಯಾಕೆ ಬೇಕು ಇನ್ನೊಂದು ಪದ ?

ಎಷ್ಟೇ ಇರಲಿ ಬಿಡು ಇಲ್ಲಿ ವ್ಯಥೆ,
ನಮಗೆ ಬೇಡ ಕಾನೂನಿಲ್ಲದ ವಿಶ್ವ,
ಅರಾಜಕತೆ.

ಆದ್ದರಿಂದ ಬದಿಗಿಟ್ಟು
ನನ್ನ ನಿನ್ನ
ಬಡಿವಾರದ ಎಲ್ಲ ತೋರಿಕೆ,
ಕೊಡಬಹುದಾದರೆ
ಅಂಜಂಜುತ್ತ
ಹಾಗೂ ಬೀಗುತ್ತ
ಒಂದು ಹೋಲಿಕೆ,
ಅದು ಹೀಗೆ :
ಕಾನೂನು ಪ್ರೇಮದ ಹಾಗೆ.

ಪ್ರೇಮದ ಹಾಗೆ,
ನಮಗೆ ಗೊತ್ತಿಲ್ಲ, ಎಲ್ಲಿ? ಹೇಗೆ ?
ಏನು ಕಾರಣ?
ಪ್ರೇಮದ ಹಾಗೆ,
ಅದಕ್ಕಿಲ್ಲ ಒತ್ತಾಯ, ಅದರಿಂದ ಪಲಾಯನ.
ಪ್ರೇಮದ ಹಾಗೆ,
ಮಿಂಚು ನಗೆ, ಧಾರೆ ಕಣ್ಣೀರು.
ಸರಿಸುಮಾರು
ಪ್ರೇಮದ ಹಾಗೆ ಕಾನೂನಿಗೂ ಅಷ್ಟೇ,
ಇಲ್ಲ ನಮ್ಮ ನಿರಂತರ ನಿಷ್ಠೆ.

ಅಪ್ಪಯ್ಯ

ಬಂದಗದ್ದೆ ರಾಧಾಕೃಷ್ಣ

ಈ ಇಂಥ ಚೈತ್ರದಲ್ಲಿ
ಬರಬಾರದಿತ್ತು ಅವನ ಮರಣದ ನೆನಪು

ಮಸಣದ ನೆನಪು ಆಗಾಗ
ಬೆಂದ ಎಲುಬಿನ ಚೂರು
ಬೂದಿ ಬಳಿವಾಗ
ಕರುಳಿಗೆ ಕೆಟ್ಟ ಉರಿ
ಈ ಇಂಥ ಚೈತ್ರದಲ್ಲಿ
ಬರಬಾರದಿತ್ತು ಅವನ ಮರಣದ ನೆನಪು.

ಫಾಲ್ಗುಣದ ಸುಡು ಬಿಸಿಲು
ತಲೆ ಓಡು ಎಲುಬು ಬೂದಿ
ಜಲಕ್ಕೆ ಬಿಡಲೊಯ್ಯುವಾಗ
ಯೋಚನೆ -
ಒಂದಷ್ಟು ಮುಳ್ಳು, ಕಸ ಕಡ್ಡಿ ಎಲ್ಲವನು ಒಟ್ಟಿ
ಬೆಂಕಿ ಹಚ್ಚಿದರೆ, ಹಿಡಿ ಬೂದಿ.
ಬಿದ್ದರೆ ಮುಗಿಲ ನೀರು
ಚಿಗುರೊಡೆದು ನಗುವ ಹಸಿರು

ಈ ನೆಲದ ಆಳದಲ್ಲೆಂಥ ಬಂಗಾರ
ಹಸಿರ ಸಿಂಗಾರ
ಮೆಟ್ಟಿ ನಿಂತ ನೆಲದೊಳಗೆ ಏನುಂಟು ಏನೇನುಂಟು ?
ದಿಟ್ಟಿಸುವ ಆಗಸದ ಕತೆ ?

ಬೆಂಕಿ ಆಗಸ ಗಾಳಿ
ನೆಲ ನೀರುಗಳೆ ಕೇಳಿ
ಬರಬಾರದಿತ್ತು ಅವನ ಮರಣದ ನೆನಪು
ಈ ಇಂಥ ಚೈತ್ರದಲ್ಲಿ

ಪುಸ್ತಕ
ಪುಸ್ತಕ
ಪುಸ್ತಕ ವಿಭಾಗ

ವಿಸ್ಮರಣೆಯ ನಂತರ

ಡಾ. ಗುರುರಾವ್ ಬಾಪಟ್

After Amnesia ಲೇ :ಗಣೇಶ್‌ದೇವಿ. ಭಾಷೆ ; ಇಂಗ್ಲಿಷ್ ಪ್ರ : ದೆಹಲಿಯ ಪ್ರಕಾಶನ ಸಂಸ್ಥೆ. ಬೆಲೆ. ೧೨೦ ರೂ.

ಕನ್ನಡ ವಿಮರ್ಶೆ ಸಾವಿರ ವರ್ಷಗಳ ಹಿಂದೆ ಕವಿರಾಜಮಾರ್ಗದಿಂದ ಪ್ರಾರಂಭವಾದರೂ ಕನ್ನಡದ್ದೇ ಆದ ಸಾಹಿತ್ಯ ಮೀಮಾಂಸೆ ಹುಟ್ಟದಿರಲು ಕಾರಣವೇನು? ನೃಪತುಂಗ, ನಾಗವರ್ಮ ಇತರರುಗಳ ನಂತರ ಬಿ. ಎಂ. ಶ್ರೀಯವರ **ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ** ದ ವರೆಗೆ ೮ - ೯ ಶತಮಾನಗಳಷ್ಟು ದೀರ್ಘ ಅವಧಿಯಲ್ಲಿ ಯಾವರೀತಿಯ ವಿಮರ್ಶಾ ಗ್ರಂಥಗಳೂ ಬರದಿರಲು ಕಾರಣವೇನು? ಸಾವಿರ ವರ್ಷದಷ್ಟು ದೀರ್ಘ ಇತಿಹಾಸವಿರುವ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ನಾವು ಉಪಯೋಗಿಸುವ ಸಾಹಿತ್ಯ ಸಿದ್ಧಾಂತಗಳು, ಪರಿಕಲ್ಪನೆಗಳು, ಒಂದೋ ಸಂಸ್ಕೃತದಿಂದ ಬಂದಂಥವು ಅಥವಾ ಯೂರೋಪಿನ ಕಾವ್ಯ ಮೀಮಾಂಸೆಗಳಿಂದ ಪ್ರೇರಿತವಾದಂಥವು.

ಕನ್ನಡದಲ್ಲಿ ಮಾತ್ರವಲ್ಲ ಸಂಸ್ಕೃತವನ್ನು ಹೊರತು ಪಡಿಸಿ ಭಾರತದ ಎಲ್ಲಾ ಭಾಷಾ ಸಾಹಿತ್ಯದಲ್ಲಿಯೂ ಇದೇ ಸ್ಥಿತಿ ಕಂಡು ಬರುತ್ತದೆ. ಪ್ರಸಕ್ತ ಭಾರತೀಯ ಸಾಹಿತ್ಯ ವಿಮರ್ಶೆ ಒಂದು ಸಂಧಿಕಾಲದಲ್ಲಿ ಇದೆ ಎಂಬುದು ಈಗ ಎಲ್ಲರೂ ಒಪ್ಪುವ ಸಂಗತಿ. ಈ ಬಿಕ್ಕಟ್ಟು ಮುಖ್ಯವಾಗಿ ಪಶ್ಚಿಮದಿಂದ ಬರುತ್ತಿರುವ ಹಲವಾರು ಸಾಹಿತ್ಯ ಸಿದ್ಧಾಂತಗಳು, ಹಾಗೂ ಬೌದ್ಧಿಕ ಪ್ರವಾಹಗಳ ನಡುವೆ ನಮ್ಮ ವಿಮರ್ಶೆಯ ಸ್ವರೂಪ, ಸ್ವಂತಿಕೆ ಯಾವುದಾಗಿರಬೇಕು ಎಂಬ ಬಗ್ಗೆ ಆಗಿದೆ.

ಈ ವಿಚಾರವಾಗಿ ಈಚೆಗೆ ಬಂದ ಗ್ರಂಥಗಳಲ್ಲಿ ಪ್ರಮುಖವಾದದ್ದು ಗಣೇಶ್ ದೇವಿ ಅವರ After Amnesia (ವಿಸ್ಮರಣೆಯ ನಂತರ) ಗ್ರಂಥ. ಭಾಷಾ ಸಾಹಿತ್ಯದಲ್ಲಿ ವಿಮರ್ಶಾ ಪರಂಪರೆ ಬೆಳೆಯದೇ ಹೋದದ್ದಕ್ಕೆ ಕಾರಣ ಹುಡುಕುವ ಪ್ರಯತ್ನಮಾಡುತ್ತಾರೆ ದೇವಿ. ದೇವಿಯವರ ಪುಸ್ತಕ ಭಾರತೀಯ ವಿಮರ್ಶಾ ಪ್ರಪಂಚದಲ್ಲಿ ಒಂದು ಹೊಸ ವಿಚಾರದ ಅಲೆಯನ್ನೇ ಎಬ್ಬಿಸಿದೆ. ಭಾರತೀಯ ಭಾಷೆಗಳ ಸಾಹಿತ್ಯ ವಿಮರ್ಶೆಗೆ ಈ ಪುಸ್ತಕ ಹೊಸ ತಿರುವನ್ನು ಕೊಡಬಲ್ಲದು.

ಆಧುನಿಕ ಪಾಶ್ಚಿಮಾತ್ಯ ವಿಮರ್ಶೆ ನಮ್ಮ ಸಾಂಪ್ರದಾಯಿಕ ವಿಮರ್ಶೆಯನ್ನು ಸಂಪೂರ್ಣವಾಗಿ ಸ್ಥಳಾಂತರ ಮಾಡಿದೆ ಎಂದು ಈಗ ಸಾರ್ವತ್ರಿಕವಾಗಿ ಒಪ್ಪಲಾಗಿದೆ. ಆದರೆ ಪಾಶ್ಚಿಮಾತ್ಯ ಪ್ರಭಾವಕ್ಕಿಂತ ಮೊದಲು ಇದ್ದುದು ಒಂದು ಪ್ರವಾಹವೇ ಅಥವಾ ಹಲವಾರು ಉಪನದಿಗಳಿಂದ ಕೂಡಿದ್ದೆ? ಹಿಂದಿನ ಸಂಪ್ರದಾಯ ಈ ಬದಲಾವಣೆಯ ನಂತರ ಯಾವ ಗುರುತನ್ನೂ ಬಿಡಲಿಲ್ಲವೇ ? ಪರಂಪರೆ ಎಂದರೆ ಸಂಸ್ಕೃತ ಪರಂಪರೆ ಮಾತ್ರವೇ ಅಥವಾ ಮಾರ್ಗ ಹಾಗೂ ದೇಸಿ ಎರಡೂ ಸೇರಿ ಆದದ್ದೇ ? ಇಂತಹ ಪ್ರಶ್ನೆಗಳ ಬಗ್ಗೆ ಚರ್ಚೆ ಸಾಧ್ಯವಾಗಲು ಭಾರತೀಯ ಭಾಷೆಗಳ ಹಾಗೂ ಭಾಷಾ ಸಾಹಿತ್ಯಗಳ ಚಾರಿತ್ರಿಕ ಚೌಕಟ್ಟನ್ನು ಸರಿಯಾಗಿ ನಿರ್ಧರಿಸುವ ಅವಶ್ಯಕತೆ ಇದೆ ಎಂದು ಲೇಖಕರು ಹೇಳುತ್ತಾರೆ.

ವಿಮರ್ಶಾ ಸಿದ್ಧಾಂತಗಳಿಗೆ ಭಾರತೀಯ ಭಾಷಾ ವಿಮರ್ಶೆಗಳ ಕೊಡುಗೆ (ಇಂಗ್ಲಿಷ್‌ನಲ್ಲಿ ಬರೆದದ್ದೂ ಸೇರಿದಂತೆ) ಏಕೆ ಕಡಿಮೆ ಎಂಬ ಪ್ರಶ್ನೆಯೊಂದಿಗೆ ತಮ್ಮ ಅಧ್ಯಯನವನ್ನು ಆರಂಭಿಸುವ ದೇವಿ ಈ ಪ್ರಶ್ನೆಗೆ ಸಮರ್ಪಕ ಉತ್ತರ ಹುಡುಕುವ ಮೊದಲು, ಭಾಷಾ ಸಾಹಿತ್ಯಗಳ ಬಗ್ಗೆ ಹಾಗೂ ನಮ್ಮ ಪರಂಪರೆಯ ಬಗ್ಗೆ ಐತಿಹಾಸಿಕ ಅಧ್ಯಯನದ ಅಗತ್ಯವಿದೆ ಎಂಬ ಮಾತನ್ನು ಒತ್ತಿ ಹೇಳುತ್ತಾರೆ. ಸಂಸ್ಕೃತ ಮತ್ತು ತಮಿಳಿನಿಂದ ಬೇರೆಯಾಗಿ, ಈಗಿರುವ ಭಾಷೆಗಳು ಹುಟ್ಟಿದ ಕಾಲ ಹೇಗಿತ್ತು ? ಆಗಿದ್ದ ರಾಜಕೀಯ, ಸಾಮಾಜಿಕ ಸ್ಥಿತಿ ಏನು? ಇಸ್ಲಾಂ ಧರ್ಮದ ಆಗಮನ ಹೇಗೆ ಪ್ರಭಾವ ಬೀರಿತು? ಬ್ರಿಟಿಷ್ ಆಡಳಿತ, ೧೯ನೇ ಶತಮಾನದ ಪುನರುತ್ಥಾನ, ಓರಿಯಂಟಲಿಸಂ ಹಾಗೂ ಇಂಡಾಲಜಿಯಂತಹ ಶಾಸ್ತ್ರಗಳು ಹೇಗೆ ನಮ್ಮ ಚರಿತ್ರೆಯ ಕಲ್ಪನೆಯನ್ನು ವಿರೂಪಗೊಳಿಸಿದವು ಎಂಬ ವಿಚಾರಗಳನ್ನು ಮುಖ್ಯವಾಗಿ ಈ ಗ್ರಂಥದಲ್ಲಿ ಚರ್ಚಿಸಲಾಗಿದೆ.

ಭಾರತದ ಸಾಂಸ್ಕೃತಿಕ, ಸಾಹಿತ್ಯ ಚರಿತ್ರೆಯನ್ನು ಸರಿಯಾಗಿ ಅರ್ಥೈಸಲು ಒಂದು ಹೊಸ ಚಾರಿತ್ರಿಕ ದೃಷ್ಟಿಕೋನ, ಹೊಸ Historiography ಯ ಅಗತ್ಯವಿದೆ. ಚರಿತ್ರೆ ಎಂದರೆ ಒಂದಾದ ನಂತರ ಒಂದರಂತೆ ಬರುವ ಕಾಲಘಟ್ಟಗಳ ಅಧ್ಯಯನ ಮಾತ್ರ ಎಂಬ ಪಾಶ್ಚಿಮಾತ್ಯ ಕಲ್ಪನೆ ನಮ್ಮಲ್ಲಿ ಅಸಮರ್ಥ ಎಂಬುದನ್ನು ಒತ್ತಿಹೇಳುತ್ತಾರೆ ದೇವಿಯವರು.

ಈ ಗ್ರಂಥದ ಒಟ್ಟು ವಿಚಾರಧಾರೆಯನ್ನು ಹೀಗೆ ಸಂಗ್ರಹಿಸಬಹುದು

ಪರಂಪರೆ ಮತ್ತು ವಿಸ್ಮರಣ

ಇಂಗ್ಲಿಷ್ ವಿದ್ಯಾಭ್ಯಾಸ ಭಾರತದಲ್ಲಿ ಪ್ರಾರಂಭವಾದದ್ದು ಮೂಲತಃ ಬ್ರಿಟಿಷ್ ಆಡಳಿತಗಾರರ ಉಪಯೋಗಕ್ಕಾಗಿಯೇ ಹೊರತು ಭಾರತೀಯರನ್ನು ಸಾಂಸ್ಕೃತಿಕವಾಗಿ ಬ್ರಿಟಿಷರ ಸಮಾನರನ್ನಾಗಿ ಮಾಡಲು ಅಲ್ಲ. ಜ್ಞಾನವನ್ನು ಇನ್ನೊಬ್ಬರ ಮೇಲೆ ಹತೋಟಿಯನ್ನು ಸಾಧಿಸಲು ಉಪಯೋಗಿಸುವುದು ವಸಾಹತುಶಾಹಿ ಆಡಳಿತಗಳ ಲಕ್ಷಣಗಳಲ್ಲಿ ಒಂದು. ಆಳಿಸಿಕೊಳ್ಳುವ ಜನಾಂಗದಲ್ಲಿ ಕೂಡಾ ಆಳುವವರ ಜ್ಞಾನ ತಮಗಿಂತ ಉತ್ತಮವಾದುದು ಎಂಬ ಭಾವನೆ ಹುಟ್ಟುವುದು ಸ್ವಾಭಾವಿಕ. ಇಂಗ್ಲಿಷ್

ವಿದ್ಯಾಭ್ಯಾಸ ಪಡೆದ ಭಾರತೀಯರಲ್ಲಿ ಕೂಡಾ ಇಂಥಾ ಭಾವನೆ ಬೆಳೆದು ನಮ್ಮಲ್ಲಿಯ ವಿಮರ್ಶಾ ಪರಂಪರೆಯನ್ನು ಅಲಕ್ಷಿಸಿದರು. ಉದಾಹರಣೆಗೆ ಮಹಾಕಾವ್ಯಗಳ ಲಕ್ಷಣಗಳ ಬಗ್ಗೆ ದಂಡಿನೆಯಂತಹ ವಿಮರ್ಶಕರು ಮಹತ್ವದ ಕೊಡುಗೆ ನೀಡಿದ್ದರೂ, ಅದನ್ನು ಅಲಕ್ಷಿಸಿ, ಮಹಾಕಾವ್ಯಗಳ ಬಗ್ಗೆ ಇಂಗ್ಲೀಷಿನಲ್ಲಿ ಇರುವ ಎರಡನೇ ದರ್ಜೆಯ ವಿಮರ್ಶೆಗೆ ಪ್ರಾಮುಖ್ಯತೆ ನೀಡಲಾಯಿತು.

ಸಂಸ್ಕೃತ ವಿಮರ್ಶೆಯ ಪರಂಪರೆ ಭವ್ಯವಾಗಿದ್ದರೂ ಅದು ಜೀವಂತ ಪರಂಪರೆ ಅಲ್ಲವಾದ್ದರಿಂದ ಇಂದಿನ ವಿಮರ್ಶಕನಿಗೆ ಅದು ಪ್ರಯೋಜನಕಾರಿ ಅಲ್ಲ. ಸಂಸ್ಕೃತ ಪರಂಪರೆಯ ಬಗ್ಗೆ ಇಂದು ಇರುವ ಚಿತ್ರ ಪ್ರಮುಖವಾಗಿ ವಿಲಿಯಂ ಜೋನ್ಸ್, ಮ್ಯಾಕ್ಸ್‌ಮುಲ್ಲರ್ ಮುಂತಾದ ಇಂಡಾಲಜಿಸ್ಟ್‌ಗಳ ಸೃಷ್ಟಿ. ಇಂಡಾಲಜಿ ಕೂಡಾ (ಎಡ್ವರ್ಡ್ ಸೇದ್ ಓರಿಯಂಟಲಿಸಂ ಬಗ್ಗೆ ಹೇಳಿದ ಹಾಗೆ) ವಸಾಹತುಶಾಹಿ ಆಡಳಿತಗಾರರು ನಿರ್ಮಿಸಿದ ಒಂದು ಕಲ್ಪನೆ. ಇದರಲ್ಲಿ ನಮ್ಮ ಹತ್ತಿರದ ಚಾರಿತ್ರಿಕ ಕಾಲವನ್ನು, ಭಾಷಾಸಾಹಿತ್ಯವನ್ನು, ಅಲಕ್ಷಿಸಿ ದೂರದ ಗತಕಾಲದ ಸಂಸ್ಕೃತವನ್ನೇ ಆರಿಸಿಕೊಳ್ಳಲಾಯಿತು. ಆ ಕಾಲದ ಚರಿತ್ರೆಯನ್ನು ರೊಮ್ಯಾಂಟಿಕ್ ಆಗಿ ಚಿತ್ರಿಸಿ, ಸಂಸ್ಕೃತ ಬೌದ್ಧಿಕ ಪರಂಪರೆಯನ್ನು ಆಯಾಕಾಲದ ರಾಜಕೀಯ, ಆರ್ಥಿಕ ಬೌದ್ಧಿಕ ಒತ್ತಡಗಳಿಂದ ಹೊರತುಪಡಿಸಿ ನಿಶ್ಚಲ ಸ್ಥಿತಿಯಲ್ಲಿದ್ದಂತೆ ರೂಪಿಸಲಾಯಿತು. ಈ ರೀತಿಯ ಐತಿಹಾಸಿಕ ಚಿತ್ರಣದ ಪರಿಣಾಮ ಎಂದರೆ- ಒಂದು ಕಾಲಕ್ಕೆ ಭವ್ಯವಾಗಿದ್ದು ನಂತರ ಅವನತಿ ಹೊಂದಿದ ಚರಿತ್ರೆ ನಮ್ಮದು ಎಂಬ ಅಭಿಪ್ರಾಯ ಮೂಡಿದ್ದು. ಆಶ್ಚರ್ಯಕರ ಸಂಗತಿ ಎಂದರೆ ಇಂಡಾಲಜಿಯಿಂದ ಹುಟ್ಟಿದ ಈ ರೀತಿಯ ಅಚಾರಿತ್ರಿಕ ದೃಷ್ಟಿಕೋನವನ್ನು ಭಾರತೀಯರೆಲ್ಲ ನಿಜ ಎಂದು ನಂಬಿದ್ದು.

ಸಾಂಸ್ಕೃತಿಕ ವಿಸ್ಮರಣ

ಈ ರೀತಿಯ ದೃಷ್ಟಿಕೋನದಿಂದಾಗಿ ಪುರಾತನ ಭಾರತದೊಂದಿಗೆ ನಮಗೆ ಭಾವನಾತ್ಮಕ ಸಂಬಂಧ ಸಾಧ್ಯವಾದಂತೆ, ವಸಾಹತು ಪೂರ್ವದ ಚರಿತ್ರೆಯ ಜೊತೆ ಸಾಧ್ಯವಾಗಲಿಲ್ಲ. ಹಾಗಾಗಿ ಇಂದಿನ ವಿಮರ್ಶಕನಿಗೆ ಒಂದೆಡೆ ಸಂಸ್ಕೃತ ಕಾವ್ಯ ಮೀಮಾಂಸೆ, ಇನ್ನೊಂದೆಡೆ ಪಾಶ್ಚಿಮಾತ್ಯ ಸಾಹಿತ್ಯ ಸಿದ್ಧಾಂತಗಳು ಹತ್ತಿರ ಎನ್ನಿಸುತ್ತವೆ. ಆದರೆ ಇದೇ ತಾದಾತ್ಮ್ಯತೆ ಭಾಷಾ ಸಾಹಿತ್ಯಗಳೊಡನೆ ಸಾಧ್ಯವಾಗುವುದಿಲ್ಲ. ಸಂಸ್ಕೃತ ಮತ್ತು ಪಾಶ್ಚಿಮಾತ್ಯ ವಿಚಾರಗಳು ಈ ರೀತಿಯಲ್ಲಿ ಹತ್ತಿರವಾಗಲು ವಸಾಹತುಶಾಹಿ ಅನುಭವ ಮತ್ತು ಅದರಿಂದ ಹುಟ್ಟಿದ ಸಾಂಸ್ಕೃತಿಕ ಅಧೈರ್ಯ ಮುಖ್ಯಕಾರಣಗಳು. ವಸಾಹತುಶಾಹಿ ಅನುಭವ ಹೊಸ ಮೌಲ್ಯಗಳು ಹಾಗೂ ಚಿಂತನಾಕ್ರಮವನ್ನು ಕಲಿಸುವುದರೊಂದಿಗೆ ಹಿಂದಿದ್ದ ಮೌಲ್ಯ ವ್ಯವಸ್ಥೆ ಹಾಗೂ ಜೀವನ ಕ್ರಮವನ್ನು ಅಸ್ತವ್ಯಸ್ಥಗೊಳಿಸುತ್ತವೆ. ಈ ಅವ್ಯವಸ್ಥೆ ಒಂದು ಸಾಂಸ್ಕೃತಿಕ ವಿಸ್ಮರಣವನ್ನು ಉಂಟುಮಾಡಿ ದೂರದ ಗತಕಾಲದ ಬಗ್ಗೆ ಒಂದು ಫ್ಯಾಂಟಸಿಯನ್ನು ನಿರ್ಮಾಣ ಮಾಡುತ್ತದೆ.

ಹೊರಗಿನಿಂದ ಬಂದ ಆಡಳಿತಗಾರರ ಮಿಲಿಟರಿ ಶಕ್ತಿ, ಉತ್ಪಾದನಾ ವಿಧಾನಗಳು, ಆರ್ಥಿಕ ಯಶಸ್ಸು ಇವೆಲ್ಲ ವಸಾಹತೀಕರಣಕ್ಕೊಳಪಟ್ಟ ಜನಾಂಗದಲ್ಲಿ ತನ್ನ ಸಮೀಪದ ಗತಕಾಲದ ಬಗ್ಗೆ ಕ್ಲೇಶವನ್ನು ಹುಟ್ಟಿಸುತ್ತದೆ. ಇದೇ ಮನೋಭಾವ ದೂರದ ಗತಕಾಲದ ಒಂದು ಬೃಹತ್ತಾದ ಕನಸಿನ ಚಿತ್ರ ನಿರ್ಮಿಸುತ್ತದೆ. ಭಾರತದ ಪುನರುತ್ಥಾನ ಎಂದು ಕರೆಯುವ ಕಾಲದಲ್ಲೂ ಇದೇ ಪ್ರಕ್ರಿಯೆಯನ್ನು ಕಾಣಬಹುದು. ಆಗಿನ ಪುನರುತ್ಥಾನ ಮತ್ತು ರಾಷ್ಟ್ರೀಯತೆ ವಿಸ್ಮೃತಿಯನ್ನು ರಾಷ್ಟ್ರದ ಮುಂದುವರಿಯುವಿಕೆಯ ಒಂದು ಭಾಗ ಎಂದೇ ಭಾವಿಸಿದವು. ಆ ಕಾಲದಲ್ಲಿ ಬಂದ ಕಾದಂಬರಿಗಳಲ್ಲಿ ಇತರೆ ಕೃತಿಗಳಲ್ಲಿ ಗತಕಾಲದ ಬಗ್ಗೆ ಫ್ಯಾಂಟಸಿ ಸೃಷ್ಟಿಮಾಡುವ ಮನೋಭಾವವನ್ನು ಕಾಣಬಹುದು. ಆ ಕಾಲದ ಅತ್ಯಂತ ಮಹತ್ವದ ಚಿತ್ರಕಾರನಾದ ರವಿವರ್ಮ ತನ್ನ ಕೃತಿಗಳಿಗೆ ವಸ್ತುಗಳನ್ನು ಪುರಾಣಗಳಿಂದ ತೆಗೆದುಕೊಂಡನೇ ಹೊರತು ತನ್ನ ಸುತ್ತಲ ಬದುಕಿನಿಂದ, ಚಾರಿತ್ರಿಕ ಘಟನೆಗಳಿಂದ ಅಲ್ಲ. ಆತ ಚಿತ್ರಿಸಿದ ದೇವರ ಚಿತ್ರಗಳ ಅಪಾರ ಜನಪ್ರಿಯತೆ ಕೂಡಾ ಅಂತಹ ಮಾನಸಿಕ ಅಗತ್ಯವನ್ನು ಎತ್ತಿ ತೋರಿಸುತ್ತದೆ.

ಈ ರೀತಿಯಲ್ಲಿ ಪಾಶ್ಚಾತ್ಯ ಪ್ರಭಾವ, ದೂರದ ಗತಕಾಲವನ್ನು ವೈಭವೀಕರಿಸುವುದರಲ್ಲಿ ಹಾಗೂ ಹತ್ತಿರದ ಚಾರಿತ್ರಿಕ ಕಾಲದ ನೆನಪನ್ನು ಹತ್ತಿಕ್ಕುವಲ್ಲಿ ಪರ್ಯವಸಾನವಾಯಿತು. ಇದರ ದುಷ್ಪರಿಣಾಮ ಎಂದರೆ ಬದುಕಿದ್ದ ಸಂಪ್ರದಾಯದ ಜೊತೆಗಿನ ಸಂಬಂಧ ಕಡಿದು ಹೋಗಿ ಗತಕಾಲದ ವೈಭವದ ಕನಸಿನ ಚಿತ್ರ ಸೃಷ್ಟಿಯಾಯಿತು. ನಮ್ಮ ದೇಸಿ ಸಂಪ್ರದಾಯಗಳ ಬಗೆಗಿನ ಈ ವಿಸ್ಮರಣ ಈಗಲೂ ಅಷ್ಟೇ ಪ್ರಬಲವಾಗಿದ್ದು ಭಾರತೀಯ ವಿಮರ್ಶೆ ಎದುರಿಸುತ್ತಿರುವ ಸಮಸ್ಯೆಯ ಮೂಲವಾಗಿದೆ.

ಎಂದೂ ಮುಗಿಯದ ಅವಸ್ಥಾಂತರ

ಚರಿತ್ರೆಯ ಸರಳೀಕೃತ ಸಿದ್ಧಾಂತ ನಮ್ಮಲ್ಲಿಯ ಸಂಕೀರ್ಣ ಪರಿಸ್ಥಿತಿಯನ್ನು ಅರ್ಥೈಸಲು ಸಹಕಾರಿಯಲ್ಲ. ಉದಾಹರಣೆಗೆ ಕ್ರಿ. ಶ. ೧೦೦೧ ರಲ್ಲಿ ನಡೆದ ಘಜ್ನಿಯ ದಂಡಯಾತ್ರೆಯಿಂದ ಪ್ರಾರಂಭಿಸಿ ೧೩ನೇ ಶತಮಾನದವರೆಗಿನ ಕಾಲ ಭಾರತದ ಬಹಳಷ್ಟು ಭಾಷೆಗಳು ರೂಪುಗೊಳ್ಳುತ್ತಿದ್ದ ಕಾಲ ಹಾಗೂ ಅವುಗಳಲ್ಲಿ ಮೊದಲು ಸಾಹಿತ್ಯ ರಚನೆಯಾಗುತ್ತಿದ್ದ ಕಾಲ. ಅಭಿನವ ಗುಪ್ತ, ಕುಂತಕ ಮೊದಲಾದ ಸಂಸ್ಕೃತ ವಿಮರ್ಶಕರು ಬದುಕಿದ್ದ ಕಾಲವೂ ಇದೇ. ಆ ಕಾಲದಲ್ಲಿ ರಾಜಕೀಯವಾಗಿ ಇಸ್ಲಾಂ ಪ್ರಾಬಲ್ಯ ಬೆಳೆಯುತ್ತಿತ್ತು. ಭಾಷೆಗಳಲ್ಲಿ ಸಾಹಿತ್ಯ ರಚನೆ ಪ್ರಾರಂಭವಾಗಿತ್ತು. ಸಂಸ್ಕೃತದಲ್ಲಿ ವಿಮರ್ಶೆಯೂ ಮುಂದುವರೆದಿತ್ತು.

ಅಭಿನವ ಗುಪ್ತನ ಕಾಲದಲ್ಲಿ ಸಾಹಿತ್ಯ ಸಿದ್ಧಾಂತಗಳಿಗೂ, ಅದನ್ನು ಸೃಷ್ಟಿಸುವ ಸಮಾಜಕ್ಕೂ ಇದ್ದ ಸಂಬಂಧ ಕಡಿದು ಬಿತ್ತು. ಅವನ ನಂತರದ ಸಂಸ್ಕೃತ ವಿಮರ್ಶೆ ಹೆಚ್ಚು ಸೂಕ್ಷ್ಮವಾಗುತ್ತಾ ನಡೆಯಿತು. ಭರತನಿಂದ ಹಿಡಿದು ಸಂಸ್ಕೃತದ ಪ್ರಮುಖ ವಿಮರ್ಶಕರು ಲೋಕಧರ್ಮಕ್ಕೆ ಸಿದ್ಧಾಂತಗಳಲ್ಲಿ ಪ್ರಾಮುಖ್ಯತೆ ನೀಡಿದ್ದರು. ಆದರೆ ೧೧ನೇ ಶತಮಾನದ ನಂತರದ ವಿಮರ್ಶಕರು ಸಾಹಿತ್ಯದ

ಲೋಕೋತ್ತರ ಗುಣಗಳನ್ನು ಎತ್ತಿ ಹಿಡಿದು ಸಾಹಿತ್ಯಕ್ಕೂ ಸಮಾಜಕ್ಕೂ ಇರುವ ಸಂಬಂಧವನ್ನು ಕಡೆಗಣಿಸಿದರು. ಇದು ಆಗಿನ ರಾಜಕೀಯ ಸಾಮಾಜಿಕ ಬದಲಾವಣೆಗಳಿಗೆ ಸಂಸ್ಕೃತ ವಿಮರ್ಶೆಯಲ್ಲಿ ಕಂಡುಬಂದ ಪ್ರತಿಕ್ರಿಯೆ.

ಆ ವೇಳೆಗಾಗಲೇ ಮುಸ್ಲಿಂ ಸಾಮ್ರಾಜ್ಯಗಳು ಸ್ಥಾಪನೆಗೊಂಡಿದ್ದವು. ಭಾಷಾ ಸಾಹಿತ್ಯಗಳು ವಿಪುಲವಾಗಿ ಬೆಳೆದಿದ್ದವು. ಸಂಸ್ಕೃತ ವಿಮರ್ಶೆಯಲ್ಲಿ ಆ ಶತಮಾನಗಳಲ್ಲಿ ನಡೆದ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ವಿಮರ್ಶೆಯನ್ನು ಸಂಸ್ಕೃತಿಯ ಒಂದು ಭಾಗವಾಗಿ ನೋಡಬೇಕು. ಸಾಹಿತ್ಯ ವಿಮರ್ಶೆಯ ಸಾಮಾಜಿಕ ಇತಿಹಾಸವನ್ನು ಹೊಸದಾಗಿ ಬರೆಯಬೇಕು. ರಾಜಕೀಯವಾಗಿ ದೊಡ್ಡ ಸಾಮ್ರಾಜ್ಯಗಳು ಮುರಿದು ಬಿದ್ದು, ಸಣ್ಣ ಪುಟ್ಟ ಪಾಳೇಗಾರರು ಹುಟ್ಟಿಕೊಂಡ ಕಾಲವದು. ಹಾಗಾಗಿ ಸಾಂಸ್ಕೃತಿಕ ಸಂಪರ್ಕ ಮಾರ್ಗಗಳು ಮುರಿದು ಬಿದ್ದು, ಪ್ರಾದೇಶಿಕ ಸಂಸ್ಕೃತಿ, ಭಾಷೆ ಇವುಗಳಿಗೆ ಪ್ರಾಮುಖ್ಯತೆ ಬಂದಿತ್ತು. ಭಾಷಾ ಸಾಹಿತ್ಯಗಳು ತಮ್ಮದೇ ಆದ ಸ್ವರೂಪ ಮತ್ತು ಸಾಂಸ್ಕೃತಿಕ ಅವಕಾಶವನ್ನು ಕಂಡುಕೊಳ್ಳತೊಡಗಿದವು. ಆ ಕಾಲದಲ್ಲಿ ಮೂರು ರೀತಿಯ ಸಾಹಿತ್ಯ ರಚನೆಯನ್ನು ಗುರುತಿಸಬಹುದು.

೧. ಸಂಸ್ಕೃತ ಸಾಹಿತ್ಯ ಹಾಗೂ ವಿಮರ್ಶೆ.

೨. ಭಾಷೆಗಳಲ್ಲಿ ಜನಾದರಗಳಿಸಿದ ಸಾಹಿತ್ಯ ಹಾಗೂ

೩. ಜನಪದ ಸಾಹಿತ್ಯ.

ದೇಸಿ ಸಂಪ್ರದಾಯ ಜನಪದ ಸಾಹಿತ್ಯದಲ್ಲಿ ಅಭಿವ್ಯಕ್ತಿ ಹೊಂದಿದರೆ, ಮಾರ್ಗ ಸಂಪ್ರದಾಯ ಭಾಷಾಸಾಹಿತ್ಯ ಹಾಗೂ ಸಂಸ್ಕೃತ ಎರಡರಲ್ಲೂ ಸೃಷ್ಟಿ ಆಗುತ್ತಿತ್ತು.

ಭಾರತದ ಸನ್ನಿವೇಶದಲ್ಲಿ ಪರಂಪರೆ ಹಾಗೂ, ಸಂಪ್ರದಾಯ ಎನ್ನುವಾಗ ಮಾರ್ಗ ಹಾಗೂ ದೇಸಿ ಎರಡು ಕವಲುಗಳೂ ಸೇರಿವೆ. ಭಾಷಾ ಸಾಹಿತ್ಯ ಹುಟ್ಟುವ ಮೊದಲು, ಮಾರ್ಗ ದೇಸಿ ಸಂಪ್ರದಾಯಗಳ ನಡುವೆ ಹಾಗೂ ಬೇರೆ ಬೇರೆ ದೇಸಿ ಸಂಪ್ರದಾಯಗಳ ನಡುವೆ ಕೊಡುಕೊಳ್ಳುವಿಕೆ ನಡೆಯುತ್ತಲೇ ಇದ್ದಿತು. ಈ ರೀತಿಯ ಸಂಪರ್ಕ ಘಜ್ನಿಯ ನಂತರ ಮುರಿದು ಬಿತ್ತು. ಜೊತೆಗೆ ಸಾಹಿತ್ಯದ ಮೌಲ್ಯಗಳಲ್ಲಿ ಒಂದು ಶ್ರೇಣಿ ಸೃಷ್ಟಿಯಾಗಿ ಮಾರ್ಗ ಸಂಪ್ರದಾಯಗಳಲ್ಲಿ ಒಂದು ರೀತಿಯ ಸೆಡವು ಬೆಳೆಯಿತು, ಹಾಗೂ ದೇಸಿ ಎಂದರೆ ಗ್ರಾಮ್ಯ, ಕೀಳು ಎನ್ನುವ ಭಾವನೆ ಪ್ರಬಲವಾಯಿತು.

ಹಾಗಾಗಿ ಸಂಸ್ಕೃತ ಕಾವ್ಯ ಮೀಮಾಂಸೆ, ಒಂದೆಡೆ ಇಸ್ಲಾಂನ ಪ್ರಭುತ್ವಗಳಿಂದ, ಇನ್ನೊಂದೆಡೆ ಭಾಷಾ ಸಾಹಿತ್ಯಗಳಿಂದ ರಕ್ಷಿಸಿಕೊಳ್ಳುವ ಪ್ರಯತ್ನ ಮಾಡುತ್ತ, ೧೭ನೇ ಶತಮಾನದವರೆಗೆ ಕುಟುಕು ಜೀವ ಹಿಡಿದು ಬದುಕಿತ್ತು. ಇಂಡಾಲಜಿಯ ವಿದ್ವಾಂಸರಿಂದ ಸಂಸ್ಕೃತ ಕಾವ್ಯ ಮೀಮಾಂಸೆಗೆ ಹೊಸ ಜೀವ ಬಂತು. ಯುರೋಪಿನ ವಿದ್ವಾಂಸರು ಹಾಗೂ ನಮ್ಮಲ್ಲಿಯ ಮಾರ್ಗ ಸಂಪ್ರದಾಯಿಗಳು ಒಟ್ಟಾಗಿ, ಭಾಷಾ ಸಾಹಿತ್ಯಕ್ಕೆ ಎರಡನೆಯ ಸ್ಥಾನ ಕೊಡುವುದರಲ್ಲಿ ಮುಂದಾದರು.

ಭಕ್ತಿ ಸಾಹಿತ್ಯ

ಭಾಷಾಸಾಹಿತ್ಯದ ಬೆಳವಣಿಗೆಗೆ ಅತಿ ಮುಖ್ಯವಾದ ಕೊಡುಗೆ ನೀಡಿದ್ದು ಭಕ್ತಿ ಚಳುವಳಿ. ಭಕ್ತಿ ಸಾಹಿತ್ಯ, ಮಾರ್ಗ ಸಾಹಿತ್ಯಕ್ಕೆ ವಿರುದ್ಧವಾಗಿ ಇನ್ನೊಂದು ವರ್ಗದ ಬಳಕೆದಾರರಿಗಾಗಿ ರಚಿಸಲ್ಪಟ್ಟವು. ಇವು ಹೆಚ್ಚಾಗಿ ಬ್ರಾಹ್ಮಣೇತರ ಬಳಕೆದಾರರಿಗಾಗಿ, ಬ್ರಾಹ್ಮಣೇತರ ಬರಹಗಾರರು ರಚಿಸಿದ ಕೃತಿಗಳು. ಹಾಡು, ಪ್ರದರ್ಶನಕಲೆಗಳ ಮುಖಾಂತರ ಈ ಸಾಹಿತ್ಯ, ದೇವಸ್ಥಾನ ಜಾತ್ರೆ ಮುಂತಾದ ಸ್ಥಳಗಳಲ್ಲಿ ಹೊಸ ಪ್ರಸರಣ ವಿಧಾನವನ್ನ ಕಂಡು ಕೊಂಡಿತು. ಭಕ್ತಿ ಪಂಥ. ತನ್ನದೇ ಆದ ಚಲನಾಶಕ್ತಿ ಹೊಂದಿತ್ತು. ಇಡಿ ಭಾರತೀಯ ಸಾಹಿತ್ಯದ ಇತಿಹಾಸದಲ್ಲೆ ಬದುಕಿಗೆ ಅಷ್ಟು ಹತ್ತಿರವಾಗಿ, ಬದುಕಿನಿಂದಲೇ ರೂಪಗೊಂಡ ಸಾಹಿತ್ಯದ ಉದಾಹರಣೆ ಇನ್ನೊಂದಿಲ್ಲ.

ಈ ಚಳುವಳಿ **ಮಾರ್ಗ** ದೇಸಿಯ ಶ್ರೇಣಿಯನ್ನು ಧಿಕ್ಕರಿಸಿ, ಆಗಲೇ ಶಿಥಿಲವಾಗಿದ್ದ **ಮಾರ್ಗ** ಸಂಪ್ರದಾಯಕ್ಕೆ ಕೊಡಲಿ ಏಟುಹಾಕಿತು. ಭಕ್ತಿ ಚಳುವಳಿ ಅಕಸ್ಮಾತ್ತಾಗಿ ಹುಟ್ಟಿಕೊಂಡಿದ್ದಲ್ಲ. ಅದು ನಮ್ಮ ಸಮಾಜದ ತಾತ್ವಿಕ, ಸಾಹಿತ್ಯಿಕ, ರಂಗದಲ್ಲಿ ಆಗುತ್ತಿದ್ದ ಮೂಲಭೂತ ಬದಲಾವಣೆಗಳ ಪ್ರತೀಕವಾಗಿತ್ತು. ಉದಾಹರಣೆಗೆ ಭಕ್ತಿ ಸಾಹಿತ್ಯದಲ್ಲಿ ಕಾಣುವ ಭಾವುಕತೆಯ ಸ್ವಚ್ಛಂದ ಅಭಿವ್ಯಕ್ತಿಗೆ **ಮಾರ್ಗ** ಪರಂಪರೆಯಲ್ಲಿ ಅವಕಾಶ ಇರಲಿಲ್ಲ. ಈ ರೀತಿಯಲ್ಲಿ ಭಕ್ತಿ ಪಂಥ **ಮಾರ್ಗ** ಪರಂಪರೆಗೆ ಪರ್ಯಾಯವಾಗಿ ಹುಟ್ಟಿದ್ದರಿಂದ, ಹೊಸ ಮೌಲ್ಯಪದ್ಧತಿಯ ಸೈದ್ಧಾಂತಿಕ ವಿವರಣೆಗೆ ಪ್ರಯತ್ನ ಮಾಡಲಿಲ್ಲ. ಹಾಗಾಗಿ ಅದು ಕಾವ್ಯ ಮೀಮಾಂಸೆಯ ಬಗ್ಗೆ ಉದಾಸೀನ ತಾಳಿತು. ಹಾಗಾಗಿ ಸಾಹಿತ್ಯದ ಹೊಸ ಸಿದ್ಧಾಂತ ಹುಟ್ಟುವ ಎಲ್ಲ ಸಾಧ್ಯತೆಗಳಿದ್ದಾಗ್ಯೂ ಅದು ಹುಟ್ಟಲಿಲ್ಲ. ಜೊತೆಗೆ ಭಕ್ತಿ ಸಾಹಿತ್ಯ ಮೂಲತಃ ಬಂಡಾಯ ಸ್ವರೂಪದ್ದಾದ್ದರಿಂದ ಆಡಳಿತಗಾರರಿಗೂ ಅದು ಹಿತವಾಗಿರಲಿಲ್ಲ. ಅವರು ಸಂಸ್ಕೃತ ಕಾವ್ಯ ಮೀಮಾಂಸೆಗೆ (ಅಥವಾ ಪರ್ಶಿಯನ್, ಅರೇಬಿಕ್ ಭಾಷೆಗಳಿಗೆ) ಪ್ರಾಶಸ್ತ್ಯ ನೀಡಿದರು. ಹಾಗಾಗಿ ಭಾಷೆಗಳಲ್ಲಿ ಜೀವಂತ ಸಾಹಿತ್ಯ ನಿರ್ಮಾಣಗೊಂಡರೂ ವಿಮರ್ಶೆ ಸಂಸ್ಕೃತದಲ್ಲೆ ಉಳಿಯಿತು. ವಿಮರ್ಶೆಯ ಪರಿಕಲ್ಪನೆಗಳು ಭಾಷೆಗಳಿಗೆ ಹೊಸದೇನೂ ಆಗಿರಲಿಲ್ಲ. ಆದರೆ ಅದನ್ನು ಒಂದು ಸಂವಾದವಾಗಿ ಅವು ಬೆಳಸಲಿಲ್ಲ.

ವಿಸ್ಮರಣದ ನಂತರ

ವಸಾಹತುಶಾಹಿ ಆಡಳಿತ, ಪಾಶ್ಚಿಮಾತ್ಯ ವಿದ್ಯಾಭ್ಯಾಸ ಇವುಗಳಿಂದಾಗಿ ಮಾರ್ಗ, ದೇಸಿಯ ಸಂಬಂಧ ಈಗ - ಮಾರ್ಗ, ದೇಸಿ, ವಸಾಹತುಶಾಹಿಯ ಪ್ರಭಾವ - ಹೀಗೆ ಮೂರು ಭಾಗಗಳಾಗಿ ಒಡೆದಿದೆ. ಕಳೆದ ೧೫೦ ವರ್ಷಗಳಿಂದ ಭಾರತೀಯ ವಿಮರ್ಶೆ ವಸಾಹತುಶಾಹಿ ಪ್ರಭಾವವನ್ನು ಅರಗಿಸಿಕೊಳ್ಳುವ /ವಿರೋಧಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಇಂಗ್ಲೀಷಿನ ಹಾಗೂ ಪಾಶ್ಚಾತ್ಯ ಸಾಹಿತ್ಯದ ಜ್ಞಾನ ಭಾರತೀಯನಿಗೆ ಅಧಿಕಾರ, ವಿಶ್ವವಿದ್ಯಾಲಯದ ಕೆಲಸಗಳು, ಮುದ್ರಣ, ಪ್ರಕಾಶನ,

ಸರಕಾರದ ಅಧಿಕಾರ ಸ್ಥಾನಗಳು ದಕ್ಕಿಸಿ ಕೊಡುತ್ತಿದೆ. ಹಾಗಾಗಿ ವಿಮರ್ಶೆಯ ಪಾಶ್ಚಿಮಾತ್ಯತೆ ಈ ವರ್ಗಕ್ಕೆ ಪಟ್ಟ ಭದ್ರ ಹಿತಾಸಕ್ತಿ ಆಗಿದೆ.

ಭಾರತೀಯ ಬೌದ್ಧಿಕ ಹತಾರಿಗಳ ಪಾಶ್ಚಾತ್ಯೀಕರಣ, ವಸಾಹತುಶಾಹಿ ಮನೋಧರ್ಮವನ್ನು ಬೆಳೆಸಿದೆಯೇ ಹೊರತು, ಆಧುನಿಕತೆಯನ್ನಲ್ಲ. ವಿಮರ್ಶೆಯನ್ನು ಆಧುನೀಕರಿಸುವ ಒಂದೇ ಮಾರ್ಗ ಎಂದರೆ ಬ್ರಿಟಿಷ್ ಪೂರ್ವಕಾಲದಲ್ಲಿ ಅಪೂರ್ಣವಾಗಿ ಹಾಗೂ, ವಸಾಹತು ಯುಗದಲ್ಲಿ ನಿಂತು ಹೋದ ಪ್ರಕ್ರಿಯೆಯನ್ನ ಪುನರಾರಂಭಿಸುವುದಾಗಿದೆ. ಪಾಶ್ಚಾತ್ಯೀಕರಣ ನಮ್ಮ ಸಾಹಿತ್ಯಕ್ಕೆ ಹೊಸ ಶಕ್ತಿ ಕೊಡುತ್ತದೆ ಎಂಬುದು ಭ್ರಮೆ. ಅದು ಬರಿ ಅನುಕರಣಶೀಲ ಸಿದ್ಧಾಂತೀಕರಣಕ್ಕೆ ದಾರಿ ಮಾಡಿಕೊಡುತ್ತದೆ.

ನೇಟಿವಿಸಂ- ದೇಸಿವಾದ

ಮರಾಠಿ ಕಾದಂಬರಿಕಾರ ಬಾಲಚಂದ್ರ ನೇಮಾಡೆ ಅವರು ಪ್ರತಿಪಾದಿಸುವ **ದೇಸಿವಾದ** ಅಥವಾ **ನೇಟಿವಿಸಂ**, ವಿಮರ್ಶೆಯ ಇಂದಿನ ಅವಸ್ಥಾಂತರ ಸ್ಥಿತಿಗೆ ಒಂದು ಉತ್ತರವಾಗಬಹುದು ಎಂದು ದೇವಿಯವರು ಭಾವಿಸುತ್ತಾರೆ. ಸಾಹಿತ್ಯವನ್ನು ಪ್ರತಿಯೊಂದು ಭಾಷೆಯಲ್ಲಿ ವಿಶಿಷ್ಟವಾಗಿರುವ ಒಂದು ಚಟುವಟಿಕೆಯಾಗಿ ನೋಡುತ್ತದೆ ನೇಮಾಡೆಯವರ ದೇಸಿವಾದ. ಆ ಸಂವಾದದ ನಿಬಂಧನೆಗಳು ಆಯಾ ಭಾಷೆಯ ಒಳಗಿನಿಂದಲೆ ಹುಟ್ಟುತ್ತದೆ. ಬರವಣಿಗೆಯನ್ನು ಒಂದು ಸಾಮಾಜಿಕ ಕ್ರಿಯೆಯಾಗಿ ನೋಡಿ, ಅದು ಹುಟ್ಟಿದ ಸಮಾಜಕ್ಕೆ, ಅದರ ನೈತಿಕ ಮೌಲ್ಯಗಳಿಗೆ ಬದ್ಧತೆಯನ್ನು ಅಪೇಕ್ಷಿಸುತ್ತದೆ. ವಸಾಹತುಶಾಹಿ ಹಾಗೂ ಮಾರ್ಗ ಪದ್ಧತಿಗಳೆರಡನ್ನು ಬದಿಗೊತ್ತಿ, ಭಾಷಾ ವಿಶಿಷ್ಟವಾಗಿ ಸಾಹಿತ್ಯವನ್ನು ನೋಡುವಂತೆ ಮಾಡುತ್ತದೆ. ಮೊದಲೇ ನಿರ್ಮಿಸಿಕೊಂಡ ಪರಿಕಲ್ಪನೆಗಳಿಂದ ಸಾಹಿತ್ಯವನ್ನು ಒಳ್ಳೆಯ ಹಾಗೂ ಕೆಟ್ಟ ಸಾಹಿತ್ಯ ಎಂದು ನೋಡುವುದನ್ನು ವಿರೋಧಿಸುತ್ತದೆ.

ವಿಮರ್ಶೆ ಒಂದು ಪ್ರತ್ಯೇಕ ಚಟುವಟಿಕೆ ಅಲ್ಲ. ಒಂದು ಸಮಾಜದ ವಿಮರ್ಶಾ ಸಿದ್ಧಾಂತ ಆ ಸಮಾಜದ ವಿಶಾಲವಾದ ಜೀವನ ದೃಷ್ಟಿಯನ್ನು ಅವಲಂಬಿಸಿರುತ್ತದೆ. ಒಂದು ರೀತಿಯ ಭಾಷಿಕ ತಾತ್ವಿಕ ತಳಹದಿಯ ಮೇಲೆ ಸೃಷ್ಟಿಯಾದ ಸಾಹಿತ್ಯವನ್ನು, ಇನ್ನೊಂದು **ಪರಕೀಯ ವಿಮರ್ಶೆ**ಯಿಂದ ಅಭ್ಯಸಿಸುವುದು ಸಾಧ್ಯವಿಲ್ಲ ಎನ್ನುತ್ತಾರೆ ನೇಮಾಡೆಯವರು.

ಸಾಧಾರಣೀಕರಣ

ಗಣೇಶ್ ದೇವಿಯವರ ಈ ಪುಸ್ತಕಕ್ಕೆ ಹಲವಾರು ಮಿತಿಗಳೂ ಇವೆ. ಹೊಸತೊಂದನ್ನು ಹೇಳುವ ಪ್ರವಾದಿಯ ಹುರುಪಿನಲ್ಲಿ ಬರೆಯುವ ದೇವಿ, ಹಲವಾರು ಸಾಧಾರಣೀಕರಣಗಳನ್ನು ಯಾವುದೇ ಆಧಾರವಿಲ್ಲದೆ ಮಾಡಿ ಬಿಡುತ್ತಾರೆ. ಇಷ್ಟು ದೀರ್ಘಕಾಲದ ಇತಿಹಾಸದ ಬಗ್ಗೆ ಬರೆಯುವಾಗ ಅವರ

ವಾದಕ್ಕೆ ಅನುಕೂಲಕರವಲ್ಲದ ವಿಚಾರಗಳನ್ನು ಅಲಕ್ಷಿಸುತ್ತಾರೆ. ಈ ಪುಸ್ತಕವನ್ನು New Quest ನಲ್ಲಿ ವಿಮರ್ಶಿಸುವಾಗ ದೇವಯಾನಿ ಗಂಗೂಲಿ ಬರೆದ ಹಾಗೆ, ಪ್ರತಿ ಭಾಷೆಗೂ ತನ್ನದೇ ವಿಮರ್ಶಾ ಸಿದ್ಧಾಂತ ಬೇಕು ಎಂದು ಹೇಳುವಾಗ, ಪ್ರತ್ಯೇಕತೆಯ ಬೇಡಿಕೆ ಮೇಲೆದ್ದು ಭಾರತೀಯನನ್ನು ಕೂಪಮಂಡೂಕ ಸ್ಥಿತಿಗೆ ಒಯ್ಯಬಹುದು ಎಂಬ ಅಪಾಯವನ್ನು ಅವರು ಮನಗಾಣುವುದಿಲ್ಲ.

ಏಕತೆ ಹಾಗೂ ಪ್ರತ್ಯೇಕತೆ ಪ್ರತಿ ಸಮಾಜದ, ಇತಿಹಾಸದಲ್ಲಿ ಪರ್ಯಾಯವಾಗಿ ಬರುವ ಮಾನಸಿಕ ಸ್ಥಿತಿಗಳು. ಸ್ವಾತಂತ್ರ ಹೋರಾಟದ ಕಾಲದಲ್ಲಿ ಏಕತೆಯ ಮನೋಭಾವ ಪ್ರಬಲವಾಗಿದ್ದರೆ ಈಗ, ಪ್ರತ್ಯೇಕತೆಯ ಭಾವನೆ ಜಾಗೃತವಾಗಿದೆ. ಕೇವಲ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಇತರ ಭಾಗಗಳಲ್ಲೂ ಇದೇ ಮನೋಸ್ಥಿತಿಯನ್ನು ಈಗ ಕಾಣುತ್ತೇವೆ. ರಾಜಕೀಯವಾಗಿ ಪಂಜಾಬ್, ಕಾಶ್ಮೀರ, ಝಾರ್ಖಂಡ್ ಮುಂತಾದ ಬೆಳವಣಿಗೆಯಲ್ಲಿ ಪ್ರತ್ಯೇಕತೆಯ ಸಾಧ್ಯತೆಯನ್ನ ಗುರುತಿಸಬಹುದಾದರೆ, ಸಾಂಸ್ಕೃತಿಕವಾಗಿ ಪ್ರತಿಯೊಂದು ಜಾತಿ, ಪಂಗಡ, ಗುಂಪು ಇಂದು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವ, ಘೋಷಿಸಿಕೊಳ್ಳುವ ಪ್ರಯತ್ನ ಮಾಡುತ್ತಿವೆ. ಪ್ರಬಲವಾದ ಇಂದಿನ ಸಂಪರ್ಕ ಮಾಧ್ಯಮಗಳು ನಮ್ಮ ಇರುವಿಕೆಯನ್ನು ಅಳಿಸಿ ಹಾಕುವ ಹೆದರಿಕೆ ಮೇಲೆದ್ದಿದೆ. ವಿವಿಧ ಜಾತಿ ಪಂಗಡಗಳ ಸಂಘಗಳ ಸ್ಥಾಪನೆ, ಮರೆತು ಹೋದ ಪದ್ಧತಿಗಳು, ಪೂಜಾವಿಧಿಗಳು, ಉಡುಗೆ ತೊಡುಗೆಗಳು ಇವುಗಳಿಗೆ ಪುನರ್ಜೀವ ಕೊಡುವ ಪ್ರಯತ್ನ ಇವನ್ನೆಲ್ಲ **ಐಡೆಂಟಿಟಿ ಕ್ರೈಸಿಸ್** ಗೆ ಪ್ರತಿಕ್ರಿಯೆಯಾಗಿ ನೋಡಬಹುದು. **ದೇಸಿವಾದ** ಕೂಡಾ ಪ್ರತ್ಯೇಕತಾ ಮನೋಭಾವದ ಪ್ರತೀಕವಾಗಲಿಕ್ಕೆ ಸಾಧ್ಯವಿರುವುದರಿಂದ ದೇಸೀವಾದದ ಸಿದ್ಧಾಂತ ಮಂಡಿಸುವಾಗ ಇರುವ ಅಪಾಯದ ಬಗ್ಗೆ ಎಚ್ಚರ ವಹಿಸುವುದು ಜರೂರಾಗಿದೆ.

ಯಾವುದೇ ಭಾಷೆಯೂ, ಸಂಸ್ಕೃತಿಯೂ ಪೂರ್ಣ ಪ್ರತ್ಯೇಕವಾಗಿ ಬೆಳೆಯುವುದಿಲ್ಲ. ವಿವಿಧ ರೀತಿಯ ಪ್ರಭಾವ, ಒತ್ತಡ, ಹಾಗೂ ಪ್ರತಿಕ್ರಿಯೆ ಎಲ್ಲವೂ ಸಮಾಜದ ಸಹಜ ಸ್ಥಿತಿಗಳು. ದೇಸಿವಾದ ಇದುವರೆಗೆ ಅಲಕ್ಷ್ಯಕ್ಕೆ ಗುರಿಯಾದ ಅಂಶಗಳಿಗೆ ಪ್ರಾಮುಖ್ಯತೆ ನೀಡುತ್ತದೆ ನಿಜ; ಆದರೆ ಅಷ್ಟೇ ನಿಜವಾದ ಸಮಾನ ಅಂಶಗಳನ್ನು ಅದು ಅಲಕ್ಷಿಸುತ್ತದೆ. ಜೊತೆಗೆ ಈ ಪುಸ್ತಕದ ಮೊದಲ ಭಾಗದಲ್ಲಿ ಬಂದ ಎಷ್ಟೋ ವಿಚಾರಗಳು ದೇಸಿವಾದವನ್ನು ಪುಷ್ಟೀಕರಿಸುವುದಿಲ್ಲ. ಇಷ್ಟಾಗಿಯೂ ದೇವಿಯವರು ಈ ಪುಸ್ತಕದಲ್ಲಿ ಎತ್ತಿರುವ ಮೂಲಭೂತ ಪ್ರಶ್ನೆಗಳಿಗೆ, ವಿಮರ್ಶೆ ಇಂದು ಉತ್ತರವನ್ನು ಕಂಡುಕೊಳ್ಳಲೇಬೇಕು. ಈ ಪುಸ್ತಕದ ನಿಜವಾದ ಮಹತ್ವ ದೇವಿಯವರು ಕೊಡುವ ಉತ್ತರಗಳಿಗಿಂತ ಅವರು ಎತ್ತಿರುವ ಪ್ರಶ್ನೆಗಳಲ್ಲಿ ಇದೆ.

ಬುದ್ಧಿ-ಭಾವ ಸಂಪೃಕ್ತಿಯ ನಾಟಕ,

ಅಗ್ನಿ ಮತ್ತು ಮಳೆ

ಬಿ. ಆರ್. ವೆಂಕಟರಮಣ ಐತಾಳ

ಅಗ್ನಿ ಮತ್ತು ಮಳೆ (ನಾಟಕ) ಲೇ : ಗಿರೀಶ ಕಾರ್ನಾಡ್, ಪ್ರಕಾಶಕರು : ಮನೋಹರ ಗ್ರಂಥಮಾಲಾ, ಧಾರವಾಡ - ೧, ಪುಟ. ೧೧೪ +೧೦ = ೧೨೪ ಬೆಲೆ ರೂ. ೩೫

ನಮ್ಮಲ್ಲಿ ಪ್ರಾಚೀನ ಸಂಸ್ಕೃತ ನಾಟಕಗಳಿವೆ; ಸಾಂಪ್ರದಾಯಿಕ ರಂಗಭೂಮಿಯ ವಿಭಿನ್ನ ಮಾದರಿಗಳಿವೆ; ಪರಂಪರೆಯ ಅರಿವಿದೆ; ಪಾಶ್ಚಿಮಾತ್ಯ ವಾಸ್ತವವಾದದ ಇತಿಮಿತಿಗಳ ಅರಿವೂ ಇದೆ. ಹೀಗಿದ್ದೂ, ಬಹುಶಃ ನಾವಿನ್ನೂ ವಾಸ್ತವವಾದದ ಹಿಡಿತದಿಂದ ತಪ್ಪಿಸಿಕೊಂಡಿಲ್ಲ. ನಾವೆಲ್ಲ ಕಾರಣಕ್ಕೆ ಕಟ್ಟುಬಿದ್ದವರು; ಅನುಭವ ಬಿಟ್ಟು ಅರ್ಥದ ಬೆನ್ನುಹತ್ತಿದವರು. ಹಾಗಾಗಿ, ಕೆಲವೊಮ್ಮೆ ಕೆಲವು ವಿಶಿಷ್ಟ ಕಲಾಕೃತಿಗಳ ಜೊತೆ ಮುಖಾಮುಖಿಯಾಗಲು ಕಷ್ಟಪಡುತ್ತೇವೆ. ಇಲ್ಲವೆ, ಅಂಥವನ್ನು ನಮ್ಮ ವ್ಯಾಖ್ಯಾನದ ಪರಿಧಿಯೊಳಗೆ ಎಳೆದು ತರಲು ಪ್ರಯತ್ನಿಸುತ್ತೇವೆ. ಅದೂ ಸಾಧ್ಯವಾಗದಿದ್ದರೆ ಬೇರಾವುದೇ ಕಾರಣಗಳನ್ನೊಡ್ಡಿ ಆ ಕೃತಿಯನ್ನೇ ನಗಣ್ಯವಾಗಿಸುತ್ತೇವೆ. ರಂಗಭೂಮಿ ಮತ್ತು ನಾಟಕವಿಮರ್ಶೆಯಲ್ಲಿ ಹೀಗಾಗುವುದು ಸಾಮಾನ್ಯವಾಗಿಬಿಟ್ಟಿದೆ. ಅದು ಇಂದಿಗೆ ಅಥವಾ ನಮಗೆ **ಅಪ್ರಸ್ತುತ** ಎಂಬ ಒಂದು ಮಾತೇ ಸಾಕಲ್ಲ!

ಸದ್ಯ, ಗಿರೀಶ ಕಾರ್ನಾಡರ ಹೊಸ ನಾಟಕ **ಅಗ್ನಿ ಮತ್ತು ಮಳೆ** ಎಲ್ಲೆಡೆ ಚರ್ಚಿತವಾಗುತ್ತಿದೆ. ರಚನಾವಿನ್ಯಾಸದ ವಿಶೇಷತೆ, ನಾಟಕೀಯ ಗುಣಗಳು, ಮೂಲಕಥೆಯಿಂದ ಮಾಡಿಕೊಂಡ ಮಾರ್ಪಾಡುಗಳ ಔಚಿತ್ಯ, ಮೂಲಕಥೆಯೊಂದಿಗಿನ ಸೃಷ್ಟ್ಯಾತ್ಮಕ ಮುಖಾಮುಖಿಯಲ್ಲಿ ನಾಟಕಕಾರರ ಧೋರಣೆ ಹಾಗೂ ಸೋಲು ಗೆಲುವು ಮುಂತಾದ ವಿಷಯಗಳ ಕುರಿತು ಚರ್ಚೆ ನಡೆದಿದೆ. ಚರ್ಚೆಯ ಬಹ್ವಂಶ ಒಟ್ಟಾರೆ ಈ ಕೃತಿರಚನೆಯಲ್ಲಿ ನಾಟಕಕಾರರ ಧೋರಣೆ ಹಾಗೂ ನಿಲುವು ಇದರ ಸುತ್ತುಮುತ್ತಲೇ ಕೇಂದ್ರೀಕೃತವಾಗಿರುವುದು ಗಮನಿಸಬೇಕಾದ ಅಂಶ. ಅಂದರೆ ನಮ್ಮ ಪುರಾಣದ ವಸ್ತುವನ್ನು ಸರಕಾಗಿ ತೆಗೆದುಕೊಂಡು, ಪಶ್ಚಿಮದ ಮನಸ್ಸಿಗಾಗಿ ಬರೆಯುವ ಸಾಂಸ್ಕೃತಿಕ ರಾಜಕಾರಣ ಮತ್ತು ಸರಳೀಕೃತ ಓರಿಯಂಟಲಿಸ್ಟ್ ಧೋರಣೆಯ ನೋಟಗಳನ್ನು ಹೆಚ್ಚಿನ ಟೀಕಾಕಾರರು ಗುರುತಿಸುತ್ತಾರೆ.

ಕಾರ್ನಾಡರಿಗೆ **ನಾಟಕವೆ ನಾಟಕದ ವಸ್ತು**. ಅದು ಈ ಕೃತಿಯ ರಚನೆಯಲ್ಲಿ ಪರಿಪೂರ್ಣವಾಗಿ ವ್ಯಕ್ತವಾಗಿದೆ ಎಂದು ರಾಚನಿಕ ವಿನ್ಯಾಸದ ಮಹತ್ವದ ಬಗೆಗೆ ಮಾತನಾಡುತ್ತ ಕುರ್ತಕೋಟಿಯವರು ಹೇಳಿದ್ದಾರೆ. ಮಹಾಭಾರತದ ವನಪರ್ವದಲ್ಲಿ ಬರುವ ಯವಕ್ರೀತನ ಆಖ್ಯಾನದಿಂದ ಕತೆಯನ್ನು ಆಯ್ದುಕೊಂಡು ನಾಟಕಕ್ಕೆ ಅಳವಡಿಸುವಾಗ ಮಾಡಿಕೊಂಡ ಬದಲಾವಣೆಗಳ ವಿಷಯವಾಗಿ ಆಮೂರ ಅವರು ವಿವರವಾಗಿ ಚರ್ಚಿಸಿದ್ದಾರೆ. ಆದ್ದರಿಂದ ಈ ಅಂಶಗಳನ್ನು ನಾನು ವಿವರಿಸಲು ಹೋಗುವುದಿಲ್ಲ.

ಇಲ್ಲಿ ಯಜ್ಞ ಮಾತ್ರವಲ್ಲ, ಯಜ್ಞಮಾಡುವವರ ಕಥೆಯಿದೆ. ನಾಟಕ ಮಾತ್ರವಲ್ಲ, ನಾಟಕ ಆಡುವವರ ಕಥೆಯಿದೆ. ಆಡುವ ನಾಟಕದ ಕಥೆ ಕೂಡಾ ಪ್ರಧಾನ ಆಖ್ಯಾನಕ್ಕೆ ಸಹಸ್ಪಂದಿಯಾದ **ರೂಪಕ**ವಾಗಿದೆ. ಈ ಮೂರಕ್ಕೂ ಅವಿನಾ ಸಂಬಂಧವಿದೆ. ಒಟ್ಟಂದದಲ್ಲಿ ವೈದಿಕ-ಅವೈದಿಕರ ಕರ್ಮ, ಆಚಾರ, ನಂಬಿಕೆಗಳ **ಸಮ -ವಿಷಮ** ಸಂಬಂಧ ಹಾಗೂ ತಿಕ್ಕಾಟಗಳಿವೆ. ದೇವತೆಗಳು, ರಾಜರು, ಋತ್ವಿಜರು, ಸಂಹಿತೆಗಳು, ನಿಷಾದರು, ಆಟದವರು, ಪ್ರೇಮಿಗಳು, ಕರ್ಮಠರು, ಮತ್ತು ಬ್ರಹ್ಮರಾಕ್ಷಸ-ಇವರೆಲ್ಲ ಕೂಡಿದ ಈ ನಾಟಕದ ಪ್ರಪಂಚವು ಇಂದಿನ ಎಲ್ಲ ಸಂಕೀರ್ಣ ಚಿಂತಾಗತಿಯ ಸಮಾಜಕ್ಕೊಂದು ರೂಪಕವಾಗಿಯೇ ನಿರ್ಮಿತವಾಗಿದೆ. ನಾಟಕದಲ್ಲಿ ಯಜ್ಞ ಅಥವಾ ಸಂಸ್ಕೃತಿಯ ಬಗೆಗಿನ ನಂಬಿಕೆಯ ಕೊರತೆಯಿದೆ ಎಂದು ಅನ್ನಿಸುವುದಿಲ್ಲ. ಇಲ್ಲಿ ಅರ್ಥೈಸುವ, ವ್ಯಾಖ್ಯಾನಿಸುವ ದಾರಿ ಬೇರೆಯಾಗಿದೆ. ಹೊಸ ವ್ಯಾಖ್ಯಾನಗಳ ಹೊಳವುಗಳಿವೆ.

ದೀರ್ಘಕಾಲೀನ ಸತ್ರಯಾಗಗಳ ಸಂದರ್ಭದಲ್ಲಿ ಅಪರಾಹ್ನದ ಹೊತ್ತು, ಕಥನ-ಪ್ರವಚನಗಳು ಮಾತ್ರವಲ್ಲದೆ ನೃತ್ಯ ಗೀತ ನಾಟ್ಯಗಳನ್ನು ಯೋಜಿಸುತ್ತಿದ್ದರು ಎನ್ನುವುದಕ್ಕೆ ವಾಜಸನೇಯಿ ಸಂಹಿತೆಯಲ್ಲಿ ಉಲ್ಲೇಖಗಳು ಸಿಗುತ್ತವೆ. ಪ್ರಸ್ತುತ ಇಲ್ಲಿ **ನಾಟಕದೊಳಗಿನ ನಾಟಕವಾಗಿ** ಬರುವ **ಇಂದ್ರವಿಜಯ** ದ ಕಥೆ ಮೂಲತಃ ಋಗ್ವೇದಕ್ಕೆ ಸಂಬಂಧಿಸಿದ್ದು. ಅನಂತರ ಮಹಾಭಾರತ ಪುರಾಣ ಬ್ರಾಹ್ಮಣಗಳಲ್ಲಿ ಬೇರೆ **ರೂಪು** ಪಡೆದು ಬೆಳೆದುದಾಗಿದೆ. ಕಾರ್ನಾಡರು ಇಂದ್ರ, ವೃತ್ರ ಮುಂತಾದ ಪಾತ್ರಗಳ ಚಿತ್ರಣದಲ್ಲಿ ವೇದ-ನಿರುಕ್ತಗಳಲ್ಲಿ ಆಯಾ ಪದಗಳಿಗಿರುವ ಅರ್ಥವಿಸ್ತಾರಗಳನ್ನೂ, ಆಯಾ ಪದ ಮತ್ತು ಪಾತ್ರಗಳು ಧ್ವನಿಸುವ ಗುಣವಿಶೇಷಗಳನ್ನೂ ಉಪಯೋಗಿಸಿಕೊಂಡಿದ್ದಾರೆ - ಎನ್ನುವುದಕ್ಕೆ ಕೃತಿಯಲ್ಲಿ ಪುರಾವೆಗಳಿವೆ. ಈ ಬಗ್ಗೆ ಸ್ವಲ್ಪ ವಿವರವಾಗಿ ಹೇಳಬೇಕು.

ಋಗ್ವೇದದಲ್ಲಿ ತೀರಾ ಪ್ರಮುಖ ದೇವತೆಯಾಗಿದ್ದ ವರುಣ ಮೂಲತಃ ಒಬ್ಬ ಆದಿತ್ಯ. ಮಿತ್ರನ ಜೊತೆಯಲ್ಲಿ ಮಿತ್ರಾವರುಣ ಎಂದೇ ಪ್ರಸಿದ್ಧ. ಮಿತ್ರ ಹಗಲಿಗೆ, ವರುಣ ರಾತ್ರಿಗೆ ಅಧ್ಯಕ್ಷರು. ವರುಣ ಇಡೀ ಆಕಾಶವನ್ನೇ ವ್ಯಾಪಿಸಿದ ದೇವತೆ. ವಿಶ್ವ, ಮರ್ತ್ಯ ಮತ್ತು ದೇವತೆಗಳ ಒಡೆಯ. ಅಧಿಕಾರ, ಜ್ಞಾನ, ನ್ಯಾಯಗಳ ಅಧಿಪತಿ. ಆಧ್ಯಾತ್ಮಿಕತೆಯ ಪ್ರತೀಕ. ಅಮೃತತ್ವದ ಪಾಲಕ. ನೀರು, ಸಮುದ್ರಗಳ ಅಭಿಮಾನಿದೇವತೆ. ಶಿಕ್ಷೆ -ಕ್ಷಮೆ, ಪ್ರೀತಿ -ಕರುಣೆಗಳ ಅಧಿದೇವತೆ. ಇವನ ಆಪತ್ವದಲ್ಲಿ ಅಗ್ನಿಯೂ ಅಡಗಿದೆ (ಬಡಬಾನಲ). ಸ್ನೇಹ (ನೀರು)ಮಯಿಯಾದ ಇವನನ್ನು ಪೌರುಷದಿಂದ ಹಿಮ್ಮೆಟ್ಟಿಸಿ

ಬಲಿಷ್ಠನಾದ ಇಂದ್ರ ಪ್ರತಿಷ್ಠಿತನಾಗುತ್ತಾನೆ. ಇಂದ್ರನೇ ರಕ್ಷಕನೂ, ಮಳೆಗರೆವ ಪರ್ಜನ್ಯನೂ ಆಗುತ್ತಾನೆ. ಇಂದ್ರ ಅಂದರೆ (ಶತ್ರುಗಳನ್ನು) ಮರ್ದಿಸಿ ಹತ್ತಿಕ್ಕುವವ, ಹನಿಗರೆಯುವವ ಎಂದು ಅರ್ಥ. ಅಧಿಕಾರ, ಬಲ, ಪೌರುಷ, ಇಂದ್ರಿಯ ಸತ್ವಗಳ ಪ್ರತೀಕ. ಯಾವತ್ತೂ ಸೋಮಪಾನಮತ್ತನಾಗಿ ಯುದ್ಧನಿರತನಾಗಿ ಅಧಿಕಾರ ಚಲಾಯಿಸುವ ಬೊಜ್ಜುಮೈಯವ ; ದೇವರಾಜ.

ತ್ವಷ್ಟೃಬ್ರಹ್ಮನ ಮಗನಾದ ವಿಶ್ವರೂಪ ದೇವತೆಗಳ ಆಚಾರ್ಯ. ಈತನ ತಾಯಿ ರಾಕ್ಷಸವಂಶದವಳು. ಇವನಿಗೆ ರಾಕ್ಷಸರಲ್ಲಿ ವಿಶೇಷ ಮಮತೆಯಿತ್ತು. ಗುಟ್ಟಾಗಿ ರಾಕ್ಷಸರಿಗೂ ಹವಿರ್ಭಾಗ ಸಲ್ಲಿಸುತ್ತಿದ್ದ. ಇದನ್ನು ತಿಳಿದ ಇಂದ್ರ ಇವನನ್ನು ಮೋಸದಿಂದ ಕೊಲ್ಲುತ್ತಾನೆ. ಆಗ **ವಿಶ್ವರೂಪ** ನ ಮೂರು ತಲೆಗಳು ತಿತ್ತಿರಿ, ಕಪಿಂಜಲ, ಗೊರವಂಕ ಪಕ್ಷಿಗಳಾಗಿ ಹಾರಿಹೋಗುತ್ತವೆ. **ಬ್ರಹ್ಮಹತ್ಯೆಯ ಶಾಪ** ಇಂದ್ರನನ್ನು **ಆವರಿಸುತ್ತದೆ**. (ನಾಟಕದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿವೆ). ಕ್ರುದ್ಧನಾದ ತ್ವಷ್ಟೃ ಇಂದ್ರನ ಮೇಲೆ ಸೇಡು ತೀರಿಸಿಕೊಳ್ಳಲು ವೃತ್ರನನ್ನು ಸೃಷ್ಟಿಸುತ್ತಾನೆ. ವೃತ್ರಾಸುರನಿಂದ ಹಲವು ರೀತಿಯಲ್ಲಿ ಪೀಡಿತನಾಗಿ ಸೋಲುಂಡ ಇಂದ್ರನು ಕೊನೆಗೆ 'ವಜ್ರ' ಎಂಬ ವಿಶೇಷ ಆಯುಧ ಪಡೆದು ಅವನನ್ನು ಸಂಹರಿಸುತ್ತಾನೆ. ಇಲ್ಲಿ ರೈಭ್ಯನಿಂದ ಬ್ರಹ್ಮರಾಕ್ಷಸನ ಸೃಷ್ಟಿಯನ್ನು ನೆನಪಿಸಿಕೊಳ್ಳಬೇಕು. ಒಂದು ಅರ್ಥದಲ್ಲಿ ವೃತ್ರನೂ ಬ್ರಹ್ಮರಾಕ್ಷಸನೇ - ಬ್ರಹ್ಮಹತ್ಯೆಯ ಸೇಡಿಗಾಗಿ ಬ್ರಾಹ್ಮಣನಿಂದ ಸೃಷ್ಟಿಸಲ್ಪಟ್ಟ ರಾಕ್ಷಸ.

ವೃತ್ರ ಎಂದರೆ ಆವರಿಸಿಕೊಳ್ಳುವವ : ಬರಗಾಲ ಮತ್ತು ಕತ್ತಲೆಯ ರೂಪ :ಅಹಿಯಾಗಿ (ಭಾರೀ ಗಾತ್ರದ ಹಾವು) ಭೂಮ್ಯಾಕಾಶಗಳಲ್ಲಿ ವ್ಯಾಪಿಸಿ ನದಿಗಳಿಗೆ ಒಡ್ಡುಕಟ್ಟಿ ನೀರಿನ ಹರಿವನ್ನು ತಡೆಯುವವ: ಆಕಾಶವನ್ನು ಬೆಳಗಿ ಶುಚಿಗೊಳಿಸುವ ನೀರು ಮಳೆಯಾಗಿ ಬೀಳದಂತೆ ಮೋಡಗಳಲ್ಲಿ ಹಿಡಿದಿಟ್ಟುಕೊಂಡವ : ಕಾಳಮೇಘನಾಗಿ ಕತ್ತಲು ಕವಿಯುವಂತೆ ಮಾಡುವವ :ಕತ್ತಲೆ, ಮೋಡ, ಶಿಲೆ, ಪರ್ವತಗಳೆಂದೂ ಅರ್ಥವಿವೆ. ಇಂದ್ರ ಮಿಂಚೆಂಬ ತನ್ನ ವಜ್ರಾಯುಧದಿಂದ, ಪುರ-ಪರ್ವತ-ವೃತ್ರಗಳೆಂಬ ಮೋಡಗಳನ್ನು ಘಾತಿಸಿ ಅಡಗಿದ್ದ ನೀರು ಮಳೆಯಾಗಿ ಹೊರಬರುವಂತೆ, ಮೋಡ ಸರಿದು ಕತ್ತಲು ಹರಿದು ಬೆಳಕಾಗುವಂತೆ ಮಾಡುತ್ತಾನೆ. ಆದರಿಂದ ವೃತ್ರಾರಿ, ಪುರಂದರ ಮೊದಲಾದ ಹೆಸರು ಪಡೆಯುತ್ತಾನೆ. ಇಂದ್ರ ವೃತ್ರರ ಕಾಳಗದಲ್ಲಿ ವಜ್ರಾಘಾತ - ಮಿಂಚಿನ ಹೊಡೆತ -ದಿಂದ ಉಂಟಾಗುವ ಭೀಕರ ಸದ್ದುಗಳೇ ಗುಡುಗು ಸಿಡಿಲುಗಳು. ನಾಟಕದ ಕೊನೆಯಲ್ಲಿ ಮಳೆಯಾಗುವಾಗ ಗುಡುಗಿನ ಜೊತೆ ಬ್ರಹ್ಮರಾಕ್ಷಸನ ಅಟ್ಟಹಾಸವನ್ನು ಸಮೀಕರಿಸಿಕೊಳ್ಳಬೇಕು. ಇನ್ನೊಂದು ನೆಲೆಯಲ್ಲಿ ಇಂದ್ರ - ವೃತ್ರರು ಆತ್ಮ ಮತ್ತು ಅಹಂಕಾರಗಳ ಪ್ರತೀಕ ಕೂಡಾ ಹೌದು.

ಜಾತವೇದ, ವೈಶ್ವಾನರ ಮೊದಲಾದ ರೂಪಗಳಲ್ಲಿ ವರ್ಣಿಸಲ್ಪಡುವ ಅಗ್ನಿ, ದೇವತೆಗಳ ಪುರೋಹಿತ, ಕವಿ ಹಾಗೂ ಇಂದ್ರನ ಅವಳಿ ಅಸ್ತಿತ್ವ ಕೂಡ ಆಗಿದ್ದಾನೆ. ಇಂದ್ರನಿಗೆ ಸಲ್ಲುವ ಅರ್ಚನೆ ಹವಿಸ್ಸು ಅಗ್ನಿಯ ಮೂಲಕವೇ ಸಾಗಬೇಕು. ಇವನ ಅಸ್ತಿತ್ವಗಳು ಹಲವು ವಿಧ. ಒಂದೆಡೆ ಜ್ಞಾನ,

ಪ್ರಕಾಶ, ತೇಜಸ್ಸು; ಇನ್ನೊಂದೆಡೆ ಬಡಬಾಗ್ನಿ, ಬಿಸಿಲು ಬೆಂಕಿ ಹಸಿವು ದಾಹ ಬರ. ಬಿಸಿಲಿನ ಕಾವಿಗೇ ನೀರು ಮೋಡವಾಗಿ ವೃತ್ರವಾಗಬೇಕು. ಇಂದ್ರನಿಂದ ಮತ್ತೆ ಮಳೆಯಾಗಿ ಸುರಿಯಬೇಕು. ದ್ಯಾವಾ - ಪೃಥಿವಿಗಳ ದಿವ್ಯ ಸಂಭೋಗದಲ್ಲಿ ಹೊಸ ಸೃಷ್ಟಿಗೆ ಅನುವಾಗಬೇಕು. ಬರದ ಗಾರು ಇಂಗಿ ತಂಪಾಗಬೇಕು. ಬದುಕು (ಜೀವನ =ನೀರು)ಸಾಗಬೇಕು. ಇದು ಅಗ್ನಿ ಮತ್ತು ಅಮೃತ ತತ್ವಗಳ ಸಂಬಂಧ. ಸೃಷ್ಟಿಸಾಧಕವಾದ ಯಜ್ಞಕ್ರಿಯೆಯ ಮೂಲ ಅರ್ಥಕೂಡ ಇದೇ. ಪ್ರಸ್ತುತ ನಾಟಕದಲ್ಲಿನ ಆಟದ ಕಥೆ ಪ್ರಧಾನ ಆಖ್ಯಾನದ ರೂಪಕ ಮಾತ್ರವಲ್ಲದೆ, ಮಳೆಗಾಗಿ ನಡೆಯುವ ಯಜ್ಞದ ಕ್ರಿಯಾವಿಧಿಯ ರೂಪಕವೂ ಆಗಿದೆ. ಆದ್ದರಿಂದಲೇ ನಾಟಕವು ತಾತ್ವಿಕವಾಗಿಯೂ, ತಾಂತ್ರಿಕವಾಗಿಯೂ ಚಾಕ್ಷುಷಯಜ್ಞ. ಇಡೀ ನಾಟಕದಲ್ಲಿ, ನಾಟಕ, ಯಜ್ಞ, ಅಗ್ನಿ, ಮಳೆ - ಇವೆಲ್ಲ ವಿವಿಧ ನೆಲೆಯ ಅರ್ಥವಿಸ್ತಾರಗಳನ್ನು ಹೊಂದಿವೆ. ಹೀಗೆ ಕಾರ್ನಾಡರಲ್ಲಿ ಯವಕ್ರೀತನಿಂದ ಸ್ಫೂರ್ತಿಗೊಂಡು ಮೊಳೆತ ನಾಟಕ ಅಷ್ಟಕ್ಕೇ ನಿಲ್ಲದೆ ಅಗ್ನಿ ಮತ್ತು ಮಳೆ ಯಾಗಿ ಬೆಳೆದು ಸಾರ್ಥಕವಾಗಿದೆ.

ಮೂರನೆಯ ಅಂಕದಲ್ಲಿ ಜಾತಿಗಾರನು ಅರವಸುವಿಗೆ ನಾಟಕದ ಪಾಠ ಹೇಳುವ ಸಂದರ್ಭದಲ್ಲಿ ಮಾತ್ರ ನಾಟಕದ ಬಂಧ ಸಡಿಲವಾಗಿ ಕಾವು ಕಳೆದುಕೊಳ್ಳುತ್ತದೆ. ಇದೇ ಅಂಕದಲ್ಲಿ ಅರವಸು-ನಿತ್ತಿಲೆಯರ ಸಂಭಾಷಣೆಯ ಬಹುಭಾಗ ಬರೀ ಮಾತುಗಳಾಗಿ ನಿಲ್ಲುತ್ತವೆ. ಆ ಮಾತುಕತೆ ಕೃತಿಗೆ ಅವಶ್ಯಕವೇ ಆದರೂ ಸ್ವಲ್ಪ ತೆಳುವಾಗಿ ಕಂಡುಬರುವುದರಿಂದ ಏನೋ ಕೊರತೆ ಅನ್ನಿಸುತ್ತದೆ. ಬೇರೆಲ್ಲೂ ಇಂತಹ ಸಮಸ್ಯೆಗಳು ಇಲ್ಲ.

ಬಹುಶಃ ವಿಸ್ತಾರವಾದ ಕಾದಂಬರಿಯಾಗುವಷ್ಟು ಹರವಿನ ವಿವಿಧ ಆಯಾಮಗಳ ಪ್ರಧಾನ ಇತಿವೃತ್ತದೊಡನೆ ಸರಿಸಮನಾಗಿ ಸಾಗುವ ಇತರ ಮೂರು -ನಾಲ್ಕು ಪ್ರಾಸಂಗಿಕ ಇತಿವೃತ್ತಗಳ ಸಂಯೋಜನೆಯಲ್ಲಿ ಗಟ್ಟಿಯಾದ ನಾಟಕೀಯ ಬಂಧವನ್ನು ಕಟ್ಟಿದ್ದು ಒಂದು ದೊಡ್ಡ ಸಾಧನೆ. ವಿವಿಧ ಹಿನ್ನೆಲೆಯ ಪಾತ್ರ ಸನ್ನಿವೇಶಗಳಿಂದ ಕೂಡಿದ ಬೇರೆ ಬೇರೆ ಕಥಾನಕಗಳ ಹಾಗೂ ಸಂವಿಧಾನ ಶಿಲ್ಪದ ನಡುವೆ ಕಾಣುವ ಅನ್ಯೋನ್ಯ ಸಂಬಂಧ ನಾವು ಪರಿಗಣಿಸಬೇಕಾದ ಮುಖ್ಯ ಅಂಶ. ಒಟ್ಟು ಶಿಲ್ಪದಲ್ಲಿ ಹಲವು ಉತ್ತುಂಗ ಘಟ್ಟಗಳನ್ನು ಸೇರಿಸಿದ್ದರೂ ಅವೆಲ್ಲ ಕೊನೆಯ ಮಹಾ-ಉತ್ತುಂಗಕ್ಕೆ ಸಂವಾದಿಯಾಗಿಯೇ ಇವೆ. ಪೂರ್ವರಂಗ ಮತ್ತು ಉತ್ತರರಂಗಗಳು ನಾಟಕದಲ್ಲಿನ ವರ್ತಮಾನದ ಪ್ರಧಾನ ಘಟನೆಯಾಗಿದ್ದು, ನಡುವಣ ಮೂರು ಅಂಕಗಳಲ್ಲಿ ಹಿಂದಿನ ಘಟನಾವಳಿಗಳು ಕಥಿಸಲ್ಪಡುತ್ತವೆ. ಪೂರ್ವರಂಗದಲ್ಲಿ ಯಜ್ಞಮಂಟಪದ ಸನಿಹ ಜಾತಿಗಾರನ ತಂಡದವರು ನಾಟಕ ಸಿದ್ಧತೆಯಲ್ಲಿರುವಾಗ ನಟನಾಗಿ ರಾಕ್ಷಸನ ಮೊಗವಾಡ ಧರಿಸತೊಡಗಿದ ಅರವಸುವಿನ ಮಾತಿನೊಡನೆ ಕಥೆ ನೇರ ಒಂದು ತಿಂಗಳು ಹಿಂದಕ್ಕೆ ಹಾರುತ್ತ ಮೊದಲನೆಯ ಅಂಕಕ್ಕೆ ಜಾರಿಕೊಳ್ಳುತ್ತದೆ. ಉತ್ತರ ರಂಗದ ಅಂಕಾವತಾರವೂ ಹೀಗೆಯೇ ಆಗುವುದನ್ನು ಗಮನಿಸಬೇಕು. ಮೂರನೆಯ ಅಂಕದ ಕೊನೆಯಲ್ಲಿ ಎಲ್ಲಿಯೋ ನಿತ್ತಿಲೆಯೊಡನೆ ಮಾತನಾಡುತ್ತಿದ್ದ ಅರವಸು ಕೂಡಲೇ ಜಾತಿಗಾರನ ರುಜುವಾತು

ಸೂಚನೆಯಂತೆ ಮೊಗವಾಡ ಧರಿಸಲು ತಯಾರಾಗಿ ಪಾತ್ರದ ಆವಾಹನೆ ಮಾಡಿಕೊಳ್ಳುವಲ್ಲಿಗೇ ಕಾಲ-ದೇಶಗಳ ಬದಲಾವಣೆಯಾಗುತ್ತದೆ. ಉತ್ತರ ರಂಗದಲ್ಲಿ ಮತ್ತೆ ಇಡೀ ವಸ್ತುವಿನ ಪ್ರತಿರೂಪದಂತಿರುವ ನಾಟಕ - ಇಂದ್ರವಿಜಯ ದ ಅಭಿನಯ.

ಇಲ್ಲಿ ನಾಟಕದ ರೂಪಣೆಯಲ್ಲೇ ನಾಟಕೀಯತೆಯಿದೆ ; ಮಾತಿಗಿಂತ ಹೆಚ್ಚಿನ ಅರ್ಥವಿದೆ. ನಾಟಕದಲ್ಲಿ ಅದೇ ತಾನೆ ಮುಖ್ಯವಾದುದು ? ಕಾರ್ನಾಡರ ಇತರ ನಾಟಕಗಳಲ್ಲಿ - ತುಘಲಕ್, ತಲೆದಂಡಗಳಲ್ಲೂ - ಕಥಾಸರಣಿ ದೃಶ್ಯಸರಣಿ ಎರಡೂ ನೇರ ನಡೆಯಲ್ಲಿದ್ದು, ಆಕರ್ಷಕ ಮಾತಿನ ಸರಣಿ ಹಾಗೂ ಮಾತನ್ನೇ ಅವಲಂಬಿಸಿದ ಕ್ರಿಯಾಸರಣಿಗಳು ಕಂಡುಬರುತ್ತವೆ. ಅಲ್ಲಿ ಮಾತೇ ಮುಖ್ಯ ; 'ರೂಪ 'ದಲ್ಲಿ ನಾಟಕೀಯತೆ ಇಲ್ಲ. ಇಲ್ಲಿ ಅದಿದೆ. ಇಲ್ಲಿ ಕ್ರಿಯೆ ಕೂಡಾ ರೂಪಾವಲಂಬಿ. ಹಾಗಾಗಿ ಇದು ಅವರ ನಾಟಕಗಳಲ್ಲೇ ಹೆಚ್ಚು ನಾಟಕೀಯಗುಣವುಳ್ಳದ್ದು. ಇಲ್ಲಿನ ರೂಪದ ನಾಟ್ಯಾಯಮಾನತೆ ಮನಸ್ಸಿಗೆ ಬಂದರೆ ಒಟ್ಟು ನಾಟಕ ಭಾವಿತವಾಗುತ್ತದೆ. ಅದೆಲ್ಲ ವೈಖರೀ ವಿವರಣೆಗೇ ಸಿಗಬೇಕೆಂದೇನಿಲ್ಲ. ವಸ್ತುವಿನ ಪ್ರಧಾನ ಎಳೆಗಳಾದ ಹೆಣ್ಣು-ಗಂಡಿನ ಸಂಬಂಧ, ನಿಯಮ - ಆಚಾರಗಳ ಸಂಬಂಧ, ತಪಸ್ಸು - ಜ್ಞಾನ - ಕ್ರಿಯಾ ಶಕ್ತಿಗಳ ಸಂಬಂಧ, ಜಾತಿ - ಜಾತಿ ಸಂಬಂಧ, ದೇವ-ಮಾನವ ಸಂಬಂಧ, ದೈವೀಶಕ್ತಿ ಮತ್ತು ನಿಸರ್ಗಶಕ್ತಿಗಳ ಸಂಬಂಧ ಎಲ್ಲವೂ ರಚನಾರೂಪದಂತೆಯೇ ಮೇಲ್ನೋಟಕ್ಕೆ ಸರಳವಾಗಿ ಕಾಣುತ್ತಲೇ ನಿಜದಲ್ಲಿ ತೀರಾ ಸಂಕೀರ್ಣವಾದವುಗಳು.

ಕಾರ್ನಾಡರು ಮಹಾಭಾರತದಲ್ಲಿ ಸಿಗುವ ಕಥೆಯನ್ನು ಆಕರವಾಗಿ ಬಳಸಿಕೊಂಡು ಯಜ್ಞ ಮತ್ತು ನಾಟಕ ಹಾಗೂ ವೈದಿಕ ವರ್ಗ ಮತ್ತು ಶೂದ್ರರ ಮುಖಾಮುಖಿಯನ್ನು ತಮ್ಮ ಕೃತಿಯ ಆವರಣವಾಗಿ ಮಾಡಿಕೊಂಡಿದ್ದಾರೆ. ಮೂಲಕತೆಯನ್ನು ತಮಗೆ ಬೇಕಾದಂತೆ ಬದಲಾಯಿಸಿಕೊಂಡಿದ್ದಾರೆ. ಇದರಿಂದಾಗಿಯೇ ಇದು ಪಾಶ್ಚಾತ್ಯ ಮನಸ್ಸಿಗೆ ತೃಪ್ತಿಕೊಡುವ ಬೌದ್ಧಿಕ ಕಸರತ್ತಿನ ಬರವಣಿಗೆ; ಹಾಗಾಗಿ ಇದೊಂದು ಸಾಂಸ್ಕೃತಿಕ ರಾಜಕಾರಣದ ಕೂಸು-ಎಂಬ ಆರೋಪಕ್ಕೆ ಒಳಗಾಗಿದೆ. ಅಮೆರಿಕದ ಗಥ್ರೀ ಥಿಯೇಟರಿನವರ ಕೋರಿಕೆ ಮೇರೆಗೆ ಬರೆದುದಾಗಿ ಸ್ವತಃ ಲೇಖಕರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಜೊತೆಗೆ ಮೊದಲು ನಮ್ಮವರಿಗಾಗಿ ನಮ್ಮಭಾಷೆಯಲ್ಲೇ ಬರೆಯುತ್ತೇನೆಂದು ಕನ್ನಡದಲ್ಲೇ ಬರೆದಿದ್ದಾರೆ. ಇನ್ನು ಸಾಂಸ್ಕೃತಿಕ ರಾಜಕಾರಣ ಎನ್ನುವ ವಿಷಯ -ಅಷ್ಟು ಸರಳವಾಗಿ ಹೇಳುವಂಥಾದ್ದಲ್ಲ. ಪ್ರಾಯಶಃ ನಮ್ಮ ಬಹುಮಂದಿ ಲೇಖಕರು, ವಿಮರ್ಶಕರು ಒಂದಲ್ಲ ಒಂದು ರೀತಿಯಲ್ಲಿ ಇದಕ್ಕೆ ಒಳಗಾದವರೇ. ಒಂದು ಅರ್ಥದಲ್ಲಿ ಕಾಲಿದಾಸಾದಿಗಳೂ ಇದನ್ನೇ ಮಾಡಿದ್ದು. ಈ ಕೃತಿಗೆ ಅಂತಹ ಆಕ್ಷೇಪ ಹೇಳುವ ಅವಶ್ಯಕತೆ ಇಲ್ಲ ಎನ್ನಬಲ್ಲೆ.

ಮೂಲಕಥೆಯೊಡನೆ ಮುಖಾಮುಖಿ ನಡೆಸಿ ಪಡೆದದ್ದೇನು ಎಂದು ಸ್ವಲ್ಪ ನೋಡಬೇಕು. ಅದಕ್ಕಾಗಿ ಮೂಲಕಥೆಯ ಸಂದರ್ಭವನ್ನು ಸ್ವಲ್ಪ ನೋಡಬೇಕು. ಶಿವನಿಂದ ಹೆಚ್ಚಿನ ಮಂತ್ರಾಸ್ತ್ರ ಪಡೆಯುವ

ಉದ್ದೇಶದಿಂದ ಅರ್ಜುನ ಇಂದ್ರಕೀಲ ಪರ್ವತಕ್ಕೆ ಹೋಗಿ ತಪಸ್ಸನ್ನಾಚರಿಸಿ, ಶಿವಾನುಗ್ರಹ ಹೊಂದಿ ಇಂದ್ರನ ಆತಿಥ್ಯ ಪಡೆಯುತ್ತಿದ್ದಾಗ ಕಾಡಿನಲ್ಲಿದ್ದ ಯುಧಿಷ್ಠಿರಾದಿಗಳಿಗೆ ಅವನ ಯೋಗಕ್ಷೇಮ ತಿಳಿಸಲು ಇಂದ್ರನಿಂದ ಕಳುಹಿಸಲ್ಪಟ್ಟ ಲೋಮಶ ಮುನಿಗಳು ಸಾಂತ್ವನ ಸಮಾಧಾನಗಳಿಗಾಗಿ ಹೇಳುವ ಹಲವು ಕಥೆ ವರ್ಣನೆಗಳಲ್ಲಿ ಯವಕ್ರೀತನ ಆಖ್ಯಾನವೂ ಸೇರಿದೆ. ತೀರ್ಥಾಟನೆ ಮಾಡುತ್ತ ಬಂದು ಸೇರುವ ಎಲ್ಲ ಕ್ಷೇತ್ರಗಳಲ್ಲೂ ಆತ ಇಂತಹ ಮಹಾತ್ಮೆಗಳನ್ನು ಹೇಳುತ್ತಾನೆ.

ಅಲ್ಲಿ ಅದು ಹೆಚ್ಚು ಸಂಕೀರ್ಣವಲ್ಲದ ನೇರ ಸರಳ ಕಥೆ. ಬದುಕಿನಿಂದ ಪಡೆಯುವ ಅನುಭವದ ಬದಲು ತಪಸ್ಸಿನಿಂದ ಏಕಾಏಕಿ ಜ್ಞಾನಸಂಪಾದಿಸಿ ಬಹುಮಾನಿತನಾಗುವುದು ಯವಕ್ರೀತನ ಗುರಿ. ಅವನ ಕಠಿಣ ತಪಸ್ಸಿನ ನಡುವೆ ಪ್ರತ್ಯಕ್ಷನಾಗುವ ಇಂದ್ರ ಹಲವು ಬಾರಿ ಬುದ್ಧಿವಾದ ಹೇಳಿದರೂ ಕೇಳದೆ ಹಠಹಿಡಿದು ವರ ಪಡೆಯುತ್ತಾನೆ. ಹೀಗೆ ಕ್ರಮವನ್ನು ಮೀರಿ ಪಡೆದ ಜ್ಞಾನದಿಂದ ಗರ್ವಿತನಾದ ಮಗನ ಭವಿತವ್ಯದ ಬಗೆಗಿನ ಕಾಳಜಿಯಿಂದ ಹಿತನುಡಿ ಹೇಳುವ ಭರದ್ವಾಜನ ವ್ಯಕ್ತಿತ್ವದಲ್ಲಿ ಭಾವಸಾಂದ್ರತೆ ಇದೆ. ತನ್ನ ವಿಶಿಷ್ಟ ಪ್ರಕೃತಿಯಿಂದಾಗಿಯೇ ಯವಕ್ರೀತನ ವ್ಯಕ್ತಿತ್ವವೂ ಆಕರ್ಷಕ. ಹೀಗೆ ಯವಕ್ರೀತ ಹಾಗೂ ಅವನ ತಂದೆ ಭರದ್ವಾಜನ ಹೊರತಾಗಿ ಉಳಿದ ರೈಭ್ಯ, ಪರಾವಸು, ಅರ್ವಾವಸು ಮುಂತಾದ ಎಲ್ಲ ಪಾತ್ರಗಳೂ ಆಳವಿಲ್ಲದ ಸರಳ ಪಾತ್ರಗಳು. ಕಥೆಯೂ ಕೇವಲ ಕತೆ ಅಷ್ಟೆ. ವಸ್ತುವಿಗೆ ಹೆಚ್ಚಿನ ಆಳ, ಆಯಾಮ ಕೊಡಲು ಕಾರ್ನಾಡರು ಸಹಜವಾಗಿಯೇ ಕತೆಯಲ್ಲಿ, ಪಾತ್ರಚಿತ್ರಣದಲ್ಲಿ ಹಲವು ಗಮನಾರ್ಹ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ನಾಟಕೀಯತೆಯನ್ನು ಸಾಧಿಸಿದ್ದಾರೆ. ಭರದ್ವಾಜನನ್ನು ಕೈಬಿಟ್ಟು ಅವನನ್ನು ಯವಕ್ರೀತನಲ್ಲೇ ಐಕ್ಯಗೊಳಿಸಿ, ಮಗನ ವ್ಯಕ್ತಿತ್ವದಲ್ಲಿ ಸಂಕೀರ್ಣತೆಯನ್ನು ತರುತ್ತಾರೆ. ಆತ ಮೂಲದಲ್ಲಿ ಜ್ಞಾನಗರ್ವಿತನಾದರೆ, ಇಲ್ಲಿ ತಪಸ್ಸು ಮತ್ತು ಅದರಿಂದ ಲಭಿಸಿದ ಜ್ಞಾನ -ಸಿದ್ಧಿಗಳ ವಿಷಯದಲ್ಲಿ ಸ್ವತಃ ವಿಮರ್ಶೆ ಮಾಡಿಕೊಳ್ಳಬಲ್ಲವನಾಗಿದ್ದಾನೆ. ನಿಜದ ಬದುಕಿನಲ್ಲಿ ಪ್ರೀತಿ -ಪ್ರೇಮಗಳ ಎದುರು ಜ್ಞಾನ -ಸಿದ್ಧಿಗಳ ಬಗೆಗೆ ಸಂಶಯ ವ್ಯಕ್ತಪಡಿಸುತ್ತಾನೆ. ತನ್ನ ನಡತೆಯಿಂದ ತಪಸ್ಸು-ಸಿದ್ಧಿಗಳ ಕುರಿತು ಹೊಸ ವ್ಯಾಖ್ಯಾನ ಹೊರಡಿಸುತ್ತಾನೆ.

ಇಲ್ಲಿ ಬಳಸಿದ ಇತರ ಪಾತ್ರಗಳೂ ಮೂಲದಿಂದ ಭಿನ್ನವಾಗಿ ಬೆಳೆದು ನಿಂತಿವೆ. ಮೂಲಕಥೆಯ ತಾತ್ವಿಕ, ತಾಂತ್ರಿಕ, ದಾರ್ಶನಿಕ ಮಹತ್ವಗಳನ್ನು ಅಧ್ಯಯನ ಮಾಡಿದ ಕಾರ್ನಾಡರು ತಮ್ಮ ಪಾತ್ರ ಮತ್ತು ಕಥಾರಚನೆಯ ಚೌಕಟ್ಟಿನಲ್ಲಿ ಅವನ್ನೆಲ್ಲ ಒಳಗೊಳ್ಳಲು ಪ್ರಯತ್ನಿಸಿದ್ದಾರೆ. ಪಾತ್ರನಿರ್ಮಿತಿಯಲ್ಲಿ ಆಯಾ ಪಾತ್ರಗಳ ಹೆಸರುಗಳ ವ್ಯುತ್ಪತ್ತಿಯ ಹಿನ್ನೆಲೆಯಲ್ಲೂ ಚಿಂತಿಸಿ, ಆಯಾ ಅರ್ಥಗಳಿಗೆ ಹೊಂದುವಂತೆ ನೋಡಿಕೊಂಡಿದ್ದಾರೆ. ಅರ್ವಾವಸುವನ್ನು ಬೇಕೆಂದೇ ಅರವಸು ಎಂದು ಬದಲಿಸಿದ್ದಾರೆ. ಈ ಎಲ್ಲ ಪಾತ್ರಗಳೂ ಮೂಲದಲ್ಲಿನಂತೆ ಏಕಮುಖಿಯಾಗಿಲ್ಲ. ದ್ವಂದ್ವ ಸಂಕೀರ್ಣತೆಗಳಿಂದ ಕೂಡಿ ಜೀವಂತವಾಗಿವೆ. ಭಾವಪುಷ್ಟವಾಗಿವೆ. ಸೈಕಾಲಾಜಿಕಲ್ ರಿಯಲಿಸಂ ಎಂದು ಆಕ್ಷೇಪಿಸಬಹುದಾದರೂ ಅದು ಅವಶ್ಯಕವೇ ಆಗಿರುವ ಗುಣಾಂಶ. ಇಲ್ಲದಿದ್ದಲ್ಲಿ ಕೃತಿ ಸಪ್ಪೆಯಾಗಿ ಸರಳವಾಗಿ ಅರ್ಥಹೀನವಾಗುತ್ತದಲ್ಲ......

ಬದುಕಿನಲ್ಲಿ ಸೃಜನಾತ್ಮಕತೆಯ ಜೀವಸೆಲೆಯಾದ ಪ್ರೀತಿ ಪ್ರೇಮಗಳಿಗೆ ತೆರೆದುಕೊಂಡಾಗಲೇ ಮನುಷ್ಯನು ತನ್ನ ಬೌದ್ಧಿಕ ವಿಕಾಸದಿಂದ ಕಟ್ಟಿಕೊಂಡ ತತ್ವ-ಜ್ಞಾನ-ನೀತಿ-ನಿಯಮ-ತಪಸ್ಸುಗಳ ಮೌಲ್ಯ ನಿರ್ಧಾರ ಸಾಧಿತವಾಗುತ್ತದೆ. ಹಾಗೆಂದೇ ನಾಟಕದಲ್ಲಿ ಪ್ರಮುಖ ಪಾತ್ರಗಳನ್ನು ನಿಕಷಕ್ಕೆ ಒಡ್ಡುವ ವಿಶಾಖಾ ನಿತ್ತಿಲೆಯರಿದ್ದಾರೆ. ನೀತಿ ನಿಯಮ ಜಾತಿಗಳನ್ನು ಮೀರಿದ ಈ ಪ್ರೇಮಪಾಶದಲ್ಲಿ ಮನುಷ್ಯತ್ವ ಅರಳುತ್ತದೆ. ಸ್ಥಾಪಿತ ಮೌಲ್ಯವ್ಯವಸ್ಥೆಗಳಿಗೆ ಧಕ್ಕೆಯಾಗುತ್ತದೆ. ಹಿಂಸೆಯೂ ಬೆನ್ನತ್ತಿ ಬರುತ್ತದೆ. ಇವು ಪ್ರತಿಷ್ಠಿತರ ಭಗ್ನಮನಸ್ಸನ್ನು ಬಯಲುಮಾಡುತ್ತವೆ. ನಿಯಮಬದ್ಧ ವೈದಿಕ ಬದುಕಿಗೆ ಪ್ರತಿಯಾಗಿ ಸಹಜ ಬದುಕಿನ ನಿಷಾದ್ದರ ಜಾತಿಗಾರರ ಚಿತ್ರಣಗಳಿವೆ. ಅವರಲ್ಲೂ ಕಟ್ಟುಕಟ್ಟಳೆಗಳಿವೆ; ಆದರೆ ಅವು ಸರಳವಾದವುಗಳು. ನಿರ್ದಿಷ್ಟ ಮೌಲ್ಯಗಳಿವೆ;ಜೀವಪರವಾದವು. ಇಂತಹ ವಿಭಿನ್ನ ಸಾಮಾಜಿಕ ಆವರಣದಲ್ಲಿ ಪ್ರೀತಿ ದ್ವೇಷ ಹಿಂಸೆ ಅನಿವಾರ್ಯವಾಗಿ ಬಿಡುತ್ತದೆ.

ವಿಶಾಖಾ-ನಿತ್ತಿಲೆ ಪಾತ್ರಗಳು ಪರಸ್ಪರ ಪೂರಕವಾದ ವಿಭಿನ್ನ ಗುಣಸ್ವಭಾವಗಳನ್ನು ವ್ಯಕ್ತಪಡಿಸುತ್ತವೆ. ಇಬ್ಬರೂ ಆಯಾ ಜಾತಿ ಅಂತಸ್ತುಗಳ ಕಟ್ಟುಪಾಡಿಗೆ ಬದ್ಧರಾಗಿದ್ದರೂ ಅವನ್ನು ಮುರಿದು ಸಾಗುತ್ತಾರೆ. ಊರಿನ ಬರ ಅವರ ಜೀವನದಲ್ಲೂ ಇದೆ. ಪ್ರೀತಿಗಾಗಿ, ಅದಕ್ಕೂ ಹೆಚ್ಚಿನ ಮಹತ್ವದ ಉದ್ದೇಶಕ್ಕಾಗಿ ನಿತ್ತಿಲೆ ಬಲಿಯಾಗುತ್ತಾಳೆ. ವಿಶಾಖೆಗೆ ಆ ಭಾಗ್ಯವೂ ಇಲ್ಲ. ಆಕೆ ನಾಟಕದ ಚೌಕಟ್ಟಿನಲ್ಲಿ ತನ್ನ ಪಾತ್ರ ಮುಗಿಸಿ ಬೇಗನೆ ನಿರ್ಗಮಿಸಿ ಬಿಡುತ್ತಾಳೆ. ಅವಳ ಕೊನೆ ಅಥವಾ ಭವಿತವ್ಯ ನಾಟಕಕ್ಕೆ ಮುಖ್ಯವಲ್ಲ. ಅರವಸು ಕೂಡ ಅದನ್ನು ಪ್ರೇಕ್ಷಕರ ಊಹನೆಗೆ ಬಿಡುತ್ತಾನೆ.

ವಿಶಾಖಾಳ ಕ್ರಿಯೆ ಒಂದೆರಡು ಕಡೆ ಸಂದೇಹಕ್ಕೆ ಆಸ್ಪದವಾಗುವುದು ನಿಜ. ಯವಕ್ರೀತನ ಸಾವಿಗೆ ಸಂಬಂಧಸಿ ಒಮ್ಮೆ, ಮಾವ ರೈಭ್ಯನ ಸಾವಿಗೆ ಸಂಬಂಧಿಸಿ ಇನ್ನೊಮ್ಮೆ. ಮೂಲಕತೆಯಲ್ಲಿ ರೈಭ್ಯ ಯವಕ್ರೀತನನ್ನು ಕೊಲ್ಲಲು ಕೃತ್ಯಾಪ್ರಯೋಗದಿಂದ ಒಬ್ಬ ರಾಕ್ಷಸನನ್ನು ಮತ್ತು ವಿಶಾಖಾಳನ್ನು ಹೋಲುವ ಒಬ್ಬಳು ಮಾಯಾಂಗನೆಯನ್ನು ಸೃಷ್ಟಿಸಿಬಿಡುತ್ತಾನೆ. ಆಕೆ ಉಪಾಯದಿಂದ ಯವಕ್ರೀತನ ಕಮಂಡಲುವನ್ನು ಅಪಹರಿಸುತ್ತಾಳೆ. ಕಮಂಡಲುವಿನಲ್ಲಿ ಮಂತ್ರಜಲವಿರುವ ತನಕ ಆತನನ್ನು ಕೊಲ್ಲುವುದು ಅಸಾಧ್ಯ. ನಾಟಕದ ಪ್ರಧಾನವಸ್ತು ಮಳೆ ತಾನೆ. ಇಲ್ಲಿ ಇರುವ ಅಲ್ಪಸ್ವಲ್ಪ ಮಂತ್ರಜಲವೂ ಬರಿದಾದರೆ ಅಷ್ಟೆಲ್ಲ ತಪಸ್ಸಿದ್ಧಿ ಪಡೆದ ಋಷಿಕುಮಾರನೂ ಸಾಯಬೇಕಾಗುತ್ತದೆ - ಅದೂ ಅಸಹಜ ರೀತಿಯಲ್ಲಿ. ಈ ವಿಷಯ- ನಾಟಕದಲ್ಲಿ ಯಾವೊಂದು ಚಿಕ್ಕ ಅಂಶಗಳೂ ನಿರುಪಯುಕ್ತವಲ್ಲ; ಎಲ್ಲೆಡೆ ತಮ್ಮ ಎಳೆ ಹಬ್ಬಿಸಿಕೊಂಡು ಸಾರ್ಥಕವಾಗುತ್ತವೆ;ಇಲ್ಲವೆ ಸಾಂಕೇತಿಕ ನೆಲೆಯಲ್ಲಿ ನಿಲ್ಲುತ್ತವೆ-ಎನ್ನುವುದಕ್ಕೆ ಉತ್ತಮ ಉದಾಹರಣೆ.

ನಾಟಕದಲ್ಲಿ ಮಾಯಾಸ್ತ್ರೀಯ ಬದಲು ವಿಶಾಖಾ ತಾನೇ ಮಂತ್ರಜಲವನ್ನು ಚೆಲ್ಲಿ ಬಿಡುತ್ತಾಳೆ. ಇದು ಒಂದು ಮೌನದ ಕ್ರಿಯೆ. ಅವಳ ಅಂತರ್ಯದ ಭಾವಸಂಘರ್ಷವನ್ನು ಈ ಕ್ರಿಯೆ ವ್ಯಕ್ತಪಡಿಸುತ್ತದೆ. ಅದು ಅಕಸ್ಮಾತ್ತಾಗಿ ಘಟಿಸಿದ್ದಾದರೆ ಆಕೆ ಮೂರ್ಖಳು ಅಥವಾ ಏನೂ ತಿಳಿಯದ

ಮುಗ್ಧೆ ಎನ್ನಬೇಕಾತ್ತದೆ. ಆದರೆ ಹಾಗಲ್ಲ. ಉದ್ದೇಶಪೂರ್ವಕವಾಗಿಯೇ ಹಾಗೆ ಮಾಡಿದಳೆಂದು ತಿಳಿಯಬೇಕು. ಆಗ ಮಾತ್ರ ಅವಳ ತುಮುಲಗಳನ್ನು ಅರ್ಥಮಾಡಿಕೊಳ್ಳಬಹುದು. ಗಂಡ ಪರಾವಸುವಿನ ಜೊತೆ ತನ್ನ ವಿಷಯ ಮಾತಾಡುವಾಗ ಮಾವನಾದ ಮುದುಕ ರೈಭ್ಯನ ಮೇಲೆ ಆತನಿಗೆ ಸಂಶಯ ಉಂಟಾಗುವಂತೆ ವರ್ತಿಸುತ್ತಾಳೆ. ಅದನ್ನು ಸ್ಪಷ್ಟವಾಗಿ ಹೇಳದೆ ಒಗಟಾಗಿ ಹೇಳುತ್ತಾಳೆ. ಆತ ತಂದೆಯನ್ನು ಕೊಂದನಂತರ ಮೆಲ್ಲನೆ 'ಇನ್ನು ನಾನು ಹೇಳಿದ್ದೆಲ್ಲ ನಿಜವೋ ಸುಳ್ಳೋ ನಿಮಗೆಂದೂ ಗೊತ್ತಾಗೋಹಾಗಿಲ್ಲ' ಎನ್ನುತ್ತಾಳೆ. ಇಲ್ಲೂ ಕೂಡಾ ಆಕೆಯ ತುಮುಲ, ಹಠ, ನಿರ್ಧಾರ ಪ್ರಕಟವಾಗುತ್ತದೆ. ಮಾತಿಗಿಂತ ಮೌನದ ಕ್ರಿಯೆ ಹೆಚ್ಚು ಅರ್ಥವತ್ತಾಗುತ್ತದೆ. ಈ ಸಂದರ್ಭದಲ್ಲಿ ಪರಾವಸುವಿಗೂ ತಂದೆಯ ಮರಣ ಅಗತ್ಯವಿತ್ತು. ಅದರ ಅರಿವೂ ವಿಶಾಖಾಳಿಗಿತ್ತು. 'ವಜ್ರ ಮಾನಸ!' ಎಂದು ವ್ಯಂಗ್ಯದ ಮೊನೆಯಿಂದ ಚುಚ್ಚುತ್ತಾಳಲ್ಲ. ಯಜ್ಞದೀಕ್ಷಿತನಾದ ಪರಾವಸುವಿಗೆ- ಕದ್ದು ಮುಚ್ಚಿ ಆಶ್ರಮಕ್ಕೆ ಬಂದ ನಂತರ-ನಿಯಮನಿಷ್ಠುರನಾದ ರೈಭ್ಯನನ್ನು ಕೊಲ್ಲದೆ ಗತ್ಯಂತರ ಇರಲಿಲ್ಲ. ಅವನನ್ನು ಕಟ್ಟುಪಾಡು ಮಾಡದೆ ಯಜ್ಞ ಮುಗಿಯುವ ತನಕ ಕಾಯುವಂತಿರಲಿಲ್ಲ.

ಈ ಎಲ್ಲ ಅಗ್ನಿಕಾಂಡಗಳ ನಡುವೆ ಬದುಕು ಸೃಷ್ಟಿಶೀಲವಾಗಬೇಕಾದರೆ ಪ್ರೀತಿಯ ಮಳೆ ಬರಬೇಕು. ಬಿಸಿಲ ಬೇಗೆಯಿಂದ ಗಾರುಬಡಿದ ನೆಲ ತಂಪಾಗಬೇಕು. ಒಂದು ನಂಬಿಕೆಯ ಪ್ರಕಾರ ಅದಕ್ಕಾಗಿ 'ಯಜ್ಞ'ವಾಗಬೇಕು. ಇನ್ನೊಂದು ನಂಬಿಕೆಯಂತೆ 'ಆಟ'ವಾಗಬೇಕು. ಯಜ್ಞದಿಂದ ಇಂದ್ರನ ಅನುಗ್ರಹವಾಗಬೇಕು. ಇಂದ್ರ ವೃತ್ರನನ್ನು ಕೊಲ್ಲಬೇಕು. ಆಟದ ವಸ್ತುವೂ ಇಂದ್ರವಿಜಯವೇ. ಜಾತಿಗಾರರ ಆಟದಲ್ಲಿ ಯಜ್ಞದ ಅಧ್ವರ್ಯುವಿನ ತಮ್ಮ, ಬ್ರಾಹ್ಮಣ ಅರವಸು ವೃತ್ರಾಸುರನ ಪಾತ್ರ ವಹಿಸಬೇಕಾಗುವುದು ನಾಟಕದಲ್ಲಿನ ದೊಡ್ಡ ವ್ಯಂಗ್ಯ. ಪಾತ್ರ-ನಟ ಭೇದ ಮರೆತು, ಜಾತಿಗಾರನ ಎಚ್ಚರಿಕೆಯನ್ನು ಮೀರಿ, ಅರವಸು ಮುಖವಾಡ ತೊಟ್ಟು ಪೂರ್ತಿ ವೃತ್ರಾವೇಶಿತನಾದಾಗ- ವಾಸ್ತವ ಹಾಗೂ ರೂಪಕಗಳು ಥಿಕ್ಕಿಯಾಗಿ ಉಂಟಾಗುವ ಹೊಸ ಸ್ಫೋಟದಲ್ಲಿ ಯಜ್ಞ ಭಂಗವಾಗುತ್ತದೆ; ಜೊತೆಗೆ ನಾಟಕವೂ ಭಂಗವಾಗುತ್ತದೆ. ಪ್ರೀತಿಯ ಹೆಣ್ಣಿನ ಬಲಿಯೂ ಆಗುತ್ತದೆ. ನಿತ್ತಿಲೆಯ ಬಲಿ ಯಜ್ಞ-ನಾಟಕಗಳ ಜೊತೆಗೆ ಸೇರುವ ಇನ್ನೊಂದು ಕ್ರಿಯಾವಿಧಿಯಾಗುತ್ತದೆ. ಆರ್ಷೇಯ ತಪಸ್ಸಿನಿಂದಲ್ಲ, ಜೀವನದಲ್ಲಿ ತಪಿಸಿ ಅನುಭವಜನ್ಯ ಜ್ಞಾನ ಪಡೆದ ಅರವಸುವಿಗೆ ಇಂದ್ರ ಒಲಿದು-ಅಗೋಚರನಾಗಿದ್ದೇ-ಅನುಗ್ರಹಿಸುತ್ತಾನೆ. ಆದರೆ ತಾನು ನೀಡುವ ವರ ಫಲಿಸುತ್ತದೆಂಬ ಭರವಸೆ ಇಂದ್ರನಿಗೂ ಇಲ್ಲ. ಕಾಲವನ್ನು ಹಿಂದು-ಮುಂದು ಮಾಡುವುದು ಅವನ ಅಳವಿನಲ್ಲಿ ಇಲ್ಲ. ಅಂದರೆ ಎಲ್ಲಕ್ಕಿಂತ ನಿಸರ್ಗಶಕ್ತಿಯೇ ಮೇಲು; ಅದರ ನಿಗೂಢತೆ, ಮಾಯೆ ವ್ಯಾಕೃತ ದೇವತೆಗಳಿಗೂ ಶಕ್ಯವಿಲ್ಲವೆಂಬ ಉಪನಿಷತ್ ಸದೃಶ ತಾತ್ಪರ್ಯ ಹೊರಡುತ್ತದೆ. ಇಂದ್ರನ ವರ ನಿಷ್ಫಲವಾಗಿ, ಮಳೆಗಾಗಿ ಹಾತೊರೆದ ಭೂಮಿಯ ಹಾಗೂ ಜೀವಕೋಟಿಯ ಬಯಕೆ ಈಡೇರುವಂತಾದಾಗ ಮೊದಲು

ತನ್ನ ಅವಸ್ಥೆಯಿಂದಾಗಿ ಗಲಿಬಿಲಿಗೊಂಡ ಬ್ರಹ್ಮರಾಕ್ಷಸ ಕೊನೆಗೆ ಗುಡುಗಿನೊಂದಿಗೆ ಗುಡುಗಾಗಿ ಅಟ್ಟಹಾಸಗೈಯುತ್ತಾನೆ. ಅರವಸು ಸತ್ತ ನಿತ್ತಿಲೆಗೆ 'ಮಳೆ ಬಂತೆ'ಂದು ಅಚ್ಚರಿಯಿಂದ ಹೇಳುತ್ತಾನೆ.

ಕೊನೆಯ ಮಾತು. ಎಲ್ಲವನ್ನೂ ನಮ್ಮ ಅರ್ಥ-ವ್ಯಾಖ್ಯಾನಗಳಿಗೆ ಎಳೆದು ತರುವ, ಹೊರಗಿನ ಬಣ್ಣದ ಕನ್ನಡಕ ತೊಟ್ಟು ನಮ್ಮದನ್ನು ಕಾಣುವ ಹವ್ಯಾಸ ಸಾಧುವಲ್ಲ. ಅರ್ಥಕ್ಕೆ ನಿಲುಕದ, ಮಾತು ಮೀರಿದ ಲೋಕೋತ್ತರ ಅನುಭವಗಳೂ ಇವೆಯಲ್ಲವೆ? ಅವೂ ಮುಖ್ಯ. ಮಾತು-ಕತೆ -ಶಿಲ್ಪ ಒಟ್ಟಯಿಸಿ ನೋಡಿದಾಗ ಕಾರ್ನಾಡರ ಈ ಕೃತಿಯ ಮಹತ್ವ ತಿಳಿದೀತು. ಇದು ತುಘಲಕ್, ತಲೆದಂಡ ಅಥವಾ ಹಯವದನ, ನಾಗಮಂಡಲ ಮುಂತಾದವುಗಳಿಗಿಂತ ಭಿನ್ನವಾದ, ತೂಕದ ಮಾತು ಸನ್ನಿವೇಶ ರಚನೆಗಳಿಂದ ಮರುಳುಗೊಳಿಸದ, ಸರಳತೆಯಲ್ಲೇ ಗಾಂಭೀರ್ಯವನ್ನು ಸಾಧಿಸುವ ಹೊಸ ಬಗೆಯ ಬರವಣಿಗೆ ಎಂದು ತಿಳಿಯಬೇಕು.

ಆವರಿಸಿಕೊಳ್ಳುವ ಕತೆಗಳು

ನಾ. ಡಿಸೋಜ

ದೊಡ್ಡಮರ :ರಾಜೇಂದ್ರ ಚೆನ್ನಿ, ಪ್ರ : ಪುರೋಗಾಮಿ, ಬೆಂಗಳೂರು-೩
ಬೆಲೆ ರೂ. ೩೦/- ಪುಟ:೧೪೩. ೧೯೯೪

ವಿಮರ್ಶಾ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿರುವ ರಾಜೇಂದ್ರ ಚೆನ್ನಿ ಸ್ವತಃ ಕತೆ ಬರೆಯುವಾಗ ತುಸು ಬಿಗಿ ಎನ್ನಬಹುದಾದ ಭಾಷೆಯನ್ನು ಬಳಸುತ್ತಾರೆ. ಪ್ರತಿ ಸಂದರ್ಭ, ಸನ್ನಿವೇಶವನ್ನು ಮುಂದಿನ ಆಗುಹೋಗುಗಳಿಗಾಗಿ ದುಡಿಸಿಕೊಳ್ಳುತ್ತಾರೆ. ದಟ್ಟವಾಗಿ, ಗಾಢವಾಗಿ ಕತೆಯನ್ನು ಕಟ್ಟುತ್ತಾರೆ. ಅಂತ್ಯದಲ್ಲಿ ಅನಿರೀಕ್ಷಿತ ತಿರುವು ನೀಡಿ ಅಚ್ಚರಿಪಡಿಸುವ ಜನಪ್ರಿಯ ತಂತ್ರಕ್ಕೆ ಮೊರೆ ಹೋಗದೆ, ಓದುಗ ಮತ್ತೊಮ್ಮೆ ಪುಟಗಳನ್ನು ತಿರುವಿ ಹಾಕುವಂತೆ ಮಾಡಿ, ಮನಸ್ಸಿನಲ್ಲಿ ಕತೆಯ ಯಾವುದೋ ಅಂಶ ಬಹಳ ಕಾಲ ಉಳಿಯುವಂತೆ ಮಾಡುತ್ತಾರೆ. ನಡೆದು ಹೋದ ಘಟನೆಗಳು ಯಾವುದೋ ಕಾರಣಕ್ಕೆ ಮನಸ್ಸಿನಲ್ಲಿ ಮರುಕಳಿಸಿ, ಪಶ್ಚಾತ್ತಾಪ ಪಡುವುದರ ಮೂಲಕ ಕತೆಯೊಂದರ ಸೃಷ್ಟಿಗೆ ಕಾರಣವಾದುದನ್ನು ಇಲ್ಲವೆ ಈ ಘಟನೆ ಬದುಕಿನ ವಿಶ್ಲೇಷಣೆ ಮಾಡುತ್ತಿರಬೇಕಾದರೇನೆ ಒಂದು ಕತೆ ರೂಪುಗೊಳ್ಳುವುದನ್ನು, ಮನುಷ್ಯರ ವ್ಯಕ್ತಿತ್ವಗಳು ಬಯಲಾಗುವುದನ್ನು, ಇಲ್ಲಿಯ **ದೊಡ್ಡಮರ ಏಡಿಹುಣ್ಣು, ನಿಚ್ಚಣಿಕೆ, ಒಂದು ಹುಡುಗಿಯ ಕತೆ, ಒಂದು ಅಪೂರ್ಣ ಇತಿಹಾಸ** ಮೊದಲಾದ ಕತೆಗಳಲ್ಲಿ ಕಾಣಬಹುದು.

ಸಾವು,ಗರ್ಭ, ಸಂಭವ, ನೆಲ , ಚುನಾವಣಾ ಪ್ರಸಂಗ ಈ ಕತೆಗಳಲ್ಲಿ ಲೇಖಕರು ಜಾಣತನದಿಂದ ಕತೆ ಹೇಳುತ್ತ, ಬದುಕಿನ ಕೆಲವೊಂದು ಸತ್ಯಗಳತ್ತ ಓದುಗನ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬದುಕಿನ ಜತೆ ಜತೆಗೇನೆ ಸಾವು ಹೆಜ್ಜೆ ಹಾಕುತ್ತದೆ. ಕೋಮು ಸೌಹಾರ್ದಕ್ಕಾಗಿ ಪ್ರಯತ್ನಿಸುತ್ತಿದ್ದವ ಬರ್ಬರ ಹತ್ಯೆಗೆ ಒಳಗಾದರೂ ಆತನ ಆಸೆಗಳು ಬೇರೆಲ್ಲೋ ಬೆಳೆಯುತ್ತಿದೆ ಎಂಬ ಆಶಾಭಾವನೆ ಇದೆ. ಬಿಳಿ ಮನುಷ್ಯ ಇಲ್ಲಿ ಗೇಣಗಲ ನೆಲ ಪಡೆದು, ಇಲ್ಲಿಯವರನ್ನು ಹೊರತಳ್ಳಿ ಯುವಕರ ಕನಸನ್ನೇ ಕಸಿದುಕೊಳ್ಳುತ್ತಾನೆ. ಚುನಾವಣೆಯ ಅಮಲು ಏರಿದ ಸಾಮಾನ್ಯ ಜನ ತಮ್ಮನ್ನು ತಾವೇ ಕೊಂದುಕೊಳ್ಳುತ್ತಾರೆ. ಇವು ಈ ಮೇಲಿನ ಕತೆಗಳಲ್ಲಿ ಕೇಳಿಬರುವ ಪ್ರಮುಖ ಆಶಯಗಳು.

ಅಪೂರ್ಣ, ಖೋ ಕತೆಗಳಲ್ಲಿ ಕೂಡ ಮಾನವನ ವಿಚಿತ್ರ ಸ್ವಭಾವದ ನೈಜ ಚಿತ್ರಣಗಳಿವೆ. ಓರ್ವ ಕಲಾವಿದೆ ಗಂಡಿನ ಬೆತ್ತಲೆ ಚಿತ್ರವನ್ನು ಬರೆದು ಪ್ರದರ್ಶನಕ್ಕೆ ಇಡುತ್ತಾಳೆ. ಅವಳ ಈ ಪ್ರಯತ್ನವನ್ನು ಯಾವ ಗಂಡಸೂ-ಕೊನೆಗೆ ಅವಳೆದುರು ರೂಪದರ್ಶಿಯಾಗಿ ನಿಂತವನೂ ಕೂಡ-ಮೆಚ್ಚಿಕೊಳ್ಳುವುದಿಲ್ಲ. ಏಕೆಂದರೆ ಇವರೆಲ್ಲರೂ ಅಪೂರ್ಣರಾಗಿರುತ್ತಾರೆ. ಒಂದು ಹೆಣ್ಣು ಎರಡು ಗಂಡಿನ ಮಾಮೂಲು' ಕತೆಯಾಗಬಹುದಾಗಿದ್ದ **ಖೋ** ಕೂಡ ಬೇರೆಯೇ ಆದ ರೀತಿಯಲ್ಲಿ ಮುಗಿಯುತ್ತದೆ. ಇಲ್ಲಿ ಸಂಬಂಧಗಳ ವಿಶ್ಲೇಷಣೆ ಕುತೂಹಲಕರವಾಗಿದೆ.

ಚೆನ್ನಿಯವರು ಕತೆಗಳಿಗೆ ಹೆಚ್ಚು ಜೀವಬರಲೆಂದು ಬಳಸುವ ಕೆಲವು ಸಂದರ್ಭಗಳಿಂದಾಗಿ, ಹೆಸರುಗಳಿಂದಾಗಿ ಕತೆಗಳ ಕಟ್ಟೋಣಕ್ಕೆ ಧಕ್ಕೆ ಬಂದಿರುವುದೂ ಉಂಟು. **ದೊಡ್ಡಮರದ ಪುಟ್ಟ ಬಾಲಕ** ಆಕಾಶ ಕತೆಯ ಪ್ರಾರಂಭದಲ್ಲಿಯೇ **ದೊಡ್ಡಮರ ಪುಟ್ಟ ಮರವನ್ನ ನೋಡಿಕೊಳ್ತದೆ** ಎಂದು ಹೇಳುತ್ತಾನೆ. ಈ ಮಾತು ಇಂತಹದ್ದೇ ಏನೋ ಒಂದು ನಡೆಯಲಿದೆ ಎಂಬುದನ್ನು ಓದುಗನಿಗೆ ಮುಂಚಿತವಾಗಿ ತಿಳಿಸಿಬಿಡುತ್ತದೆ. **ಸಾವು** ಓದುವಾಗ ಯಶವಂತ ಚಿತ್ತಾಲರ ಒಂದೆರಡು ಕತೆಗಳು ನೆನಪಿಗೆ ಬರುತ್ತವೆ. ಅಯೋಧ್ಯೆಯ ಘಟನೆಯನ್ನು ಅಲ್ಲಲ್ಲಿ ಉಲ್ಲೇಖಿಸುತ್ತ ಸಾಗುವ **ಗರ್ಭದ** ರಾಮಗೋಪಾಲ, ಹಿಂದೂಪುರ, ಧಾರಿಣಿ ಇತ್ಯಾದಿ ಹೆಸರುಗಳು ಕೃತಕವೆನಿಸುತ್ತವೆ. **ನೆಲದ ಬಿಳಿ** ಮನುಷ್ಯನ ವ್ಯವಹಾರ ತಟ್ಟನೆ ಈ ದೇಶ ಆಳಿದ ಇಂಗ್ಲಿಷರ ನೆನಪನ್ನು ತಂದರೂ, ಆರುನೂರು ವರ್ಷಗಳ ಇತಿಹಾಸದೊಡನೆ ಹೋಲಿಸಿ ನೋಡಿದಾಗ ಸಪ್ಪೆಯಾಗಿದೆ. ನವ್ಯದವರು ಈ ಎಲ್ಲ ಸಾಮಗ್ರಿಗಳನ್ನು ಈಗಾಗಲೇ ಬಳಸಿಕೊಂಡಿರುವುದರಿಂದ ಚೆನ್ನಿಯವರು ಮತ್ತೆ ಇವುಗಳಿಗೆ ಜೋತು ಬೀಳುವ ಅಗತ್ಯವಿರಲಿಲ್ಲವೇನೋ!

ಈ ಎಲ್ಲ ಕತೆಗಳನ್ನು ಓದುತ್ತ ಹೋದ ಹಾಗೆ ಕತೆಗಳು ಏಕೆ ಕ್ಲಿಷ್ಟವಾಗಿರಬೇಕು ಎಂಬ ಪ್ರಶ್ನೆ ಕಾಡುತ್ತದೆ. ಮಾಸ್ತಿಯವರ ಕತೆಗಳು ಸರಳವಾಗಿದ್ದೂ ಅವುಗಳಲ್ಲಿ ಶ್ರೀಮಂತವಾದ ಜೀವನಾನುಭವ, ವ್ಯಕ್ತಿ ಚಿತ್ರಣ, ಮಾನವೀಯ ಸಂಬಂಧಗಳ ಸ್ಪಷ್ಟತೆ, ಗಹನವಾದ ಸತ್ಯ ಇರುವುದನ್ನು ಕಾಣಬಹುದು. ಆದರೂ ಇಲ್ಲಿಯ ಕತೆಗಳಲ್ಲಿ ಸತ್ವವಿದೆ. ಕತೆ ಕಟ್ಟಿರುವ ರೀತಿ ಅಪೂರ್ವವಾಗಿದೆ.

ಪುಸ್ತಕ ಪರಿಚಯ

ವಿಲಿಯಂ

ಯಕ್ಷಸೃಷ್ಟಿ - ಮಹಾಬಲಮೂರ್ತಿ ಕೊಡ್ಲೆಕೆರೆ

ಪುಟ. ೧೧೦. ರೂ ೩೦/- ಶ್ರೀಗಣೇಶ ಪ್ರಕಾಶನ, ಬಳೆಪೇಟೆ, ಬೆಂಗಳೂರು

ಇದು ಮಹಾಬಲಮೂರ್ತಿ ಕೊಡ್ಲೆಕೆರೆಯವರ ಎರಡನೆ ಕಥಾ ಸಂಕಲನ. ಒಂಬತ್ತು ಕತೆಗಳಿವೆ. ಸಾಮಾನ್ಯವಾಗಿ ಎಲ್ಲಾ ಕತೆಗಳು ಉತ್ತರ ಕನ್ನಡ ಕರಾವಳಿಯ ದ್ರವ್ಯವನ್ನೇ ಹೀರಿವೆ. ಇಲ್ಲಿಯ ಕತೆಗಳ ತಿಳುವಳಿಕೆ, ಕತೆಗಳ ವಸ್ತುವಿನ ಆಯ್ಕೆ, ವಿನ್ಯಾಸ, ಭಾಷೆ, ನಿರೂಪಣೆ ಮತ್ತು ತಂತ್ರಗಳ ಮೇಲೆ ಈ ದ್ರವ್ಯದ ಛಾಪು ಕಾಣುತ್ತದೆ. ಮನುಷ್ಯ ಬದುಕಿನ ವಿಚಿತ್ರ ಸ್ಥಿತಿಯ ಸೂಕ್ಷ್ಮ ಎಳೆಗಳನ್ನು ನೇಯುವ **ವಿರಾಟ** ನಗರ, ಪುರಾಣ ಪ್ರಸಂಗಗಳ ಮೂಲಕ ಬದುಕಿನ ಬೇರುಗಳನ್ನು ಅಲ್ಲಾಡಿಸುವ **ವೈಶಂಪಾಯನ ತೀರ** ಮತ್ತು ಸೆಳೆ,ಒಂದು ಸಾಂಸ್ಕೃತಿಕ ದಾರಿಯಲ್ಲಿ ದುರಂತಕ್ಕೆ ಸಿಕ್ಕಿ ಸತ್ತ ಸುಬ್ಬಿಯ **ಸುಬ್ಬಿಗೌಡ್ತಿಯ ಸಾವು, ಸೃಷ್ಟಿ**, ಅನಿರೀಕ್ಷಿತ ಘಟನೆಯೊಂದು ಕತೆಯಾಗುವ **ಹಗಲಿನ ಕೊನೆ ಕಂತು** -ಇಲ್ಲಿನ ಪ್ರಮುಖ ಕತೆಗಳು. ಎಲ್ಲಾ ಕತೆಗಳು ಗೋಕರ್ಣವನ್ನೇ ಪದೆ ಪದೆ ಸುತ್ತಿ ಒಮ್ಮೊಮ್ಮೆ ಚಿತ್ತಾಲರನ್ನು ನೆನಪಿಸುತ್ತವೆ.

ಖೊಮೇನಿ ಮುಖೀನ -ಯು. ಎಸ್. ಶ್ರೀಧರ ಆರಾಧ್ಯ

ಪುಟ. ೫೨ ರೂ. ೨೦/- ಪರಿಸರ ಸಾಹಿತ್ಯ ಪ್ರಕಾಶನ.

ಒಳ್ಳೆಯ ಬಂಧ ಮತ್ತು ಅಭಿವ್ಯಕ್ತಿ ಹೊಂದಿರುವ ಕೆಲವು ಕವನಗಳನ್ನು ಈ ಸಂಕಲನ ಹೊಂದಿದೆ. ಈ ರೀತಿಯ ಕವನಗಳಿಗೆಲ್ಲಾ ಬೌದ್ಧಿಕ ಚೌಕಟ್ಟುಗಳಿವೆ. ಬದಲಾಗುತ್ತಿರುವ ಒಟ್ಟಾರೆ ಸಮಾಜದ ಮೂಲ ಮನಸ್ಸನ್ನು ತಿಳಿಯುವ ಕಾಳಜಿ ಇಲ್ಲಿದೆ. **ಖೊಮೇನಿ ಮುಖೀನ ವಿಧಾನ ಸೌಧದ ಮೇಲೆ ಗ್ರೇಹೆರಾನ್, ಪ್ರಧಾನಿಗೆ ಪರಾಕುಗಳು** ಮಾನವ ಜನಾಂಗದ ಪರವಾಗಿರುವ ಕಳಕಳಿಯನ್ನ ಸಾರುತ್ತವೆ. **ಒಂದು ಚಿಕ್ಕ ಕಥೆ** ಯಲ್ಲಿ ಅಮಾಯಕ ಹೆಣ್ಣು ಮಗಳ ಮೇಲೆ ಇಬ್ಬರು ವಿದ್ಯಾರ್ಥಿಗಳು ಅಮಾನವೀಯ ಕೃತ್ಯವನ್ನು ಎಸೆಗಿದಾಗ ಸುತ್ತಲೂ ಸೇರಿ ಜನರು ಪ್ರತಿಕ್ರಿಯಿಸಿದ್ದನ್ನು ನೋಡಿ ನೊಂದು ಕವಿಯೂ ಸಹಾ **ಎಲ್ಲ ಗಂಡಸರಂತೆ/** ನಾನು **ಹೊರಟು ನಿಂತೆ/ ಇಲ್ಲಿಗೆ ಕಥೆ ಮುಗಿಯಿತು/** ಎನ್ನುತ್ತಾನೆ ನಾನು **ಬರೆಯಬೇಕು**

ಕವಿತೆ/ಯಾರ ನೆರಳು ಆಗಬಾರದು ಕವಿತೆ /-ಎನ್ನುವ ಆಶಯ ಹೊಂದಿರುವ ಈ ಕವಿಗೆ ಬರಿದೆ ಬರೆದರೆ ಬೆಳಗುವುದೆ ಚಿಗುರುವುದೇ ಇಲ್ಲ ಕವಿತೆ / ನೀರೆರೆದರೂ ಹೂವು ಬಿಡುವುದಿಲ್ಲ ಬರಿ ಶಬ್ಧಗಳಲ್ಲಿ ಕವಿತೆ /ಎನ್ನುವ ವಾಸ್ತವಿಕ ಅರಿವೂ ಇದೆ. ಒಂದೆರೆಡು ಚಿಕ್ಕ ಕಥನ ಕವನವೂ ಸೇರಿದಂತೆ ಇಪ್ಪತ್ತಾರು ಕವಿತೆಗಳ ಒಂದು ಸಂಕಲನವಿದು.

ವಿಜಯಿನಿ (ಕನ್ನಡ ಶ್ಲೋಕರೂಪೀ ಭಗವದ್ಗೀತೆ)ವಿಜಯನಾಥ ಭಟ್ಟ (ಕೌಂಡಿನ್ಯ)

ವಿಜಯ್ ಫೌಂಡೇಶನ್, ೯೦, ಕೆ.ಆರ್.ಎಸ್. ರೋಡ್ ಮೇಟಗಳ್ಳಿ ಮೈಸೂರು

ಪುಟ. ೧೫೦ ರೂ. ೧೨೫ /-

ಭಗವದ್ಗೀತೆ ಈಗಾಗಲೆ ಜಗತ್ತಿನ ಹೆಚ್ಚಿನ ಭಾಷೆಗಳಲ್ಲಿ ಅನುವಾದಗೊಂಡಿದ್ದರೂ ಕನ್ನಡದಲ್ಲಿ ಹಲವು ಅನುವಾದಗಳನ್ನು ಕಂಡಿದ್ದು ಇತ್ತೀಚೆಗೆ. **ವಿಜಯಿನಿ** ವಿಜಯನಾಥ ಭಟ್ಟರ ಮಹತ್ವಾಕಾಂಕ್ಷೆಯ ಅನುವಾದ. ಗೀತೆಯ ನಾದವನ್ನು ಜೋಪಾನವಾಗಿ ಇಡಲು ಕೆಲವರು ಚಿಕ್ಕ ಚಿಕ್ಕ ಪದ್ಯಗಳನ್ನು ಬರೆದರೆ, ಕೆಲವರು ಅರ್ಥ ವಿಸ್ತಾರದ ಆಳ ಎತ್ತರಕ್ಕೆ ಹೋಗಿ ಗದ್ಯದಲ್ಲಿ ಬರೆದರು. ಯಾವದೇ ಒಂದು ಧರ್ಮಗ್ರಂಥವನ್ನು ಮತ್ತೊಂದು ಭಾಷೆಗೆ ಅನುವಾದ ಮಾಡಿದಾಗೆಲ್ಲಾ ಅ ಭಾಷೆಯ ಓದುಗರಿಗೆ ಅನನ್ಯ ಅನುಭವ ಆಗಬೇಕು, ಆಗುತ್ತದೆ. ಅನುವಾದಿಸುವಾಗ ಆಧ್ಯಾತ್ಮಿಕ ಅಂಶಗಳ ಭಾರದಿಂದ ಸಾಹಿತ್ಯಿಕ ಗುಣಾಂಶಗಳು ಒಮ್ಮೊಮ್ಮೆ ತೆಳುವಾಗುವುದುಂಟು. ಹೀಗಿದ್ದರೂ ವಿಜಯನಾಥ ಭಟ್ಟರ ಅನುವಾದ ಸುಲಲಿತವಾಗಿದೆ. ಈ ಪುಸ್ತಕದ ಒಳ ಪುಟದಲ್ಲಿ ಅರ್ಥಪೂರ್ಣ ಚಿತ್ರಗಳನ್ನು ಗಂಜೀಫಾ ಖ್ಯಾತಿಯ ರಘುಪತಿ ಭಟ್ಟರು ಮೂಡಿಸಿದ್ದಾರೆ.

ಮೋಕ್ಷ ಪಕ್ಷಿಯ ಆತ್ಮ-ಟಿ. ಆರ್. ರಾಧಾಕೃಷ್ಣ

ಪುಟ. ೧೧೮. ರೂ ೨೫/- ಚಿನ್ಮೂಲಾದ್ರಿ ಪ್ರಕಾಶನ, ಆತ್ಮೀಯ ಫಿಲ್ಟರ್ ಹೌಸ್ ರಸ್ತೆ, ಚಿತ್ರದುರ್ಗ.

ಈಗಾಗಲೆ ಕಥಾ ಕ್ಷೇತ್ರದಲ್ಲಿ ನೆಲೆ ಕಂಡುಕೊಂಡಿರುವ ರಾಧಾಕೃಷ್ಣರವರ ಮೂರನೆ ಕಥಾ ಸಂಕಲನ-ಇದರಲ್ಲಿ ಎಂಟು ಕತೆಗಳಿವೆ. ಕತೆಗಾರ ಅತ್ತ ಇತ್ತ ನೋಡಿದಾಗ ಹೊಳೆದ ಹೊಳವು, ಕೈ ಚಾಚಿದಾಗ ಸಿಕ್ಕ ಹಲವು ಘಟನೆಗಳೇ ಕತೆಗಳ ಹಂದರಕ್ಕೆ ಹೂರಣಗಳಾಗಿವೆ. ಮನುಷ್ಯ ಬದುಕಿನ ಸಂಬಂಧದೊಳಗಿರುವ ಪ್ರಾಮಾಣಿಕ ತಿಳುವಳಿಕೆಯೇ ಈ ಕತೆಗಳಿಗೆ ಆಕಾರವನ್ನು ಕೊಟ್ಟಿದೆ. ಇಲ್ಲಿರುವ ಪುರುಷ ದೃಷ್ಟಿಕೋನ ಮತ್ತು ಸ್ತ್ರೀ ದೃಷ್ಟಿಕೋನಗಳ ಕತೆಗಳಲ್ಲಿ ನಮಗೆ ತೀರಾ ತಾಕುವದು ಸ್ತ್ರೀ ದೃಷ್ಟಿಕೋನದ ಕತೆಗಳೇ. ಉತ್ತಮ ಕತೆಗಳಲ್ಲೊಂದಾದ **ಕವಲು** ವೈಚಾರಿಕತೆ ಮತ್ತು ಭಾವನಾತ್ಮಕ ಎಳೆತಗಳ ಮಧ್ಯೆಯಲ್ಲಿಯೇ ತನ್ನ ಕಥಾ ಧ್ವನಿಯನ್ನು ವಿಸ್ತಾರ ಮಾಡಿಕೊಳ್ಳುತ್ತಾ ಹೋಗುತ್ತದೆ. **ಮೋಕ್ಷ ಪಕ್ಷಿಯ ಆತ್ಮ**ದಲ್ಲಿ ಅಂಜಲಿಯ ಆಧುನಿಕ ದೋರಣೆಗಳ ಮಧ್ಯದಲ್ಲೂ ಭಾವನಾತ್ಮಕ ನೆಲೆಗಳ

ಹುಡುಕಾಟವನ್ನು ಕಾಣಬಹುದು ಅವ್ಯಕ್ತ, ಅನುಪಮ, ಪುರಾಣ , ಕೂಪ್ಮಜಾಲಿಮುಳ್ಳು ಉತ್ತಮ ಕಥೆಗಳು.

ಜಾನಪದ ಕಲೆ -ಬದುಕು (ಲೇಖನ ಸಂಕಲನ)-ಕೆ. ಎಸ್. ಉಪಾಧ್ಯಾಯ
ಕರ್ನಾಟಕ ಸಂಘ, ಪುತ್ತೂರು, ದ. ಕ., ಪುಟ ೧೩೬, ರೂ. ೪೫/-

ಜಾನಪದ ನಮಗೆ ತೀರಾ ಸಮೀಪದ ವಸ್ತು. ಈ ಸಾಮೀಪ್ಯದಿಂದಾಗಿಯೇ ಅದರ ಬಗ್ಗೆ ಒಂದು ರೀತಿಯ ಔದಾಸೀನ್ಯ, ಅಜ್ಞಾನ . ಜಾನಪದ ಸಂಸ್ಕೃತಿಯನ್ನು ಜೋಪಾನವಾಗಿ ಇಡಲು ಪ್ರಯತ್ನಿಸಿರುವ ಕೆಲವರಲ್ಲಿ ಕೆ. ಎಸ್. ಉಪಾಧ್ಯಾಯರು ಒಬ್ಬರು. ಕಳೆದ ನಾಲ್ಕು ದಶಕಗಳಲ್ಲಿ ಉಪಾಧ್ಯಾಯ ಅವರು ಈ ಕ್ಷೇತ್ರದಲ್ಲಿ ಮಾಡಿದ ಕೆಲಸ ಮತ್ತು ಪಡೆದ ಅನುಭವವೇ ಇಲ್ಲಿಯ ಬರಹಗಳು. ಈ ಸಂಕಲನದಲ್ಲಿರುವ ಹನ್ನೆರಡು ಲೇಖನಗಳಲ್ಲಿ ಎರಡು ಯಕ್ಷಗಾನವನ್ನು, ಐದು ಗೊಂಬೆಯಾಟವನ್ನು ಕುರಿತು ಇವೆ . ಇನ್ನುಳಿದವು ನಾಗಮಂಡಲ, ಭೂತಾರಾಧನೆ, ಒತ್ತೆ ಕೋಲಗಳೆಂಬ ಕಲಾತ್ಮಕವಾದ ಧಾರ್ಮಿಕ ಆಚರಣೆಯ ಬಗ್ಗೆ ಇವೆ. ಕಂಬಳ ಮತ್ತು ಕೋಳಿ ಅಂಕ ಗಳ ಮೇಲೆ ಬೆಳಕು ಚೆಲ್ಲುವಂಥ ಲೇಖನಗಳಿವೆ. ಯಕ್ಷಗಾನ ಗೊಂಬೆಯಾಟ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆಯುವುದರಲ್ಲಿ ಉಪಾಧ್ಯಾಯ ಅವರು ಶ್ರಮಿಸಿದ್ದಾರೆ.

ಸಾಹಿತ್ಯ ಸಂಗತಿ - (ವಿಮರ್ಶೆ) ಡಾ. ಬಸವರಾಜ ಸಬರದ
ಪುಟ ೨೧೦ -ರೂ. ೫೦/-ಪಲ್ಲವಿ ಪ್ರಕಾಶನ, ಬಸವಶ್ರೀ, ಕುಸನೂರ ರಸ್ತೆ, ಸರಸ್ವತಿಪುರ, ಗುಲ್ಬರ್ಗಾ ೫೮೫ ೧೦೬

ಕಾವ್ಯ, ನಾಟಕ, ಸಂಶೋಧನೆಗಳ ಸಂಗಡ ವಿಮರ್ಶೆಯಲ್ಲೂ ಕೈಯಾಡಿಸುತ್ತಿರುವ ಡಾ.ಸಬರದ ಅವರ ಮೂರನೇ ವಿಮರ್ಶಾ ಸಂಕಲನ ಇದು. ಇತರರ ಬರವಣಿಗೆಯನ್ನು ತೆರೆದ ಮನಸ್ಸಿನಿಂದ ವಿಶ್ಲೇಷಿಸಿದ್ದಾರೆ . ಒಟ್ಟು ಇಪ್ಪತ್ತು ಲೇಖನಗಳು, ಕಾವ್ಯ ಸಣ್ಣಕಥೆ, ಕಾದಂಬರಿ ಮತ್ತು ವಿಮರ್ಶೆಗಳ ಬಗ್ಗೆ ಇವೆ. ಹೊಸಗನ್ನಡ ಕಾವ್ಯದ ನೆಲೆಗಳು, ಬಂಡಾಯ ಕಾವ್ಯ, ಜಿ. ಎಸ್. ಎಸ್. ಕಣವಿ ಮತ್ತು ಮಾಲತಿ ಪಟ್ಟಣಶೆಟ್ಟಿಯವರ ಕಾವ್ಯ ಕರ್ಮದ ಬಗ್ಗೆ ಬರೆದಿದ್ದಾರೆ. ಸಣ್ಣ ಕಥೆಗಳಲ್ಲಿ ಮುಸ್ಲಿಂ ಮಹಿಳೆಯರ ಚಿತ್ರಣ, ಬಂಡಾಯ ಕಥೆಗಳಲ್ಲಿ ಜನಪರ ನಿಲುವುಗಳು, ಕಟ್ಟಿಮನಿ, ವಾಲೀಕಾರ ಮತ್ತು ದೇಸಾಯಿಯವರ ಕಥೆಗಳ ಕುರಿತು ಅರ್ಥಪೂರ್ಣ ಲೇಖನಗಳಿವೆ. ನಿರಂಜನ, ಚದುರಂಗ, ಬಲ್ಲಾಳ, ದೇಸಾಯಿ, ಭೈರಪ್ಪ, ತೇಜಸ್ವಿ, ಅನುಪಮ ನಿರಂಜನ, ದೇವನೂರು ಮಹಾದೇವ -ಇವರುಗಳ ಮಹತ್ವಪೂರ್ಣ ಕಾದಂಬರಿಗಳ ಕುರಿತ ಲೇಖನಗಳಿವೆ. ಸೃಜನಶೀಲ ಬರಹಗಾರ ಸಬರದ ಮತ್ತೊಬ್ಬರ ಕೃತಿಯನ್ನು ನೋಡುವ ದೃಷ್ಟಿ, ಜನಪರ ನಿಲುವುಗಳನ್ನು ಎತ್ತಿ ಹಿಡಿಯುವ ರೀತಿ, ಈ ಕೃತಿಯ ಹೆಚ್ಚಳ.

ತಲೆಗೊಂದು ತರ ತರ (ಹಾಸ್ಯ ಸಂಕಲನ) ಶ್ರೀನಿವಾಸ ವೈದ್ಯ. ಪುಟ ೨೩೮ - ರೂ ೩೦/- ಸುವಿದ್ಯಾ ಪ್ರಕಾಶನ, ೯, ಎ. ಆರ್. ಕೃಷ್ಣಶಾಸ್ತ್ರಿ ರಸ್ತೆ, ಬಸವನ ಗುಡಿ, ಬೆಂಗಳೂರು - ೫೬೦ ೦೦೪

ಕನ್ನಡದಲ್ಲಿ ಹಾಸ್ಯ ಸಾಹಿತ್ಯವೇ ಕಡಿಮೆ. ಜೀವನವೆಂಬ ಗಾಡಿಗೆ ಹಾಸ್ಯ ಕೀಲೆಣ್ಣೆ ಅನ್ನುವ ಮಾತು ಕ್ಲೀಷೆಯೆನಿಸಿದರೂ ಸತ್ಯ. ನಮ್ಮ ನಡುವೆಯೇ ನಗುವ ಅನೇಕ ಅವಕಾಶಗಳು ಇದ್ದರೂ ಕಾಣದೆ ಕಳೆದು ಕೊಳ್ಳುತ್ತಿದ್ದೇವೆ. ಈ ದಿಸೆಯಲ್ಲಿ ವೈದ್ಯರ ಈ ಹಾಸ್ಯ ಸಂಕಲನ ಮುಖ್ಯವಾಗುತ್ತದೆ. ನವಿರಾಗಿರುವ ಮೂವತ್ತೊಂದು ಹಾಸ್ಯ ಲೇಖನಗಳು ಇಲ್ಲಿವೆ. ಕನ್ನಡದ ನಗೆ ಮಾಸಿಕ **ಅಪರಂಜಿಯಲ್ಲಿ** ಕಳೆದ ಸತ್ತು ವರ್ಷಗಳಿಂದ ಬರೆಯುತ್ತಿರುವ ವೈದ್ಯರ, ಈ ಸಂಕಲನ ಒಳ್ಳೆಯ ಹಾಸ್ಯಕ್ಕೆ ಉದಾಹರಣೆ. ಇಲ್ಲಿಯ ಆಡುನುಡಿಯ ಭಾಷೆ, ಧ್ವನಿಯ ಸ್ತರಗಳು, ಅರ್ಥವೈವಿಧ್ಯ, ಪರನಿಂದನೆಯಿಲ್ಲದ ಹಾಸ್ಯ - ಈ ಕೃತಿಯ ಲಕ್ಷಣಗಳು. ಹಾಸ್ಯ ಚಟಾಕಿಗಳನ್ನು ಸ್ಫೋಟಿಸುವ ಮೊದಲು ವೈದ್ಯರು ತಮ್ಮ ಉತ್ತಮ ಗದ್ಯದ ಮೂಲಕ ಸೂಕ್ತ ವಾತಾವರಣವನ್ನು ಸೃಷ್ಟಿಸುತ್ತಾರೆ. ಸ್ವ ವಿಮರ್ಶೆಗಳಿಗೆ ಅಣಿ ಮಾಡುವ ಹಾಸ್ಯ ಸಂಕಲನವಿದು.

ಸಿಕಾಡ (ಕವನ ಸಂಕಲನ) ಜಿ. ಕೆ. ರವೀಂದ್ರ ಕುಮಾರ್- ಪುಟ. ೯೬ - ರೂ ೩೫/- ಪ್ರಕಾಶಕರು, ಸಂಚಯ ೨೪ / ಡಿ, ೧೭ ನೇ ಮುಖ್ಯರಸ್ತೆ, ಮುನೇಶ್ವರ ಬ್ಲಾಕ್, ಜಿ. ಇ. ಎಫ್ ಅಂಚೆ. ಬೆಂಗಳೂರು -೫೬೦ ೦೨೬

ಜಿ. ಕೆ. ರವೀಂದ್ರ ಕುಮಾರ ಹೊಸ ಪೀಳಿಗೆಯ ಕವಿ. ನಲವತ್ತೊಂದು ಕವನಗಳ ಈ ಸಂಕಲನ ರವೀಂದ್ರರ ಚಿಂತನೆಯ ದಾಟಿಯನ್ನು ತಿಳಿಸುತ್ತದೆ. ಬದುಕಿನ ಏರಿಳಿತ ನೋವು ನಲಿವುಗಳು ಇವರ ಚಿಂತನೆಗೆ ಗ್ರಾಸ. ಶೀರ್ಷಿಕೆಯ ಕವನ **ಸಿಕಾಡ** ಇಲ್ಲಿಯ ಉತ್ತಮ ಕವನಗಳಲ್ಲಿ ಒಂದು. ಸಿಕಾಡ ಒಂದು ವಿಚಿತ್ರ ಕೀಟ. ಇದು ಭೂಮಿಯೊಳಗೆ ಹದಿನೇಳು ವರ್ಷಗಳ ಕಾಲ ಪೊರೆಯೊಳಗೆ ಅಡಗಿದ್ದು ನಂತರ ಪೊರೆಯೊಡೆದುಕೊಂಡು ಬಂದು, ಭೂಮಿಯ ಮೇಲೆ ಕೇವಲ ಒಂದು ತಿಂಗಳು ಮಾತ್ರ ಬದುಕುತ್ತದೆ. ದೀರ್ಘಕಾಲದವರೆಗೆ ನೆಲದೊಳಗಿನ ಯಾತನೆಯನ್ನು ಅನುಭವಿಸುವ ಸಿಕಾಡ ದಲಿತರ ಯಾತನೆಯ ಧ್ವನಿಯಾಗುತ್ತದೆ. ಈ ರೀತಿಯ ಕವನಗಳು ಈ ಸಂಕಲನದ ಪ್ರಾತಿನಿಧಿಕ ವಸ್ತು.

ಬಳಕೆದಾರರ ಮಾಹಿತಿ ಮಾಲೆ -ಸಂಪಾದಕ, ಕೆ. ಎನ್. ವೆಂಕಟಗಿರಿರಾವ್

ಬಳಕೆದಾರರ ಶಿಕ್ಷಣ ಮತ್ತು ಹಿತರಕ್ಷಣಾ ದತ್ತಿ (ರಿ)ಜೋಗ ರಸ್ತೆ, ಸಾಗರ.

ಸಾಗರದ ಬಳಕೆದಾರರ ವೇದಿಕೆ ಉಪಯುಕ್ತವಾದ ಐದು ಕಿರು ಹೊತ್ತಿಗೆಗಳನ್ನು ಹೊರ ತಂದಿದೆ. ದಿನನಿತ್ಯದ ವ್ಯವಹಾರದಲ್ಲಿ ಬಳಕೆದಾರನಿಗೆ ಎದುರಾಗುತ್ತಿರುವ ವಿವಿಧ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಲ್ಲಿ ಈ ಮಾಹಿತಿಗಳು ನೆರವಾಗುತ್ತವೆ. ಸರಿಯಾದ ಮಾಹಿತಿಗಳು ಇಲ್ಲದೆ ಬಳಕೆದಾರ

ತನ್ನ ವ್ಯವಹಾರದಲ್ಲಿ ಎಡವುತ್ತಿದ್ದಾನೆ. ಈ ಸಂದರ್ಭದಲ್ಲಿ ಬಳಕೆದಾರನ ಪರ ಸಾಮಾಜಿಕ ಜವಾಬ್ದಾರಿ ರೂಪಿಸುವಲ್ಲಿ ಈ ಪುಸ್ತಕಗಳು ಸಹಕರಿಸುತ್ತವೆ.

ಕಿರು ಹೊತ್ತಿಗೆಗಳ ವಿವರಗಳು ಈ ಕೆಳಗಿನಂತಿವೆ.

೧. **ಬಳಕೆದಾರ ನ್ಯಾಯಾಲಯಗಳ ಸ್ವಾರಸ್ಯಕರ ತೀರ್ಪುಗಳು** ಶೈಲೇಂದ್ರ ಬಂದಗದ್ದೆ - ಪುಟ. ೧೦, ರೂ. ೨/-

೨. **ದೂರವಾಣಿ** -ಕೆ. ವಿ. ಮಂಜುನಾಥ-ಪುಟ ೪೮. ರೂ. ೮/-

೩. **ಮಾರುಕಟ್ಟೆಯಲ್ಲಿ ಬಳಕೆದಾರ** -ಹೆಚ್. ಕೆ. ಅಕ್ಷಯ ಕುಮಾರ್-ಪುಟ ೮. ರೂ.೨/-

೪. **ವಿದ್ಯುತ್ ಬಿಲ್ಲುಗಳು ಸಮಸ್ಯೆ ಮತ್ತು ಪರಿಹಾರ** -ಕೆ. ಎನ್. ವೆಂಕಟಗಿರಿ ರಾವ್- ಪುಟ ೯. ರೂ.೨/-

೫. **ದೂರವಾಣಿ ಬಿಲ್ಲುಗಳು ಸಮಸ್ಯೆ ಮತ್ತು ಪರಿಹಾರ** -ಕೆ. ವಿ. ಮಂಜುನಾಥ- ಪುಟ ೯. ರೂ. ೨/-

ಅರಿವು ಬರಹ (ಖಾಸಗಿ ಪ್ರಸಾರಕ್ಕಾಗಿ ಇರುವ ಪತ್ರಿಕೆ)
ವಾರ್ಷಿಕ ರೂ ೭೫/-ಅರಿವು ಬರಹ ಟ್ರಸ್ಟ್ (ರಿ) ಕೊಣಾಜೆ. (ದ. ಕ.) ಅಂಚೆ. ಮಂಗಳಗಂಗೋತ್ರಿ

ಬಲವಾದ ಸಂಪಾದಕ ಮಂಡಳಿಯಿರುವ ಈ ಪತ್ರಿಕೆ ಮೂರನೆ ವರ್ಷಕ್ಕೆ ಕಾಲಿಡುತ್ತಿದೆ. ನಾಲ್ಕು ತಿಂಗಳಿಗೊಮ್ಮೆ ಹೊರ ಬರುತ್ತಿರುವ ಇದು, ಎಡ ಪಂಥೀಯ ವಿಚಾರಗಳಿಗೆ ಒಲುವು ತೋರಿಸಿದೆ. ಪ್ರಸ್ತುತ ಏಳನೇ ಸಂಚಿಕೆಯಲ್ಲಿ ಪ್ರಕಟವಾದ ಇಸ್ತವಾನ್ ಮೇಸೋರಾಸ್‌ರ ಸಂದರ್ಶನದಲ್ಲಿ ಎಡ ಪಂಥೀಯ ವಿಚಾರಗಳು ಹರಳಾಗಿ ಬಂದಿವೆ. ವಸಂತ ಬನ್ನಾಡಿಯವರು ಇದನ್ನು ಭಾಷಾಂತರಿಸಿದ್ದಾರೆ. ರಷ್ಯಾದಲ್ಲಿ ಸಮಾಜವಾದದ ಕಟ್ಟಡ ಕುಸಿದಿರುವುದು ಮಾರ್ಕ್ಸವಾದದ ಪತನ ಆಗಬೇಕಾಗಿಲ್ಲ. ಬಂಡವಾಳಶಾಹಿ ಎಂದಿಗೂ ತನ್ನ ಆಂತರಿಕ ಅಸಮತೋಲನ ಹಾಗೂ ವೈರುಧ್ಯವನ್ನು ನೀಗಿಸಿಕೊಳ್ಳಲಾರದೆಂಬ ಮಾರ್ಕ್ಸನ ನಿಲುವು ಇಂದಿಗೂ ಪ್ರಸ್ತುತವಾಗುತ್ತಿದೆ ಎಂಬ ಮೆಸೋರಾಸ್‌ನ ವಿಚಾರ ಇಲ್ಲಿದೆ. ಅಲ್ಲದೆ ಈ ಸಂಚಿಕೆಯಲ್ಲಿ ಡಾ. ಜೆ. ಎಸ್. ಸದಾನಂದ ಅವರ, ಮೀಸಲಾತಿಯ ಕುರಿತ ಬರವಣಿಗೆ, ಧನಾಗರೆಯವರ ರೈತ ಹೋರಾಟ ಲೇಖನ ಹಾಗೂ ಡಾ. ರಾಜಾರಾಮ ಹೆಗ್ಡೆ ಅನುವಾದಿಸಿರುವ ಹಿಂದೂ ಕೋಮುವಾದದ ಬಗೆಗಿನ ಎಂ. ಮುರುಳಿಧರನ್ ಅವರ ಲೇಖನ ಇದೆ.

ಪುಸ್ತಕ ಸ್ವೀಕಾರ

ಸಂಕಾನಕಟ್ಟೆಯ ಚಂದ್ರಿ (ನಾಟಕ) ರಂ. ಶಾ. ಪುಟ. ೧೦೭ -ರೂ. ೩೦/- ಮನೋಹರ ಗ್ರಂಥಮಾಲಾ ಪ್ರಕಾಶನ

ಸಂಬಂಧಗಳು ಮತ್ತು ಇತರ ಕತೆಗಳು. ಕೃಷ್ಣಮೂರ್ತಿ ಚಂದರ್ -ಪುಟ ೧೧೪, ರೂ ೨೫/-

ವೃಷಭಾಚಲದ ಕನಸು (ಕವನ ಸಂಕಲನ) ವಾಸುದೇವ ನಾಡಿಗ್ -ಪುಟ ೪೮, ರೂ. ೧೫/-

ಮುಖಗಳು (ಕತೆಗಳು) ಜಯಪ್ರಕಾಶ ಮಾವಿನಕುಳಿ -ಪುಟ ೧೩೦, ರೂ. ೪೦/-ಸ್ಫಟಿಕ ಪ್ರಕಾಶನ, ಕೋಡಂಗಲ್ಲು, ಮೂಡಬಿದಿರೆ (ದ. ಕ.)

ಉಲ್ಲಂಘನೆ (ಕಾದಂಬರಿ) ಕುಂದರನಾಡ ಪಾಟೀಲ್-ಪುಟ ೨೭೬, ರೂ. ೬೦/-ಸಿಂಚನ ಗ್ರಂಥ ಮಾಲೆ ಧಾರವಾಡ.

ಜಬಾಲ (ನಾಟಕ) ಪುಟ ೯೧, ರೂ. ೧೮/-ಕೌಂಡಿನ್ಯ ಪ್ರಕಾಶನ, ೪೨೮೭ ಶ್ರೀನಿಕೇತನ, ರೈಲ್ವೆಲೈನ್ ಪ್ಯಾರಲಲ್ ರಸ್ತೆ, ಸುಬ್ರಹ್ಮಣ್ಯ ನಗರ, ಬೆಂಗಳೂರ ೫೬೦ ೦೨೧

ಸುಗಮ ಸಂಗೀತ -ಸಿ. ಅಶ್ವತ್ಥ-ಪುಟ ೭೨, ರೂ. ೩೦/-ಸಹನ ಪ್ರಕಾಶನ-ನರಸಿಂಹರಾಜ ಕಾಲೋನಿ, ಬೆಂಗಳೂರು.

ಕಡಲು ಕಾಯುವದಿಲ್ಲ (ಕಾದಂಬರಿ) ನಾ. ಡಿಸೋಜ, ಗೀತಾ ಬುಕ್ ಹೌಸ್, ಪ್ರಕಾಶಕರು ಮೈಸೂರು.

ನಾಲ್ಕು ಸಾಲು (ಕಾವ್ಯ) ಎನ್. ಶ್ರೀನಿವಾಸ ಉಡುಪ -ಪುಟ ೪೦, ರೂ. ೧೦/- ಹೊಸೂಡಿ ಪ್ರಕಾಶನ, ಹಳೆ ಅಂಚೆ ಕಛೇರಿ ರಸ್ತೆ, ಶಿವಮೊಗ್ಗ.

ಮುತ್ಯಾಕ ಬಂದಿರಿ (ಕವನ ಸಂಕಲನ) ಈನಿಂಕಿ, ಪುಟ ೪೦ ರೂ. ೧೫ /- ಕವಿತಾ ಪ್ರಕಾಶನ, ಗುಡಿಕಟ್ಟೆ ೨೯೧ ೧೧೪

ಹೊಂಬಾಳೆ (ಕವನ ಸಂಕಲನ) ಎಚ್. ಎನ್. ಸೋಮಶೇಖರ ಪುಟ ೪೪ ,ರೂ. ೧೦/- ಮೈಲಾರೇಶ್ವರ ಪ್ರಕಾಶನ ನಾಲ್ಕನೆ ತಿರುವು ರಾಜೇಂದ್ರನಗರ ಶಿವಮೊಗ್ಗ ೫೭೭ ೨೦೧

ಕಚಗುಳಿ (ಕವನ ಸಂಕಲನ) ಎಚ್. ಎನ್ ಸೋಮಶೇಖರ್ ಪುಟ ೪೪, ರೂ. ೧೦/- ದೀಪಕ್ ಪ್ರಕಾಶನ, ಎಸ್.ಪಿ. ಎಮ್.ರಸ್ತೆ, ಶಿವಮೊಗ್ಗ ೫೭೭ ೨೦೨

ಅನಸು (ಕಲಾಚಿಂತನ) ಕೆ. ಆರ್. ನಾಗರಾಜ, ಪುಟ ೧೧೦, ರೂ. ೪೦/- ಕಲಾಮಂದಿರ, ೫ನೇ ಕ್ರಾಸ್ ಹುನಗುಂದನಗರ ಬೆಂಗಳೂರು ೫೬೦ ೦೧೯

ಗಾಂಧಿಜೀ ವಿರಚಿತ ವ್ಯಕ್ತಿಚಿತ್ರಗಳು ಮತ್ತು ಶ್ರದ್ಧಾಂಜಲಿಗಳು (ಲೇಖನ ಸಂಗ್ರಹ) ಯು.ಎಸ್. ಮೋಹನ್‌ರಾವ್ ಅನು. ಎಸ್. ಸೇತೂರಾವ್ ಪುಟ ೧೬೮, ರೂ. ೩೩/- ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಎ -೫ ಗ್ರೀನ್ ಪಾರ್ಕ್ ಹೊಸ ದೆಹಲಿ ೧೧೦ ೦೧೬

ರಾಮನ್ ಮತ್ತು ಅವರ ಪರಿಣಾಮ (ಜೀವನ ಚರಿತ್ರೆ) ಜಿ. ಎಚ್. ಕೇಸ್ವಾನಿ ಅನು: ಅಡ್ಯನಡ್ಕ ಕೃಷ್ಣಮೂರ್ತಿ ಪುಟ ೧೮೫, ರೂ. ೩೫/-ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ

ಭಾರತಿಯಾರ್ (ಕಥೆ) ಅನು : ಡಾ. ಎಸ್. ಕೇಶವಮೂರ್ತಿ ಪುಟ ೭೨, ರೂ. ೧೦/- ನ್ಯಾಷನಲ್‌ಬುಕ್‌ಟ್ರಸ್ಟ್, ಇಂಡಿಯಾ ಎ -೫, ಗ್ರೀನ್ ಪಾರ್ಕ್ ಹೊಸದೆಹಲಿ ೧೧೦ ೦೧೬

ಬಾಪು ಅವರ ಜೀವನದ ಪ್ರಬಂಧಗಳು (ನವಸಾಕ್ಷರತೆ ಸಾಹಿತ್ಯ ಮಾಲೆ) ಉಮಾಶಂಕರ ಜೋಶಿ, ಪುಟ ೩೨, ರೂ. ೬-೫೦ /- ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಭೂಕಂಪ ಮತ್ತು ಕಾಳ್ಗಿಚ್ಚು, (ನವಸಾಕ್ಷರತಾ ಸಾಹಿತ್ಯಮಾಲೆ,) ಮೂ : ರಸ್ಕಿನ್ ಬಾಂಡ್ ಅನು: ಈಶ್ವರ್ ಚಂದ್ರ ಪುಟ ೫೬, ರೂ. ೭-೫೦ /- ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಬ್ರೆಕ್ಟ್‌ನ (ಬರ್ಟೋಲ್ಟ್) ಮದರ್‌ಕರೇಜ್, (ನಾಟಕ) ಅನು : ಲಿಂಗದೇವರು ಹಳೇಮನೆ ಪುಟ ೧೨೭, ರೂ. ೩೫/- ಅರ್ಪಿತ ಪ್ರಕಾಶನ ೨೫೪ / ಎ ಮೊದಲ ಹಂತ ಹುಡ್ಕೋ, ಕುವೆಂಪು ನಗರ ಮೈಸೂರು ೫೭೦ ೦೨೩

ಏತೋಮುಂಡಾ ಯುದ್ಧವನ್ನು ಗೆದ್ದ (ನವಸಾಕ್ಷರತಾ ಸಾಹಿತ್ಯ ಮಾಲೆ,) ಮಹಾಶ್ವೇತಾದೇವಿ. ಅನು: ಗೊರೂರು ಶ್ರೀನಿವಾಸಮೂರ್ತಿ, ಪುಟ ೬೪ , ರೂ. ೮/- ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ನಮ್ಮ ಈ ಭೂಮಿ (ನವಸಾಕ್ಷರತಾ ಸಾಹಿತ್ಯ ಮಾಲೆ) ಲಯೀಕ್ ಫತೇ ಅಲಿ ಅನು : ಸುಬ್ರಹ್ಮಣ್ಯಂ ಪುಟ ೬೪. ರೂ. ೯/- ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಕೃತಿ ಸಂಪಾದನೆ ಕುರಿತು ಸಂಪಾದಕರು (ಲೇಖನ ಸಂಗ್ರಹ) ಅನು : ಬಿ. ಎನ್. ಗುರುಮೂರ್ತಿ ಪುಟ ೧೧೦, ರೂ. ೨೫ /- ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ

ಒಂದೂಕಾಲು ಸೇರು ಗೋಧಿ. ಸೂರ್ಯಕಾಂತಿ ಹೂಗಳು. ಬೆಟ್ಟಗಳು. ಪುಟ್ಟ ಅಜ್ಜಿ. ಒಂದು ರಾತ್ರಿಯ ಪ್ರಸಂಗ. ಮಾದಕ ಹುಟ್ಟುರೋಗ ಅಥವಾ ರೇಬಿಜ್ (ನವಸಾಕ್ಷರತಾ ಸಾಹಿತ್ಯ

ಮಾಲೆ) ಪ್ರೇಮ್‌ಚಂದ್ ಯಶಪಾಲ ಮಾರ್ಗರೇಟ್ ಭಟ್ಟ ಮಿಥಿಲೇಶ್ವರ ಉದಯವೀರ ಸಿಂಹ ರಾಣಾ ರೂ. ೧೦/- ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ

ಏಷ್ಯಾದ ಆಯ್ದ ಕಥೆಗಳು (ಕಥಾಸಂಗ್ರಹ) ಅನು :ಎಸ್. ಕೆ. ರಮಾದೇವಮ್ಮ ಪುಟ ೧೫೦ ರೂ. ೨೦/-ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ

ಸಂಗೀತ ನಾಟಕಗಳು (ಲೇಖನಮಾಲೆ) ಮಂಗಳಾಪುರ ನಾರಾಯಣ ಕಾಮತ್, ಪುಟ ೪೪೦ ರೂ. ೧೫೦/- ಕರ್ನಾಟಕ ಸಂಘ ಪುತ್ತೂರು ೫೭೪ ೨೦೧ ದ.ಕ.

ಸಮರ್ಥೆ (ಕಾದಂಬರಿ) ಶ್ರೀನಿವಾಸ ಉಡುಪ, ಪುಟ ೧೬೪ ರೂ. ೩೨ /- ಮುರುಳಿ ಪ್ರಕಾಶನ, ನಂ. ೭೬೧, ಅನೇ ಬ್ಲಕ್, ಕೋರಮಂಗಲ, ಬೆಂಗಳೂರು ೫೬೦ ೦೩೪

ನಲ್ಮೆಯ ನೆಲೆ (ಕಾದಂಬರಿ) ದೊಡ್ಡೇರಿ ವೆಂಕಟಗಿರಿರಾವ್, ಪುಟ ೧೯೭, ರೂ. ೩೦/- ಗೀತಾ ಬುಕ್ ಹೌಸ್, ಪ್ರಕಾಶಕರು ಮೈಸೂರು.

ನಮ್ಮ ಶುಭಾಶಯಗಳು

❄

ದಿ. ಸಂಡೂರ್ ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಲಿಮಿಟೆಡ್

(ನೊಂದಾಯಿತ ಕಛೇರಿ : ಲಕ್ಷ್ಮೀಪುರ, ಸಂಡೂರು - ೫೮೩ ೧೧೯)

೫೬, ಪ್ಯಾಲೇಸ್ ರಸ್ತೆ, ಬೆಂಗಳೂರು - ೫೬೦ ೦೫೨

ನಾಳಿನ ಭವಿಷ್ಯವದು
ಯಾರ ಮುಷ್ಠಿಯಲ್ಲಿ ಭದ್ರವಿದೆಯೊ

ಯಾರು,
ಭಾಷೆ ಸಂಸ್ಕೃತಿ ಹಾಗೂ ಕಲೆಗಳ ವಾರಸುದಾರರೊ

ಯಾರ ದನಿಯನ್ನ ಗ್ರಹಿಸಲು
ಎಲ್ಲ ಕಲೆಗಳು ಎಲ್ಲ ಸಾಹಿತ್ಯ ಹೆಣಗುತ್ತಿದೆಯೊ

ಅವರ ದನಿಯಲ್ಲಿ, ಅವರ ಪರಿಶ್ರಮದಲ್ಲಿ
ಅವರ ಮನಃ ಪೂರ್ತಿ ಆಶೀರ್ವಾದದಲ್ಲಿ
ನಡೆದಿದೆ ಮುಂದೆ ಮುಂದೆ
ದೇಶದ ಸಾಕ್ಷರತೆ ಆಂದೋಲನ

ನೀವೂ ಬನ್ನಿ ಕೈಗೂಡಿಸಿ
ನಿಮ್ಮದೇ ಕಾರ್ಯವಿದು ಸಾರ್ಥಕಗೊಳಿಸಿ.

ನಿಮ್ಮ ಜಿಲ್ಲೆಯ ಸಾಕ್ಷರತಾ ಸಮಿತಿಗಳನ್ನ ಸಂಪರ್ಕಿಸಿ. ಸಾಕ್ಷರತೆಗೆಂದು ಆಂದೋಲನ ಬೆಳೆಸಿ. ಜನಾಭಿಪ್ರಾಯ ಮೂಡಿಸುವಲ್ಲಿ ನಿಮ್ಮ ಪಾತ್ರ ಏನೆಂದು ಕಾರ್ಯಕರ್ತರಿಗೆ ಮನವರಿಕೆ ಮಾಡಿ. ಅಕ್ಷರ ಕಲಿಕೆಗೆ ಕಾರ್ಯಕರ್ತರ ಉತ್ಸಾಹ ಬೆಳೆಸಿ, ಪ್ರೇರಣೆ ಕೊಡಿ. ಅವರ ಆತ್ಮವಿಶ್ವಾಸ ಮೂಡಿಸಲಿಕ್ಕೆ ನಿಮಗಿಂತ ಮಿಗಿಲು ಮತ್ತಾರಿದ್ದಾರೆ ಹೇಳಿ ? ಮತ್ತೂ ಒಂದು ಹೆಜ್ಜೆ ಮುಂದಿಡಬಲ್ಲಿರಾದರೆ ಕಾರ್ಯಕರ್ತರಾಗಿ ಸಾಕ್ಷರತೆಯ ಸಂಘಟನೆ ಸೇರಿ. ಅಥವಾ ಪಾಠಗಳನ್ನ, ಪುಸ್ತಕಗಳನ್ನ ರಚಿಸಿ. ನಿಮ್ಮ ಶಕ್ತಿ ನಿಮಗೇ ಗೊತ್ತು. ಭಾಗವಹಿಸಿ.

ಸಾಕ್ಷರತೆಗಾಗಿ ರಾಷ್ಟ್ರೀಯ ಮಿಷನ್

ಸಾಕ್ಷರತೆ ನಿಮ್ಮದೇ ಕೆಲಸವೆಂದು ತಿಳಿಯಿರಿ
ಅಕ್ಷರ ಕ್ರಾಂತಿಯಲ್ಲಿ ಭಾಗವಹಿಸಿ.

ಬೆಂಗಳೂರಿನಲ್ಲಿ ಇಲ್ಲಿ ಉಳಿಯಿರಿ
ಹೊಟೆಲ್ ಮಹಾವೀರ್

* ನಗರದ ಮಧ್ಯಭಾಗದಲ್ಲಿದೆ
* ರೈಲು ಮತ್ತು ಬಸ್ ನಿಲ್ದಾಣಕ್ಕೆ ಎರಡೇ ನಿಮಿಷದ ದಾರಿ
* ಷಾಪಿಂಗ್ ಮತ್ತು ಮನೋರಂಜನ ಕೇಂದ್ರಗಳಿಗೆ ಸಮೀಪವಿದೆ.
* ಅಲಂಕರಿಸಿದ ಪಡಸಾಲೆಯಿದೆ
* ಸಿದ್ಧಗೊಳಿಸಿದ ಸುಂದರ ಕೋಣೆಗಳಿವೆ
* ಸ್ನಾನದ ಮನೆ ಸೇರಿರುವ ರೂಮುಗಳು, ದೂರವಾಣಿ, ಸಂಗೀತ, ಟಿ. ವಿ., ಸಿನೇಮಾ ಛಾನಲ್ಲುಗಳು, ಊಟ ಹಾಗೂ ಬಿಸಿನೀರಿನ ವ್ಯವಸ್ಥೆ ಹೊಂದಿದೆ.
* ಕ್ರೆಡಿಟ್ ಕಾರ್ಡ್ಸ್ : ವೀಸಾ ಮತ್ತು ಮಾಸ್ಟರ್ ಕಾರ್ಡ್ಸ್ ಕ್ಯಾನ್ ಕಾರ್ಡ್ಸ್ ಬಾಬ್ ಇಂಡಿಯಾ ಮತ್ತು ಡೈನರ್ಸ್ ಕಾರ್ಡ್

ದುಬಾರಿಯಾಗದೆ ಸ್ವಚ್ಛ ಸೌಲಭ್ಯಗಳು ಬೇಕಿದ್ದರೆ ನಮ್ಮಲ್ಲಿ ಬನ್ನಿ

ನಗರದ ರೈಲ್ವೇ ನಿಲ್ದಾಣದ ಹತ್ತಿರ, ಬೆಂಗಳೂರು -560 053

Ph:73670, 70741,70735, 70774, Grams : "NICESTAY"

TLX :0845 -3060- !C6 FAX: 080 269843

ನಮ್ಮ ಸದಸ್ಯರಾಗಿ, ಎಲ್ಲಾ ಲಾಭಗಳನ್ನು ಪಡೆದುಕೊಳ್ಳಿ.

With Best Compliments From :

Kavika

Product Range:

1. Power & Distribution Transformers upto 3000KVA, 33KV;
2. Completely Self Protected Transformers upto 315 kVA, 11kV ;
3. C.S.P Oil Immersed Circuit breaker for use in completely self protected transformers ;
4. L.V. Distribution Boxes ;
5. H.V. Metering Cubicle ;

Karnataka Vidyuth Karakhane Limited.

(A Karnataka Government Undertaking)

P.B.No. 2610 Mysore Road

Bangalore 560 026. India

Phone : 6612331, 6612337,601274 Telex : 0845-2704

280 ಕೋಟಿ ರೂ. ನಿಧಿ ತಳಹದಿ,
181 ಕೋಟಿ ರೂ. ಠೇವಣಿಗಳ ಗುರಿಸಾಧನೆ

ಕರ್ನಾಟಕ ರಾಜ್ಯದ ಅಪ್ರತಿಮ ಹಾಗೂ ರಾಷ್ಟ್ರದ ಖಾಸಗಿ ಹಣಕಾಸು ರಂಗದಲ್ಲಿ ಉನ್ನತ ಸ್ಥಾನಮಾನವನ್ನು ಪಡೆದಿರುವ ಐಸಿಡಿಎಸ್ ಲಿಮಿಟೆಡ್ 280 ಕೋಟಿ ರೂ. ನಿಧಿ ತಳಹದಿ ಹೊಂದಿದ್ದು 181 ಕೋಟಿ ರೂಪಾಯಿಗಳ ಠೇವಣಿ ಗುರಿದಾಟಿದ್ದು ಮುಂದಿನ ದಿನಗಳಲ್ಲಿ ಹೊಸ ಸಾಧನೆಗಳೊಂದಿಗೆ ನೂತನ ಗುರಿಗಳನ್ನು ಮುಟ್ಟಲು ಸಜ್ಜಾಗಿ ನಿಂತಿದೆ.

10 ಮಿಲಿಯನ್ ಡಾಲರ್ ಎಡಿಬಿ ಧನ ಸಹಾಯ

ಜನತೆಯ ಅಪಾರ ವಿಶ್ವಾಸಗಳಿಸಿರುವ ಐಸಿಡಿಎಸ್ ಲಿಮಿಟೆಡ್, ದೇಶ ಹಾಗೂ ವಿದೇಶಗಳ ಸಾರ್ವಜನಿಕ ಹಣಕಾಸು ಸಂಸ್ಥೆಗಳ ಅಪಾರ ಧನಸಹಾಯ ಪಡೆಯುತ್ತಿದ್ದು ಇದೀಗ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ 10 ಮಿಲಿಯನ್ ಡಾಲರ್‌ಗಳಷ್ಟು ಸಾಲವನ್ನು ಪಡೆದಿದೆ. ಇದು ಸಂಸ್ಥೆಯ ವ್ಯವಹಾರಗಳಿಗೆ ಸಹಕಾರಿಯಾಗಿ ಹೆಚ್ಚು ಲಾಭಾಂಶವನ್ನು ಗಳಿಸಲು ಅನುಕೂಲವಾಗಿದೆ.

ಐಸಿಡಿಎಸ್ ಲಿಮಿಟೆಡ್ ಈಗಾಗಲೇ ಐಸಿಐಸಿಐ, ಐಡಿಬಿಐ, ಐಎಫ್‌ಸಿಐ, ಎಸ್‌ಐಡಿಬಿಐ ಮುಂತಾದ ಸಂಸ್ಥೆಗಳಿಂದ ಹಣ ಸಹಾಯ ಪಡೆಯುತ್ತಿರುವುದು ಗಮನಾರ್ಹ ವಿಷಯವಾಗಿದೆ. ಇದು ಮೇಲೆ ಹೇಳಿರುವ ಸಂಸ್ಥೆಗಳು ಐಸಿಡಿಎಸ್ ಲಿಮಿಟೆಡ್‌ನಲ್ಲಿ ಇಟ್ಟಿರುವ ನಂಬಿಕೆಯನ್ನು ದೃಢೀಕರಿಸುತ್ತದೆ.

ಈಗಾಗಲೇ ಸಂಸ್ಥೆಯು ತನ್ನ ಠೇವಣಿ ಯೋಜನೆಗಳಿಗೆ ಕ್ರಿಸಿಲ್‌ರವರಿಂದ ಎಫ್‌ಎಎ+ಚಿಹ್ನೆಯನ್ನು ಗಳಿಸಿದ್ದು ಈ ಯೋಜನೆಗಳು ಹೆಚ್ಚು ಜನಪ್ರಿಯವಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಅತಿ ಸಮೀಪದ ಕಚೇರಿಯನ್ನು ಸಂಪರ್ಕಿಸಿರಿ.

ಐಸಿಡಿಎಸ್ ಲಿಮಿಟೆಡ್

ಠೇವಣಿ • ಹೈಯರ್ ಪರ್ಚೇಸ್ • ಲೀಸ್ • ಮರ್ಚಂಟ್ ಬ್ಯಾಂಕಿಂಗ್

ರಿಜಿಸ್ಟರ್ಡ್ ಕಚೇರಿ: ಸಿಂಡಿಕೇಟ್ ಹೌಸ್, ಮಣಿಪಾಲ–576 119

ಐಸಿಡಿಎಸ್ ಲಿ.–ಮುಂದುವರಿಯುತ್ತಿರುವ ವಿಶ್ವಾಸಾರ್ಹ ಸಂಪ್ರದಾಯ

ADSYNDICATE – MANIPAL

ನಿಮ್ಮ ಅತಿ ಸಮೀಪದ ಕಚೇರಿಗಳು: • ಸಿಂಡಿಕೇಟ್ ಹೌಸ್, ಮಣಿಪಾಲ – 576 119 ☎ 71121 (15 lines) • ಮಣಿಪಾಲ್ ಇಂಡಸ್ಟ್ರೀ ಬಿಲ್ಡಿಂಗ್, ಮಾರುಥಿ ವೀಥಿಕಾ ರೋಡ್, ಉಡುಪಿ – 576 101 ☎ 24937 • ಸಿಟಿ ಪಾಯಿಂಟ್, ಕೊಡಿಯಾಲ್‌ಬೈಲ್, ಮಂಗಳೂರು – 575 003 ☎ 441076 • 450/23, ಒಂದನೇ ಮಹಡಿ, ಗೋಪಾಲ್ ಟವರ್ಸ್, ಮುಖ್ಯ ರಸ್ತೆ, ಕಾರ್ಕಳ – 574 104 ☎ 32270 • ಕ್ಷಿತಿ ಕಾಂಪ್ಲೆಕ್ಸ್, ಜೆ.ಪಿ.ಎನ್. ರಸ್ತೆ, ಶಿವಮೊಗ್ಗ – 577 201 ☎ 44280 • 1 ಮತ್ತು 2 ಸಲಾರ್ ಚೇಂಬರ್ಸ್, ವುಡ್‌ಲ್ಯಾಂಡ್ ಥಿಯೇಟರ್ ಎದುರುಗಡೆ, ಮೈಸೂರು–ಊಟಿ ರಸ್ತೆ, ಮೈಸೂರು–570 001 ☎ 25068 • ಸೌತ್ ಬ್ಲಾಕ್, ಡಿಕ್ಕನ್‌ಸನ್ ರೋಡ್, ಮಣಿಪಾಲ ಸೆಂಟರ್, ಬೆಂಗಳೂರು – 560 042 ☎ 5584166, 5584167.

ವಿದ್ಯುತ್ ಅನ್ವೇಷಣೆಯಲ್ಲಿ ನಿಮಗಾಗಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯದ ಸಂಸ್ಥೆ)
ಶಕ್ತಿ ಭವನ, ೮೨, ರೇಸ್ ಕೋರ್ಸ್ ರಸ್ತೆ
ಬೆಂಗಳೂರು - ೫೬೦ ೦೦೧

✷

ಕರ್ನಾಟಕ ವಿದ್ಯುತ್ ನಿಗಮವು
ಆಕರ್ಷಕ ಬಡ್ಡಿ ದರದಲ್ಲಿ ಸಂಚಿತ / ಸಾವಧಿ
ಠೇವಣಿಗಳನ್ನು ಸ್ವೀಕರಿಸುತ್ತದೆ.

✷

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ದೂರವಾಣಿ : ೨೨೬೭೦೫೮, ೨೨೬೦೯೪೦, ೨೨೬೬೫೬೮

ಯಶಶ್ರೀ ಬುಕ್ ಸೆಲ್ಲರ್ಸ್

ಕೆ/ಆಫ್ ಧ್ರುವರಂಗ. ಅಂ. ಪೆ. ನಂ. ೧.
ಮುಖ್ಯ ರಸ್ತೆ, ಹುನಗುಂದ-೫೮೭ ೧೧೮
ವಿಜಾಪುರ ಜಿಲ್ಲೆ

ಸಂಕ್ರಮಣ ಪ್ರಕಾಶನ, ಅಕ್ಷರ ಪ್ರಕಾಶನ, ಪುಸ್ತಕ ಪ್ರಕಾಶನ, ಕಲ್ಯಾಣಿ ಪ್ರಕಾಶನ, ಸಂವಾದ ಪ್ರಕಾಶನ ಮತ್ತು ಕವಿ ಕಾವ್ಯ ಇವರ ಪ್ರಕಟಣೆಗಳ ಅಧಿಕೃತ ಮಾರಾಟಗಾರರು.

ಶುಭಾಶಯಗಳೊಂದಿಗೆ

ಅಕ್ಷರ ಪ್ರಿಂಟರ್ಸ್

ಆಫ್‌ಸೆಟ್ ಮತ್ತು ಲೆಟರ್‌ಪ್ರೆಸ್
ಮುದ್ರಕರು

❋

54 /4, ಪೋಲೀಸ್ ಸ್ಟೇಷನ್ ರಸ್ತೆ,
ಬಸವನಗುಡಿ
ಬೆಂಗಳೂರು - 560 004
ದೂರವಾಣಿ - 624082

ನಮ್ಮ ಹೆಮ್ಮೆಯ ನಾಡು - ಕರ್ನಾಟಕ

ಎರಡು ಸಾವಿರ ವರ್ಷಗಳ ಭವ್ಯ ಇತಿಹಾಸ, ಪರಂಪರೆಯ ಪುಣ್ಯ ಭೂಮಿ ಕರ್ನಾಟಕ. ಇದು ವಿವಿಧ ಮತ ಧರ್ಮಗಳ ಸಂಗಮ; ಉದಾತ್ತ ದಾರ್ಶನಿಕರ ಮತ್ತು ಮಹಾನ್ ಸಾಹಿತಿಗಳ ನೆಲೆವೀಡು. ರಾಷ್ಟ್ರದ ಸರ್ವತೋಮುಖ ಪ್ರಗತಿಗೆ ಕರ್ನಾಟಕದ ಕೊಡುಗೆ ಗಣನೀಯ. ರಾಷ್ಟ್ರ ನಿರ್ಮಾಣದ ಮಹತ್ಕಾರ್ಯವನ್ನು ಮುಂದುವರಿಸುವುದು ನಮ್ಮೆಲ್ಲರ ಪರಮ ಕರ್ತವ್ಯ.

ದಾರ್ಶನಿಕರು, ಸಮಾಜ ಸುಧಾರಕರು, ಸಾಹಿತಿಗಳು, ವಿಜ್ಞಾನಿಗಳು, ಕರ್ನಾಟಕವನ್ನು ಶ್ರೀಮಂತಗೊಳಿಸಿದ್ದಾರೆ.

"ಮಾನವ ಜಾತಿ ತಾನೊಂದೆ ವಲಂ"

-ಪಂಪ

"ಸರ್ವಜ್ಞನೆಂಬುವನು ಗರ್ವದಿಂದಾವನೆ ?
ಸರ್ವರೊಳೊಂದೊಂದು ನುಡಿಗಲಿತು
ವಿದ್ಯದ ಪರ್ವತವೆ ಆದ ಸರ್ವಜ್ಞ"

-ಸರ್ವಜ್ಞ.

"ಒಂದೇ ಕರ್ನಾಟಕ ಒಂದೇ,
ಇಂದೆ, ಹಿಂದೆ, ಮುಂದೆ,
ಒಂದೇ ಕರ್ನಾಟಕ ಒಂದೇ"

-ದ. ರಾ. ಬೇಂದ್ರೆ

"ಎಲ್ಲರೂ ದೇಶಾಭಿಮಾನದಿಂದ,
ಸೇವಾಪ್ರೇಮದಿಂದ ಕರ್ನಾಟಕ ಸಂಸ್ಕೃತಿ
ಭಾಷೆಗಳ ಸದಭಿಮಾನದಿಂದ, ಪ್ರೇರಿತರಾದರೆ
ಅವರು ಹೆಚ್ಚು ಹೆಚ್ಚು ಸುಖಿಗಳಾಗುವರು"

-ಸರ್. ಎಂ. ವಿಶ್ವೇಶ್ವರಯ್ಯ

"ಬರಿಯ ಚದರ ಮೈಲಿಗಳಲ್ತು ಕರ್ನಾಟಕದ
ದೇಶ ವಿಸ್ತೀರ್ಣಂ ನೆನೆ, ನೆನೆ
ಮನೋಮಯದ ಸಂಸ್ಕೃತಿಯ ಕೋಶ
ವಿಸ್ತೀರ್ಣಮಂ ಮರೆಯದಿರು ಚದರ
ಸಂವತ್ಸರದ ಶತಮಾನಗಳ ಕಾಲ
ವಿಸ್ತೀರ್ಣಮಂ ಪ್ರಾಣಮಯ ಭಾವಮಯ
ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ
ವಿಸ್ತೀರ್ಣಮಂ"

-ಕುವೆಂಪು.

"ಈಸಬೇಕು
ಇದ್ದು ಜೈಸಬೇಕು"

-ಪುರಂದರದಾಸರು

" ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಯಾವುದಯ್ಯ"

-ಕನಕದಾಸರು

"ಕಳಬೇಡ ಕೊಲಬೇಡ ಹುಸಿಯ
ನುಡಿಯಲು ಬೇಡ ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸ
ಬೇಡ ಇದಿರ ಹಳಿಯಲು ಬೇಡ ಇದೇ
ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರ -
ನೊಲಿಸುವ ಪರಿ"

-ಬಸವಣ್ಣ

"ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ
ಬಾಯೊಲ್ಸಾಕಿದ್ರೂನೆ
ಮೂಗ್ನಲ್ ಕನ್ನಡ ಪದಗಳ್ನಾಡ್ತೀನಿ
ನನ್ ಮನ್ಸನ್ ನೀಕಾಣೆ"

-ಜಿ. ಪಿ. ರಾಜರತ್ನಂ

"ಕರ್ನಾಟಕತ್ವವೆಂದರೆ ಕೇವಲ
ದೇಶಾಭಿಮಾನವಲ್ಲ
ಕೇವಲ ಭಾಷಾಭಿಮಾನವಲ್ಲ.
ಇವೆಲ್ಲವುಗಳನ್ನು ಮೀರಿದ ಇವೆಲ್ಲವುಗಳನ್ನು
ಒಳಗೊಂಡ ಪರಿಶುದ್ಧ ಭಾವನೆ"

-ಆಲೂರು ವೆಂಕಟರಾಯರು

"ಹಸಿರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ"

-ಚೆನ್ನವೀರ ಕಣವಿ.

ಕರ್ನಾಟಕ ವಾರ್ತೆ



ಕೆನರಾ ಬ್ಯಾಂಕ್

(ಭಾರತ ಸರ್ಕಾರದ ಉದ್ದಿಮೆ)

ಪ್ರಧಾನ ಕಚೇರಿ, ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಶುಭಾಶಯಗಳೊಂದಿಗೆ

ದಿ ಪ್ರಿಂಟರ್ಸ್ (ಮೈಸೂರು)ಲಿಮಿಟೆಡ್

೭೫, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು -೫೬೦ ೦೦೧

ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸುಧಾ, ಮಯೂರ
ಪತ್ರಿಕೆಗಳ ಮಾಲೀಕರು.

RUJUVATHU Registered with the Registrar of Newspapers of India R. No. 36592/81. Printed and Published by **KAVI-KAVYA**, Heggodu - 577 417. Editor U.R. Ananthamurthy.